


ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 9
ಫೆಬ್ರುವರಿ 23 - ಮಾರ್ಚ್ 1, 1998
ರೂ. 2.00

ಸಂಯುಕ್ತರಂಗ ಎಲ್ಲರಿಗಿಂತ ಮುಂದೆ
ಬಿ.ಜೆ.ಪಿ.ಯ ಅಬ್ಬರ ಮಾಯ

ಹನ್ನೆರಡನೇ ಲೋಕಸಭಾ ಚುನಾವಣೆಯ ಮೊದಲ ಸುತ್ತಿನಲ್ಲಿ ಫೆಬ್ರವರಿ 16 ರಂದು 222 ಕ್ಷೇತ್ರಗಳಲ್ಲಿ ಮತದಾನ ನಡೆಯಿತು. ವ್ಯಾಪಕ ಚುನಾವಣಾ ಅಕ್ರಮ ನಡೆದ ಬಿಹಾರವನ್ನು ಬಿಟ್ಟರೆ ದೇಶದ ಇತರೆಡೆ ಸುಮಾರಾಗಿ ಶಾಂತಿಯುತ ಮತದಾನ ನಡೆದಿದೆ- ಪ್ರತ್ಯೇಕತಾವಾದಿಗಳ ಹಿಂಸಾಚಾರದ ಬೆದರಿಕೆಯಿದ್ದ ಅಸ್ಸಾಂ, ತ್ರಿಪುರಗಳಲ್ಲೂ ಶಾಂತಿಯುತ ಮತದಾನ ನಡೆದಿದೆ.



ಈ ಮೊದಲ ಸುತ್ತಿನ ಮತದಾನದಿಂದಲೇ ಎರಡು ಅಂಶಗಳು ಸ್ಪಷ್ಟವಾಗಿವೆ ಎಂದು ಸಿ.ಪಿ.ಐ.(ಎಂ)ನ ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಮೊದಲನೆಯದಾಗಿ, ಮೂರು ಮೈತ್ರಿಕೂಟಗಳು ಬಹುಮತಕ್ಕಾಗಿ ಸ್ಪರ್ಧೆಯಲ್ಲಿದ್ದಾಗ್ಯೂ ಮತದಾನದ ಪ್ರಮಾಣ ಕಮ್ಮಿಯಾಗಿದೆ. ಸಿ.ಪಿ.ಐ.(ಎಂ) ನೇತೃತ್ವದ ತ್ರಿಪುರಾದಲ್ಲಿ ಮಾತ್ರವೇ 80-85 ಶೇಕಡಾ ಮತದಾನವಾಗಿದೆ. ಎರಡನೆಯದಾಗಿ, ತಾನು ಇನ್ನೇನು ಅಧಿಕಾರ ಹಿಡಿದೇ ಬಿಟ್ಟೆ ಎನ್ನುವಂತೆ ಪ್ರಚಾರ ಮಾಡುತ್ತಿದ್ದ ಬಿ.ಜೆ.ಪಿ.ಗೆ ಇದನ್ನು ತನ್ನ ಅತೀ ಬಲಿಷ್ಠ ನೆಲೆಯಾದ ಉತ್ತರ ಪ್ರದೇಶದಲ್ಲೂ ಕಾರ್ಯತಃ ತೋರಿಸಿಕೊಡಲಾಗಿಲ್ಲ. ಇದು ಅವರಿಗೊಂದು ದೊಡ್ಡ ಹಿನ್ನೆಡೆ- ಈ ಪ್ರವೃತ್ತಿ ಮುಂದಿನ ಸುತ್ತಿನ ಮತದಾನಗಳಲ್ಲೂ ಮುಂದುವರೆಯುವಂತೆ ಕಾಣುತ್ತಿದ್ದು ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ ಜಾತ್ಯಾತೀತ ರಾಜಕೀಯದ ರಕ್ಷಣೆ ಭಾರತೀಯ ರಾಜಕಾರಣದಲ್ಲಿ ಈಗ ಕೇಂದ್ರ ಸ್ಥಾನ ಪಡೆದಿದೆ ಎಂಬುದನ್ನು ತೋರಿಸುತ್ತದೆ ಎಂದು ಸುರ್ಜಿತ್ ಮೊದಲ ಸುತ್ತಿನ ಮತದಾನದ ನಂತರ ಪಕ್ಷದ ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆಯುತ್ತಾ ಹೇಳಿದ್ದಾರೆ.

ಪತ್ರಿಕೆಗಳಲ್ಲಿ ಏನೇ ಅಬ್ಬರ ಕಂಡುಬಂದರೂ ಹನ್ನೆರಡನೇ ಲೋಕಸಭಾ ಚುನಾವಣೆಗಳಲ್ಲಿ ಬಿ.ಜೆ.ಪಿ.ಯ ಶಕ್ತಿ ಹೆಚ್ಚುವುದಿಲ್ಲ, ಖಂಡಿತವಾಗಿ ಇಳಿಯುತ್ತದೆ. ಸೋನಿಯಾಗಾಂಧಿಯವರ ಪ್ರವೇಶದಿಂದಾಗಿ ಕಾಂಗ್ರೆಸ್‌ನ ಸಂಪೂರ್ಣ ಕುಸಿತ ತಪ್ಪಿದೆ- 'ಮುಚ್ಚುವುದರಲ್ಲಿದ್ದ ಅದರ ಅಂಗಡಿ ಈಗ ಮುಚ್ಚುವುದಿಲ್ಲ. ತೆರೆದಿರುತ್ತದೆ, ಅಷ್ಟೆ'. ಸಂಯುಕ್ತ ರಂಗ ಈ ಎರಡೂ ಕೂಟಗಳಿಗಿಂತ ಮುಂದಿದೆ. ಎಡ ಪಕ್ಷಗಳ ಬಲ 52-ರಿಂದ 60-65 ರವರೆಗೆ ಏರಲಿದೆ. ಸಿ.ಪಿ.ಐ.(ಎಂ) ಒಂದೇ ಕನಿಷ್ಟ 40 ಸ್ಥಾನಗಳನ್ನು ಪಡೆಯಲಿದೆ. ಇದು ದೇಶಾದ್ಯಂತ ಚುನಾವಣಾ ಪ್ರಚಾರ ನಡೆಸಿದ ಸ್ವಂತ ಅನುಭವದ ಮಾತು ಎಂದು ಈ ಮೊದಲು ಸುರ್ಜಿತ್‌ರವರು ಫೆಬ್ರವರಿ 15ರಂದು ಬೆಂಗಳೂರಿನಲ್ಲಿ ಒತ್ತಿ ಹೇಳಿದ್ದರು.

ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ರಾಜ್ಯವಾರಾಗಿ ಬಿ.ಜೆ.ಪಿ. ಗಳಿಸಬಹುದಾದ ಸ್ಥಾನಗಳನ್ನು ಲೆಕ್ಕ ಹಾಕುತ್ತಾ ಹೋದಾಗ ಪ್ರಶ್ನೆಗಳ ಸುರಿಮಳೆಗರೆಯುತ್ತಿದ್ದ ಪತ್ರಕರ್ತರೂ ಸುಮ್ಮನಾಗಬೇಕಾಯಿತು. ದಕ್ಷಿಣ ಭಾರತದಲ್ಲಿ ಕೇರಳದಲ್ಲಿ ಈ ಬಾರಿಯೂ ಬಿ.ಜೆ.ಪಿ.ಗೆ ಸೊನ್ನೆಯೇ. ತಮಿಳುನಾಡು ಮತ್ತು ಪಾಂಡಿಚೆರಿ ಹಾಗೂ ಆಂಧ್ರ ಪ್ರದೇಶಗಳಲ್ಲಿ ಹೆಚ್ಚೆಂದರೆ ಒಟ್ಟು ಎರಡು ಸ್ಥಾನ ದೊರೆಯಬಹುದು. ದಕ್ಷಿಣ ಭಾರತದಲ್ಲಿ ಒಟ್ಟಾಗಿ ಅತಿ ಹೆಚ್ಚೆಂದರೆ ಬಿ.ಜೆ.ಪಿ.ಗೆ ಹತ್ತು ಸ್ಥಾನಗಳು ದೊರೆಯಬಹುದಷ್ಟೆ. ಮಹಾರಾಷ್ಟ್ರದಲ್ಲಿ ಬಿ.ಜೆ.ಪಿ.-ಶಿವಸೇನೆಯ ಬಲ ಇಳಿಯಲಿದೆ. ಮಧ್ಯಪ್ರದೇಶ, ರಾಜಸ್ಥಾನಗಳಲ್ಲೂ, ಗುಜರಾತಿನಲ್ಲೂ ಈ ನಷ್ಟವನ್ನು ಭರಿಸಲು ಸಾಧ್ಯವಿಲ್ಲ, ಮಿತ್ರ ಪಕ್ಷಗಳೊಂದಿಗೆ ಅಧಿಕಾರದಲ್ಲಿರುವ ಪಂಜಾಬ್, ಹರ್ಯಾಣಗಳಲ್ಲೂ ಅದು ಏನೂ ನಿರೀಕ್ಷಿಸುವಂತಿಲ್ಲ. ಒರಿಸ್ಸಾದಲ್ಲಿ ಜನತಾದಳವನ್ನು ಅದು ಒಡೆಯುವಲ್ಲಿ ಯಶಸ್ವಿಯಾದರೂ ಇದರ ಫಲ ಕಾಂಗ್ರೆಸ್‌ಗೆ ದೊರೆಯಲಿದೆಯಷ್ಟೆ. ಪಶ್ಚಿಮ ಬಂಗಾಳದಲ್ಲಂತೂ ಕಳೆದ 20 ವರ್ಷಗಳಿಂದ ಅದರ ಪ್ರಯತ್ನ ಈಡೇರಿಲ್ಲ. ಮುಂದಿನ ಇಪ್ಪತ್ತು ವರ್ಷಗಳಲ್ಲೂ ಈಡೇರುವುದಿಲ್ಲ. ದಿಲ್ಲಿಯಲ್ಲಿಯೂ ಅದು ಸ್ಥಾನಗಳನ್ನು ಕಳೆದುಕೊಳ್ಳಲಿದೆ. ಜಮ್ಮು-ಕಾಶ್ಮೀರದಲ್ಲಿ ಹೆಚ್ಚೆಂದರೆ ಒಂದು ಸ್ಥಾನ ಗಳಿಸಬಹುದು. ಈಶಾನ್ಯ ಭಾರತದಲ್ಲೆಲ್ಲಾ ಒಟ್ಟಾಗಿ ಅದಕ್ಕೆ ಎರಡು ಸ್ಥಾನ ಸಿಕ್ಕರೇ ಹೆಚ್ಚು. ಇನ್ನು ಉಳಿಯುವುದು ದೇಶದ ಅತೀ ದೊಡ್ಡ ರಾಜ್ಯಗಳಾದ ಬಿಹಾರ ಮತ್ತು ಉತ್ತರ ಪ್ರದೇಶ. ದಕ್ಷಿಣ ಬಿಹಾರದಲ್ಲಿ ಜೆ.ಎಂ.ಎಂ. ಸಹಾಯದಿಂದ ಅದು 12 ಸ್ಥಾನ ಪಡೆದಿತ್ತು. ಇದರಲ್ಲಿ ಕನಿಷ್ಟ 6ನ್ನು ಈಗ ಕಳಕೊಳ್ಳಲಿದೆ. ಈ ನಷ್ಟವನ್ನು ಉತ್ತರ ಬಿಹಾರದಲ್ಲಿ ತುಂಬಿಸಲು ಸಾಧ್ಯವಾಗದು. ಅಲ್ಲದೆ ಆ ಭಾಗದಲ್ಲಿ ಮುಖ್ಯ ಸ್ಪರ್ಧೆಯಿರುವುದು ಜನತಾದಳ-ಎಡಪಕ್ಷಗಳ ಕೂಟ ಹಾಗೂ ಆರ್.ಜೆ.ಡಿ. ನಡುವೆ. ಸಮತಾ ಪಕ್ಷ ಮತ್ತು ಬಿ.ಜೆ.ಪಿ. ನಡುವಿನ ವೈರುಧ್ಯಗಳು ಮುಂಚೂಣಿಗೆ ಬರುತ್ತಿವೆ. ಉತ್ತರ ಪ್ರದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸೀಟುಗಳನ್ನು ಬಿ.ಜೆ.ಪಿ.ಯಿಂದ ಕಿತ್ತುಕೊಳ್ಳುವ ವಿಶ್ವಾಸವನ್ನು ಸಮಾಜವಾದಿ ಪಾರ್ಟಿ ಮುಖಂಡ ಮುಲಾಯಮ್ ಸಿಂಗ್ ಯಾದವ್ ವ್ಯಕ್ತಪಡಿಸಿದ್ದಾರೆ. ಅಲ್ಲಿಯೂ ಬಿ.ಜೆ.ಪಿ.ಯ ಸ್ಥಾನಗಳಲ್ಲಿ ಹೆಚ್ಚಳ ಸಾಧ್ಯವಿಲ್ಲ. ಹೀಗಿರುವಾಗ ಬಿ.ಜೆ.ಪಿ. ಮತ್ತು ಅದರ ಮಿತ್ರ ಪಕ್ಷಗಳು ಗಳಿಸಲಿವೆ ಎನ್ನುವ 200ಕ್ಕೂ ಹೆಚ್ಚು ಸ್ಥಾನಗಳು ಇನ್ನೆಲ್ಲಿಂದ ಬರಬೇಕು? ಒಂದು ಪತ್ರಿಕೆಯನ್ನು ಪ್ರತಿನಿಧಿಸುತ್ತಿದ್ದರೂ ಬಿ.ಜೆ.ಪಿ.ಯ ಪ್ರತಿನಿಧಿಯಂತೆ ವರ್ತಿಸುತ್ತಿದ್ದ ಪತ್ರಕರ್ತರೊಬ್ಬರು ಇದನ್ನು ಕೇಳಿದ ನಂತರ ಗೊಣಗುತ್ತಾ ಸುಮ್ಮನಾಗಬೇಕಾಯಿತು.

ಕಾಂಗ್ರೆಸ್ ನೇತೃತ್ವದ ಸರಕಾರವನ್ನು ಸಂಯುಕ್ತರಂಗ ಬೆಂಬಲಿಸುತ್ತದೆಯೇ ಎಂದು ಪತ್ರಕರ್ತರು ತಮ್ಮ ಮುಂದಿನ ಪ್ರಶ್ನೆ ಹಾಕಿದಾಗ "ನಾನು ಹಾಗೆ ಸಿಕ್ಕಿ ಬೀಳಲಾರೆ" ಎಂದ ಸುರ್ಜಿತ್ ನಾವೀಗ ಗೆಲ್ಲುವ ವಿಶ್ವಾಸ ಹೊಂದಿರುವ ಚುನಾವಣಾ ಸಮರ ದಲ್ಲಿದ್ದೇವೆ ಎಂದರು.

ಈ ಪತ್ರಿಕಾ ಸಮ್ಮೇಳನದ ಮೊದಲು ಸುರ್ಜಿತ್‌ರವರು ಪ್ರಗತಿಪರ ಲೇಖನಗಳ, ವಿಚಾರಗಳ ಪ್ರಕಟಣೆಯಲ್ಲಿ ತೊಡಗಿರುವ "ಅಧ್ಯಯನ" ಏರ್ಪಡಿಸಿದ್ದ 'ಪ್ರಸ್ತುತ ಪ್ರವೃತ್ತಿಗಳು ಮತ್ತು ಸವಾಲುಗಳು' ಎಂಬ ವಿಷಯದ ಮೇಲೆ ಭಾಷಣ ನೀಡುತ್ತಾ ಕಳೆದ ಐವತ್ತು ವರ್ಷಗಳ ಭಾರತದ ರಾಜಕೀಯ, ಆರ್ಥಿಕ ಬೆಳವಣಿಗೆಗಳ ಸಿಂಹಾವಲೋಕನ ನಡೆಸಿದರು. ಭಾರತ ಈಗ ರಾಜಕೀಯ, ಆರ್ಥಿಕ ಹಾಗೂ ನೈತಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದ ಅವರು ಇದಕ್ಕೆ ಕಾರಣಗಳನ್ನು ವಿವರಿಸಿದರು. ಭಾರತ ಒಂದು ವೈವಿಧ್ಯಮಯ ದೇಶ. ಈ ವೈವಿಧ್ಯತೆ ಎರಡು ರೀತಿಯದ್ದು. ಒಂದು ವಿಭಿನ್ನ ಧರ್ಮಾವಲಂಬಿಗಳಿರುವ ದೇಶ ಭಾರತ. ಇನ್ನೊಂದು ವಿಭಿನ್ನ ಭಾಷಾ-ಸಾಂಸ್ಕೃತಿಕ ಗುಂಪುಗಳಿರುವ ದೇಶವಿದು. ಪ್ರತಿಯೊಂದೂ ತನ್ನದೇ ಆದ ಶ್ರೀಮಂತ ಭಾಷೆ, ಸಂಸ್ಕೃತಿಯಿರುವ ಗುಂಪು. ಜಾತ್ಯಾತೀತತೆ ಹಾಗೂ ಒಕ್ಕೂಟ ತತ್ವವೇ ಈ ವೈವಿಧ್ಯತೆಯಲ್ಲಿ ಏಕತೆಯನ್ನು ಪೋಣಿಸಬಲ್ಲ ಅಂಶಗಳು. ರಾಷ್ಟ್ರೀಯ ಆಂದೋಲನಕ್ಕೆ ನೇತೃತ್ವ ನೀಡಿದ ಕಾಂಗ್ರೆಸ್ ಪಕ್ಷಕ್ಕೆ ಈಗ ಇದು ಸಾಧ್ಯವಿಲ್ಲ. ಬಿ.ಜೆ.ಪಿ.ಯಂತೂ ಮೊದಲಿಂದಲೂ ಈ ತತ್ವಗಳಿಗೆ ವಿರುದ್ಧವಾಗಿರುವಂತದ್ದು.

"ಬಿ.ಜೆ.ಪಿ ಅಧಿಕಾರಕ್ಕೆ ಬರಬಾರದು

ಪುಟ 8 ನೋಡಿ

ಸಂಯುಕ್ತ ರಂಗವನ್ನೇ ಏಕೆ ಆರಿಸಬೇಕು?

ಪಿ.ರಾಮಚಂದ್ರ ರಾವ್

ಕೋಲಾರ(ಮೀಸಲು) ಕ್ಷೇತ್ರದಲ್ಲಿ ಸಿ.ಪಿ.ಐ.(ಎಂ) ಪಕ್ಷದ ಅಭ್ಯರ್ಥಿ ಕಾ॥ ನಾರಾಯಣಸ್ವಾಮಿ ಇವರಿಗೆ ಆ ಕ್ಷೇತ್ರದ ಮತದಾರ ಬಂಧುಗಳು ಮತವೀಯಲು ಸಿ.ಪಿ.ಐ.(ಎಂ)ಕರ್ನಾಟಕ ರಾಜ್ಯ ಸಮಿತಿ ವಿನಂತಿಸುತ್ತದೆ. ಹಾಗೆಯೇ ಕರ್ನಾಟಕ ರಾಜ್ಯದ ಇತರ ಕ್ಷೇತ್ರಗಳಲ್ಲಿ ಫೆಬ್ರವರಿ 22 ರಂದು ನಡೆಯಲಿರುವ ಚುನಾವಣೆಯಲ್ಲಿ ಸಂಯುಕ್ತರಂಗದ ಮೂಲಕ ಮತವೀಯಬೇಕೆಂದು ವಿನಂತಿಸುತ್ತದೆ.

ಈ ಚುನಾವಣೆಯಲ್ಲಿ ಬಿ.ಜೆ.ಪಿ. ಕೂಟಕ್ಕೆ ಯಾಕೆ ಮತವೀಯಬಾರದು ಎಂಬುದಕ್ಕೆ ನಮ್ಮ ಪಕ್ಷದ ವಾದಗಳು ಈ ರೀತಿ ಇವೆ - ಬಿ.ಜೆ.ಪಿ. 1998ರ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರದ ಜನತೆಯ ಮುಂದೆ ಇರಿಸಿದ "ಚುನಾವಣೆ ಪ್ರಣಾಳಿಕೆ"ಯ ಮುಖ್ಯಾಂಶಗಳು ಈ ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಮಾರಕವಾಗುವುದರಲ್ಲಿ ಏನೂ ಸಂಶಯವಿಲ್ಲ. ದೇಶದ ಬಹುಭಾಗದ ಬಡಜನರ ಜೀವನ ಸ್ಥಿತಿ ಉತ್ತಮ ಗೊಳಿಸುವುದಕ್ಕೆ ಅದು ಮಾರಕವಾಗಿದೆ. ಬಿ.ಜೆ.ಪಿ.ಯವರು 'ನಮಗೆ ಕೇಂದ್ರದಲ್ಲಿ ಅಧಿಕಾರ ಬಂದರೆ ನಾವು ಅಣುಬಾಂಬುಗಳನ್ನು ತಯಾರಿಸುತ್ತೇವೆ' ಎಂದಿದ್ದಾರೆ. ಒಂದು ಅಣು ಬಾಂಬು ತಯಾರಿಕೆಗೆ ಸುಮಾರು 1000 ಕೋಟಿ ಹಣ ಖರ್ಚಾಗುವುದು. ಆ ಅಣುಬಾಂಬುಗಳನ್ನು ತಯಾರಿಸುವುದಕ್ಕೆ ಹತ್ತು ಹಲವು ಸಾವಿರ ಕೋಟಿ ಹಣ ಖರ್ಚು ಮಾಡುವುದೆಂದರೆ ದೇಶದ ಬಡಜನರ ಜೀವನ ಸ್ಥಿತಿಯನ್ನು ಇನ್ನೂ ಹಾಳುಗೆಡಹುವುದು ಎಂದರ್ಥ. ವಿವಾದಾಸ್ಪದ ಜಾಗದಲ್ಲಿ ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ಶ್ರೀರಾಮ ಮಂದಿರ ಕಟ್ಟುತ್ತೇವೆ ಎಂದಿದ್ದಾರೆ. ಅಂದರೆ, ದೇಶದ 13 ಕೋಟಿ ಮುಸ್ಲಿಂರಲ್ಲಿ ಹಾಗೂ 7 ಕೋಟಿ ಇತರ ಅಲ್ಪಸಂಖ್ಯಾತರ ನಂಬಿಕೆ ಮತ್ತು ಸಂಸ್ಕೃತಿಯ ಮೇಲೆ ಧಾಳಿ ಎಂದರ್ಥ. ಅವರಲ್ಲಿ ಅತೃಪ್ತಿ ಉಂಟುಮಾಡಿ, ದ್ವೇಷ ಉಂಟುಮಾಡಿ ಆಡಳಿತ ಮಾಡುವುದೆಂದರೆ ದೇಶದ ಹಿತಗಳನ್ನು ಕಡೆಗಣಿಸುವುದೆಂದರ್ಥವಲ್ಲದೆ ಬೇರೆ ಇಲ್ಲ. ಹಾಗೆಯೇ ಕಾಶ್ಮೀರದ ಜನತೆಗೆ ಕಾಶ್ಮೀರ ಭಾರತಕ್ಕೆ ಸೇರ್ಪಡೆಯಾಗುವಾಗ ಭಾರತದ ಲೋಕಸಭೆ ಕೊಟ್ಟ 370 ಸೆಕ್ಷನ್ನಿನ ರಕ್ಷಣೆಯನ್ನು ತೆಗೆದು ಬಿಡುವುದೆಂದರೆ, ಕಾಶ್ಮೀರದ ಭೂಮಿಯನ್ನು (ತೀವ್ರ ಭೂಸುಧಾರಣೆಗಳ ಮೂಲಕ ರೈತ-ಕೃಷಿಕೂಲಿಕಾರರಿಗೆ ಹಂಚಿದ ಭೂಮಿಯನ್ನು) ಭಾರತ ಮತ್ತು ವಿದೇಶಿ ಹಣವಂತರಿಗೆ ವಿಪರೀತ ಕ್ರಯಕ್ಕೆ ಪಡೆದುಕೊಳ್ಳಲು 'ಮುಕ್ತ ಅವಕಾಶ' ಕೊಟ್ಟು ಈಗಾಗಲೇ ಬಡತನದ ಬೇಗೆಯಲ್ಲಿ ಬಿದ್ದಿರುವ ಕಾಶ್ಮೀರದ ಜನತೆಯನ್ನು ಬಡತನದ ಬೆಂಕಿಗೆ ತಳ್ಳುವುದು ಎಂದರ್ಥ. ಬೀದಿಭಿಕಾರಿಗಳನ್ನಾಗಿ ಮಾಡುವುದೆಂದರ್ಥ. ಅದೇ ವೇಳೆ, "ವೈವಿಧ್ಯತೆಯಲ್ಲಿ ಏಕತೆ"ಯನ್ನು ಜಗತ್ತಿಗೆ ಸಾರುತ್ತಿರುವ ಭಾರತದಲ್ಲಿ "ಹಿಂದುತ್ವ" ಏಕ ಸಂಸ್ಕೃತಿಯ 'ಸಂಸ್ಕಾರ'ವನ್ನು ಎಲ್ಲರ ಮೇಲೆ ಹೇರುವುದೆಂದರೆ-ಸಾಮಾನ್ಯ ಸಿವಿಲ್ ಕೋಡ್ ಎಂದರೆ ಮತ್ತೇನು? ದೇಶದ ಸಂಸ್ಕೃತಿಯನ್ನೇ 5000 ವರ್ಷಗಳಿಂದ ಸಾರುತ್ತಾ ಬಂದ 'ಸಹನೆ'ಯ ನಿಲುಮೆಗೆ ಕೊಡಲಿ ಏಟು ಕೊಟ್ಟಂತೆ.

ಬಿ.ಜೆ.ಪಿಯ ನಿಜವಾದ ರೂಪ ಇದು. ಭಾಜಪವು ಅಟಲ್ ಬಿಹಾರಿಯವರು ತಮ್ಮ ಪ್ರಧಾನಿಗಳು ಎಂದು ಹೇಳಿ ಭಾರತದ ಜನತೆಯನ್ನು ಮೋಸಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಶ್ರೀ ರಾಮಕೃಷ್ಣ ಹೆಗ್ಡೆ, ಜಾರ್ಜ್ ಫರ್ನಾಂಡೀಸ್ ಮೊದಲಾದವರಿಗೆ ನಿಜವಾದ ಬಿ.ಜೆ.ಪಿ. ಕಾರ್ಯಕ್ರಮ ತಿಳಿದಿದ್ದರೂ ಈ ಚುನಾವಣೆಯಲ್ಲಿ ಬೇಜವಾಬ್ದಾರಿಯಿಂದ ಬಿ.ಜೆ.ಪಿ. ಕುದುರೆಗೆ ಬೆಂಬಲ ವ್ಯಕ್ತಪಡಿಸಿ ದೇಶದ ಮುಗ್ಧ ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ.

ಇನ್ನು, ಕಾಂಗ್ರೆಸ್ ಮತ್ತು ಅವರ ಮಿತ್ರ ಪಕ್ಷಗಳ ಕೂಟವನ್ನು ಮತದಾರರು 1996ರ ಚುನಾವಣೆಯಲ್ಲಿಯೇ ತಿರಸ್ಕರಿಸಿದ್ದಾರೆ. ಅವರ ನೂತನ ಆರ್ಥಿಕ ನೀತಿಯಿಂದ ದೇಶದ ಬಹುಭಾಗದ ಜನತೆ ತೀವ್ರ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ತಮ್ಮ ಭವಿಷ್ಯದ ಬಗ್ಗೆ ಎಲ್ಲಾ ಆಸೆಗಳನ್ನು ಕಳೆದು ಕೊಂಡಿದ್ದಾರೆ. ಅವರ ಭ್ರಷ್ಟಾಚಾರದ 'ಹಿಮಾಲಯ ಶಿಖರದ ಪ್ರಮಾಣ' ಎಲ್ಲಾ ಮತದಾರರನ್ನು ದಿಗ್ಭ್ರಮೆಗೊಳಿಸಿದೆ. ಅವರು ಕೋಮುವಾದಿಗಳ ಜೊತೆಗೂಡಿ ಇಡೀ ದೇಶದ ಜನತೆಗೆ ಹಾಗೂ ಭಾರತದ ಜಾತ್ಯಾತೀತ ಸಂವಿಧಾನಕ್ಕೆ ಮಾಡಿದ ದ್ರೋಹವನ್ನು ಜನತೆ ಮರೆಯುವುದು ಸಾಧ್ಯವಿಲ್ಲ. ಸೋನಿಯಾ ಗಾಂಧಿ - 7 ವರ್ಷಗಳವರೆಗೆ ವನವಾಸದಲ್ಲಿದ್ದ ರಾಜೀವ್ ಗಾಂಧಿಯ ಪತ್ನಿ - ಇದೀಗ ಶಿಥಿಲಗೊಳ್ಳುತ್ತಿರುವ ಕಾಂಗ್ರೆಸ್ಸಿನ ಏಕ ಮಾತ್ರ ಪ್ರಚಾರಕಳು. ಆಕೆ ಕೊಡುವ ಭರವಸೆಗೆ ಕಾಂಗ್ರೆಸ್ ಇಡೀ ದೇಶದಲ್ಲಿ ಪುನಃ ಆಡಳಿತ ವಹಿಸಿಕೊಳ್ಳುವುದೆಂಬ ಮಾತಿಗೆ ಏನೂ ಅರ್ಥವಿಲ್ಲ. ಆದ ಕಾರಣ ಈ ಮಹಾ ಚುನಾವಣೆಯಲ್ಲಿ 18 ತಿಂಗಳುಗಳ ಕಾಲದಲ್ಲಿ ಸಂಯುಕ್ತ ರಂಗವು ದೇಶದ ಜನತೆಗೆ ಕೊಟ್ಟ ಆಡಳಿತೆಯ ಮುಖ್ಯ ಸಾಧನೆಗಳನ್ನು ನೆನೆದು ಸಂಯುಕ್ತ ರಂಗದ ಪಕ್ಷಗಳಿಗೆ ಮತದಾರರು

ಪುಟ 8 ನೋಡಿ



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (೧೭೫೭ -೧೯೪೭) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಡಿಸೆಂಬರ್ 1936 ರಲ್ಲಿ ಫೈಜ್‌ಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರೂ ಅಧ್ಯಕ್ಷ ಭಾಷಣ ಮಾಡುತ್ತಾ 'ನಮ್ಮ ಮುಂದಿರುವ ನಿಜವಾದ ಕರ್ತವ್ಯವೆಂದರೆ ದೇಶದಲ್ಲಿರುವ ಎಲ್ಲಾ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳ ಒಂದು ಸಂಯುಕ್ತ ರಂಗವನ್ನು ಕಟ್ಟುವುದು...... ಸಂಘಟಿತ ಕಾರ್ಮಿಕರು ಮತ್ತು ರೈತರ ಭಾಗವಹಿಸುವಿಕೆಯಿಂದ ಈ ರಂಗದ ಬಲ ಹೆಚ್ಚುತ್ತದೆ, ಇದನ್ನು ಸ್ವಾಗತಿಸಬೇಕು' ಎಂದರು.

'ವಿಶ್ವ ಎರಡು ದೊಡ್ಡ ಗುಂಪುಗಳಾಗಿ ಒಡೆದಿದೆ. ಒಂದೆಡೆ ಸಾಮ್ರಾಜ್ಯಶಾಹಿಗಳು ಮತ್ತು ಫ್ಯಾಸಿಸ್ಟರು - ಇನ್ನೊಂದೆಡೆ ಸಮಾಜವಾದಿಗಳು ಮತ್ತು ರಾಷ್ಟ್ರೀಯವಾದಿಗಳು. ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರಮಿಸುವ ನಾವು ಯಾರಕಡೆ? ಅನಿವಾರ್ಯವಾಗಿ ನಾವು ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ನಿಂತಿರುವ ಪ್ರಗತಿಪರ ಶಕ್ತಿಗಳ ಜತೆಗೆ. ನಾವು ನಿರ್ದಿಷ್ಟವಾಗಿ ಆಧುನಿಕ ಜಗತ್ತಿನ ಅತ್ಯಂತ ಹಳೆಯ ಹಾಗೂ ವ್ಯಾಪಕ ಸಾಮ್ರಾಜ್ಯಶಾಹಿಯನ್ನು ಎದುರಿಸಬೇಕಾಗಿದೆ ತಾನೇ' ಎಂದರು ಜವಾಹರಲಾಲ್ ನೆಹರೂ.


ಜವಾಹರಲಾಲ್ ನೆಹರೂರವರ ಈ ಪ್ರಖ್ಯಾತ ಭಾಷಣ ಆಗ ಹಿಟ್ಲರ್ ಅಧಿಕಾರಕ್ಕೇರಿದ ನಂತರ ಜಗತ್ತಿನಲ್ಲಿ ವ್ಯಾಪಕವಾಗುತ್ತಿದ್ದ ಫ್ಯಾಸಿಸ್ಟ್ ವಿರೋಧಿ, ಯುದ್ಧ-ವಿರೋಧಿ ಪ್ರಜ್ಞೆಯ ಪ್ರತಿಫಲನವಾಗಿತ್ತು. ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ 7ನೇ ಮಹಾಧಿವೇಶನದಲ್ಲಿ ಫ್ಯಾಸಿಸಂ ಕುರಿತ ದಿಮಿತ್ರೊವ್ ವಿಶ್ಲೇಷಣೆ ಹಾಗೂ ಭಾರತದ ಸಾಮ್ರಾಜ್ಯಶಾಹಿ-ವಿರೋಧಿ ಸಮರದ ಕುರಿತಂತೆ ಮೀರಟ್ ಪಿತೂರಿಯಲ್ಲಿ ಆಪಾದಿತರಾಗಿದ್ದ ಬ್ರಿಟಿಶ್ ಕಮ್ಯುನಿಸ್ಟರಾದ ಬ್ರಾಡ್ಲಿ ಮತ್ತು ರಜನಿ ಪಾಮೆ ದತ್‌ರ ಜಂಟಿ ಪ್ರಬಂಧ ಅದಾಗಲೇ ಪ್ರಕಟವಾಗಿದ್ದವು.

ಫೈಜ್‌ಪುರ ಕಾಂಗ್ರೆಸ್ ಅಧಿವೇಶನದಲ್ಲಿ ರೈತರ, ಕಾರ್ಮಿಕರ ಸಂಘಟನೆಗಳನ್ನು ಸಾಮೂಹಿಕವಾಗಿ ಕಾಂಗ್ರೆಸ್ಸಿಗೆ ಸಂಬದ್ಧಗೊಳಿಸಬೇಕೆಂಬ ಅಧ್ಯಕ್ಷ ಜವಾಹರಲಾಲ್ ನೆಹರೂರವರ ನಿರ್ಣಯ 35-16 ಮತಗಳಿಂದ ತಿರಸ್ಕೃತವಾಯಿತು. 1935 ರ ಭಾರತ ಸರ್ಕಾರ ಶಾಸನದ ಪ್ರಕಾರ ಅಧಿಕಾರದ ಹುದ್ದೆಗಳನ್ನು ಸ್ವೀಕರಿಸುವ ಬಗ್ಗೆ ಅಧಿವೇಶನ ಒಂದು ನಿಲುವು ತಳೆಯಲಿಲ್ಲ. ಆದರೆ ಅಧಿಕಾರ ಸ್ವೀಕರಿಸುವ ಪ್ರವೃತ್ತಿ ಪ್ರಬಲವಾಗುತ್ತಿರುವುದು ಕಂಡು ಬಂದಿತ್ತು - ನೆಹರೂ ತಮ್ಮ ಅಧ್ಯಕ್ಷ ಭಾಷಣದಲ್ಲಿ ಅದನ್ನು ವಿರೋಧಿಸಿದ್ದರೂ ಕೂಡಾ.

1937 ರಲ್ಲಿ ಚುನಾವಣೆಗಳು ನಡೆದವು. ಕಾಂಗ್ರೆಸ್ 7 ಪ್ರಾಂತ್ಯಗಳಲ್ಲಿ ಗವರ್ನರುಗಳ ತಮ್ಮ ವಿಶೇಷ ಅಧಿಕಾರಗಳನ್ನು ಸೀಮಿತವಾಗಿ ಬಳಸುವರೆಂಬ ಭರವಸೆ ಪಡೆದು ಪ್ರಾಂತೀಯ ಮಂತ್ರಿಮಂಡಲಗಳನ್ನು ರಚಿಸಿತು. ಯು.ಪಿ., ಬಿಹಾರ, ಒರಿಸ್ಸಾ, ಮಧ್ಯಪ್ರಾಂತ್ಯ, ಮುಂಬೈ ಮತ್ತು ಮದ್ರಾಸ್‌ಗಳಲ್ಲಿ, ಸ್ವಲ್ಪ ನಂತರ ವಾಯುವ್ಯ ಪ್ರಾಂತ್ಯದಲ್ಲಿ ಹಾಗೂ ಅಸ್ಸಾಂನಲ್ಲಿ ಕಾಂಗ್ರೆಸ್ ಸರಕಾರಗಳು ರಚನೆಗೊಂಡವು. ಮಾರ್ಚ್ 1931 ರಲ್ಲಿ ಸಿಂಧ್ ಪ್ರಾಂತ್ಯದಲ್ಲಿ ಕಾಂಗ್ರೆಸ್ ಬೆಂಬಲದಿಂದ ಅಲ್ಲಾ ಭಕ್ಷ್ ಸರಕಾರ ರಚಿಸಿದರೆ ಬಂಗಾಳದಲ್ಲಿ ಕೃಷಕ್ ಪ್ರಜಾ ಪಾರ್ಟಿಯ ಫಜ್ಲುಲ್ ಹಕ್ ಹಾಗೂ ಪಂಜಾಬಿನಲ್ಲಿ ಯುನಿಯನಿಸ್ಟ್ ಪಾರ್ಟಿಯ ಸಿಕಂದರ್ ಹಯಾತ್ ಖಾನ್ ಪ್ರಾಂತೀಯ ಸರಕಾರ ರಚಿಸಿದರು.

ಚುನಾಯಿತ ಸರಕಾರಗಳು ಎಲ್ಲಾ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡುತ್ತಾರೆಂಬುದು ಜನರ ನಿರೀಕ್ಷೆಯಾಗಿತ್ತು. ಇದಕ್ಕನುಗುಣವಾಗಿ ಫೆಬ್ರವರಿ 1938 ರಲ್ಲಿ ಯು.ಪಿ., ಬಿಹಾರದ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ನೀಡಿ ಭಾರೀ ಜನಬೆಂಬಲ ಗಳಿಸಿದವು. ಅಂಡಮಾನ್ ಜೈಲಿನ ಕೈದಿಗಳು ಉಪವಾಸ ಮುಷ್ಕರ ಆರಂಭಿಸಿದರು. ದೇಶಾದ್ಯಂತ ಇದಕ್ಕೆ ಬೆಂಬಲ ದೊರೆಯಿತು. 3000 ರಾಜಕೀಯ ಕೈದಿಗಳು ಈ ಮುಷ್ಕರದಲ್ಲಿ ಪಾಲ್ಗೊಂಡರು. ಉಪವಾಸದ 37ನೇ ದಿನ ಬ್ರಿಟಿಶ್ ಸರಕಾರ ಮಣಿಯಿತು. ಅಂಡಮಾನಿನಲ್ಲಿದ್ದ ಕೈದಿಗಳನ್ನು ಭಾರತಕ್ಕೆ ತರಲಾಯಿತು, ವೈಯಕ್ತಿಕ ಪರೀಕ್ಷಣೆಯ ನಂತರ ಅವರೆಲ್ಲರ ಬಿಡುಗಡೆಯಾಗುತ್ತದೆಂದು ಗವರ್ನರ್ ಆಶ್ವಾಸನೆ ನೀಡಿದರು.

ಕಾಂಗ್ರೆಸ್ ಮಂತ್ರಿಮಂಡಲಗಳು ಕೆಲವು ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಿದರು, ಕೆಲವು ಸ್ವೇಚ್ಛಾಚಾರದ ಆಡಳಿತ ಕ್ರಮಗಳನ್ನು ಬದಲಿಸಿದರು. ಆರಂಭದಲ್ಲಿ ರೈತರ, ಕಾರ್ಮಿಕರ ಸಮಸ್ಯೆಗಳ ಬಗ್ಗೆ ಸಹಾನುಭೂತಿಯನ್ನೂ ತೋರಲಾರಂಭಿಸಿದರು. ಆದರೆ ಸ್ವಲ್ಪ ಸಮಯದಲ್ಲೇ ಕಾರ್ಮಿಕರ ಮುಷ್ಕರಗಳನ್ನು ಸದೆಬಡಿಯಲು ದಮನ ಕ್ರಮಗಳನ್ನು ಕೈಗೊಂಡರು.





ನವಂಬರ್ 1938 ರಲ್ಲಿ ಮುಂಬೈಯ ಕಾಂಗ್ರೆಸ್ ಮಂತ್ರಿಮಂಡಲ ಟ್ರೇಡ್ ಡಿಸ್ಪ್ಯೂಟ್ಸ್ ಆಕ್ಟ್ ತಂದಿತು. ಇದನ್ನು ವಿರೋಧಿಸಿ ನವಂಬರ್ 6 ರಂದು 80000 ಕಾರ್ಮಿಕರು ಮುಂಬೈಯಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಬಿಹಾರ ಮತ್ತು ಯು.ಪಿ.ಯ ಕಾಂಗ್ರೆಸ್ ಸರಕಾರಗಳು ರೈತರ ಮೇಲಿನ ಸಾಲಭಾರವನ್ನು ಕಮ್ಮಿ ಮಾಡಿದವು. ಆದರೆ ಜಮಿನ್ದಾರಿ ಪದ್ಧತಿಯನ್ನು ರದ್ದು ಮಾಡಬೇಕೆಂಬ ಅಲ್ಲಿಯ ಕಾಂಗ್ರೆಸ್ ಸಮಿತಿಯ ನಿರ್ಣಯಗಳನ್ನು ಮರೆತವು. ಬಿಹಾರದಲ್ಲಿ ಸ್ವಾಮಿ ಸಹಜಾನಂದರ ನೇತೃತ್ವದಲ್ಲಿ ಬಖಸ್ತ್ ಭೂಮಿಯನ್ನು ಹಿಂದಿರುಗಿಸಬೇಕೆಂದು ರೈತರ ದೊಡ್ಡ ಹೋರಾಟ ನಡೆದಾಗ ಅದರ ವಿರುದ್ಧ ನಿರ್ದಯ ದಮನದ ಧೋರಣೆಯನ್ನು ಕಾಂಗ್ರೆಸ್ ಮಂತ್ರಿಮಂಡಳ ಅನುಸರಿಸಿತು.

ಈ ಅವಧಿಯಲ್ಲಿ ನಡೆದ ಅತ್ಯಂತ ದೊಡ್ಡ ಕಾರ್ಮಿಕ ವರ್ಗದ ಹೋರಾಟವೆಂದರೆ ಬಂಗಾಳದಲ್ಲಿ 2.25 ಲಕ್ಷ ಸೆಣಬು ಕಾರ್ಮಿಕರ 74 ದಿನಗಳ ಸಾರ್ವತ್ರಿಕ ಮುಷ್ಕರ. 1936 ರ ಕುಸಿತದ ಪ್ರಯೋಜನ ಪಡೆದು ಭಾರೀ ಲಾಭ ಗಳಿಸಿದ ಸೆಣಬು ಮಾಲೀಕರು ಇನ್ನೊಂದೆಡೆ ಕಾರ್ಮಿಕರ ವೇತನ ಕಡಿತ ಮಾಡಿದ್ದರು. ಇದನ್ನು ವಿರೋಧಿಸಿ, ರಿಟ್ರೆಂಚ್ ಆದ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಈ ಮುಷ್ಕರ ನಡೆಯಿತು. ಇದಕ್ಕೆ ಸಾರ್ವತ್ರಿಕ ಬೆಂಬಲವೂ ವ್ಯಕ್ತಗೊಂಡಿತು. ಬಂಗಾಳದ ಮುಖ್ಯಮಂತ್ರಿ ಫಜ್ಲುಲ್ ಹಕ್‌ರ ಭರವಸೆಯ ಮೇಲೆ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು.

ಮುಂಬೈ, ಮದ್ರಾಸ್‌ಗಳಲ್ಲೂ ಮುಷ್ಕರಗಳು ನಡೆದವು. ಕಾನಪುರದಲ್ಲಿ 40000 ಜವಳಿ ಕಾರ್ಮಿಕರ ಮುಷ್ಕರವನ್ನು ದಮನ ಮಾಡಲು ಗೋವಿಂದ ವಲ್ಲಭ್ ಪಂತ್ ನೇತೃತ್ವದ ಕಾಂಗ್ರೆಸ್ ಸರಕಾರ ಪ್ರಯತ್ನಿಸಿ ವಿಫಲಗೊಂಡಿತು. ಬಿಹಾರ, ಮಧ್ಯಪ್ರಾಂತ್ಯ, ಪಂಜಾಬ್‌ಗಳಲ್ಲೂ ಮುಷ್ಕರಗಳ ಅಲೆ ಎದ್ದಿತು.





ಈ ಅವಧಿಯಲ್ಲಿ ಸುಮಾರಾಗಿ ಎಲ್ಲಾ ಮುಷ್ಕರಗಳು ಜಂಟಿ ಮುಖಂಡತ್ವದಲ್ಲಿ ನಡೆದು, ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡವು. ಮಿಲ್ ಮಾಲೀಕರು ಹಾಗೂ ಸರಕಾರದ ಜಂಟಿ ದಮನವನ್ನು ಎದುರಿಸಬೇಕಾಗಿ ಬಂದಿತು. ಈ ಹೋರಾಟಗಳಲ್ಲಿ ಹಲವು ಕಾರ್ಮಿಕ ಮುಖಂಡರು ಹುತಾತ್ಮರಾದರು. ಪಂಜಾಬಿನ ಕ್ರಾಂತಿಕಾರಿ ಹಾಗೂ ಕಾರ್ಮಿಕ ವರ್ಗದ ನಡುವೆ ಕೆಲಸ ಮಾಡುತ್ತಿದ್ದ ಹರಭಜನಾ ಸಿಂಗ್ ಪಿಕೆಟಿಂಗ್ ನಡೆಸುತ್ತಿದ್ದಾಗ ಪೋಲೀಸ್ ಲಾರಿ ಅವರನ್ನು ಕೆಡವಿ ಕೊಂದಿತು. ರಾಣಿಗಂಜ್‌ನಲ್ಲಿ ಕಾಗದ ಕಾರ್ಖಾನೆಯ ಸಹಾಯಕ ಕಾರ್ಯದರ್ಶಿ ಸುಕುಮಾರ್ ಮುಖರ್ಜಿ ಇದೇ ರೀತಿ ಹುತಾತ್ಮರಾದರು

(ಮುಂದುವರಿಯುವುದು)

ಭಾರತದ ಪರಿಮಳ ಅಕ್ಕಿಗೆ ಅಮೇರಿಕದ ಪೇಟೆಂಟ್

ಗ್ಯಾಟ್ ಒಪ್ಪಂದ, ಜಾಗತೀಕರಣ, ಉದಾರೀಕರಣ: ಇವೆಲ್ಲ ನಮ್ಮ ಲಾಭಕ್ಕಾಗಿಯೇ ಎಂದು ಹೇಳುತ್ತಿದ್ದ ಉದಾರೀಕರಣವಾದಿಗಳಿಗೆ ಈಗ ಒಂದು ಆಘಾತವುಂಟಾಗಿದೆ. ಹಿಂದೆ ಭಾರತದ ಅರಿಶಿಣ, ಬೇವು ಇವುಗಳಿಗೆಲ್ಲ ಅಮೇರಿಕದ ಕಂಪನಿಗಳು ಪೇಟೆಂಟ್ ಪಡೆದು ಕೊಂಡಿದ್ದವು. ಆ ಸಮಸ್ಯೆಗಳ ಹಿಂದೆ ಈಗ ಇನ್ನೊಂದು ಅಮೇರಿಕದ ಕಂಪನಿ ರೈಸ್ ಟೆಕ್ ಎಂದು ಹೆಸರುಳ್ಳದ್ದು ಭಾರತದ ಪರಿಮಳ ಅಕ್ಕಿ 'ಬಸ್ಮತಿ ಅಕ್ಕಿ' ಗೆ ಪೇಟೆಂಟ್ ಪಡೆದಿದೆ.

ಈ ಕಂಪನಿ ಹಿಂದೆ ಬಸ್ಮತಿ ಅಕ್ಕಿಯನ್ನು ಕಸ್ಮತಿ, ಟೆಕ್ಸ್ಮತಿ ಎಂಬ ವ್ಯಾಪಾರೀ ಹೆಸರುಗಳಡಿ ಮಾರಾಟ ಮಾಡಿ ಭಾರತದ ರಫ್ತು ವ್ಯಾಪಾರಕ್ಕೆ ಕಲ್ಲು ಹಾಕಿತ್ತು.

ಈ ಕಂಪನಿ ಪೇಟೆಂಟ್ ಪಡೆದಿರುವದರಿಂದ ಭಾರತದ ಅಕ್ಕಿ ರಫ್ತಿನಲ್ಲಿ ಸುಮಾರು 45000 ಟನ್ನುಗಳಷ್ಟು ಕಡಿಮೆಯಾಗುತ್ತದೆ. ಇದು ಒಟ್ಟು ಬಸ್ಮತಿ ಅಕ್ಕಿ ರಫ್ತಿನ ಶೇ 10 ರಷ್ಟು. ಯುರೋಪಿನ ಮತ್ತು ಪಶ್ಚಿಮ ಏಶಿಯಾದ ದೇಶಗಳಿಗೆ ಭಾರತದ ರಫ್ತು ಇದರಿಂದ ಕಡಿಮೆಯಾಗುತ್ತದೆ. ದೀರ್ಘ ಕಾಲೀನ ಪರಿಣಾಮಗಳು ಇನ್ನೂ ಗಂಭೀರ ವಾಗಬಹುದು.

ಈ ಪೇಟೆಂಟಿನ ಪ್ರಕಾರ ಅಮೇರಿಕದ ಈ ಕಂಪನಿ ಮುಂಬರುವ 20 ವರ್ಷಗಳ ಕಾಲ ಈ ಪೇಟೆಂಟ್ ಅಧಿಕಾರ ಬಳಸಿಕೊಳ್ಳಬಹುದು. ಅಮೇರಿಕದೊಳಗೆ ಎಲ್ಲ ಪರಿಮಳ ಅಕ್ಕಿಯನ್ನು (ಅಂದರೆ ಸುವಾಸನೆ ಭರಿತ ಅಕ್ಕಿ) ಅದು ಬಸ್ಮತಿ ಅಕ್ಕಿ ಎಂದು ಕರೆಯಬಹುದು. ಆಗ ಅಮೇರಿಕಕ್ಕೆ ಬೇರೆ ಯಾರೂ ಬಸ್ಮತಿ ಅಕ್ಕಿಯನ್ನು ರಫ್ತು ಮಾಡಲಾಗುವುದಿಲ್ಲ. ಯಾಕೆಂದರೆ ಈ ಅಕ್ಕಿಯನ್ನು ರೈಸ್‌ಟೆಕ್ ಕಂಪನಿಯೇ ಪೂರೈಸುತ್ತದೆ. ರಫ್ತು ಮಾಡುವವರೂ ಈ ಕಂಪನಿಯ ಮೂಲಕವೇ ಮಾಡ ಬೇಕಾಗುತ್ತದೆ. ಯಾಕೆಂದರೆ ಬಳಕೆದಾರರು ಅಮೇರಿಕನ್ ಕಂಪನಿಯ ಉತ್ಪನ್ನವನ್ನೇ ಬಯಸುತ್ತಾರೆ. ಇದಲ್ಲದೆ ಅದು ತನ್ನ ರಫ್ತುಗಳನ್ನೂ ಬಸ್ಮತಿ ಎಂಬ ಹೆಸರಿನಿಂದಲೇ ಕರೆಯುತ್ತದೆ. ಆಗ ರಫ್ತಿನಲ್ಲೂ ಈ ಕಂಪನಿಯದೇ ಮೇಲುಗೈಯಾಗುತ್ತದೆ.

ಈ ಬೆಳವಣಿಗೆಯಿಂದಾಗಿ ಭಾರತದ ರಫ್ತುದಾರರು, ವಾಣಿಜ್ಯ ಮಂತ್ರಾಲಯ ಕೃಷಿ ವಸ್ತುಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಭಾರತ ಕೃಷಿ ಸಂಶೋಧನಾ ಸಂಸ್ಥೆ ಇವೆಲ್ಲ ಮೂಕ ವಿಸ್ಮಿತವಾಗಿ ಕುಳಿತಿವೆ.

ನಮ್ಮ ಬಸ್ಮತಿ ಅಕ್ಕಿಯನ್ನು ಪೇಟೆಂಟ್ ಮಾಡಿರುವುದು ನಮ್ಮ ಸಂಸ್ಕೃತಿ ಮತ್ತು ಚರಿತ್ರೆಯನ್ನೇ ಕಸಿದುಕೊಂಡಂತೆ ಆಗಿವೆ ಎಂದು ಅವರ ಉದ್ಗಾರ.

ಈಗ ನಮ್ಮ ವಕೀಲರುಗಳು ಈ ಪೇಟೆಂಟನ್ನು ನಾವು ಪ್ರಶ್ನಿಸಬಹುದು ಮತ್ತು ಅದನ್ನು ವಾಪಸ್ಸು ಪಡೆಯಬಹುದು ಎಂದೆಲ್ಲ ಹೇಳುತ್ತಿದ್ದಾರೆ. ಆದರೆ ಇದು ಕಣ್ಣೀರೊರೆಸುವ ತಂತ್ರವಷ್ಟೆ. ಯಾಕೆಂದರೆ ಅಮೇರಿಕದ ಪೇಟೆಂಟ್‌ನ್ನು ಪ್ರಶ್ನಿಸಿ ಅದನ್ನು ಕಿತ್ತು ಹಾಕುವುದು ಅಷ್ಟು ಸುಲಭದ ಕೆಲಸವೇನಲ್ಲ.

ಹೇಗಿದೆ ಈ ಪೇಟೆಂಟ್ ನಮಗೆ ನೀಡಿದ ಗೂಸ?

ಭಾರತದ ರಫ್ತಿಗೆ ಯುರೋಪಿನ ವಿಷ

ಉದಾರೀಕರಣ ಮಾಡಿದರೆ ಭಾರತದ ರಫ್ತು ಜಾಸ್ತಿಯಾಗುತ್ತದೆ, ನಮ್ಮ ವಿದೇಶೀ ವಿನಿಮಯ ಬಿಕ್ಕಟ್ಟು ಪರಿಹಾರವಾಗುತ್ತದೆ ಎಂಬುದು ಒಂದು ವಾದ. ಆದರೆ ಆ ರಫ್ತು ಎಷ್ಟು ಕಷ್ಟದ್ದು ಮತ್ತು ಎಂತಹ ದುಸ್ಸಾಹಸ ಎಂಬುದು ಒಂದೊಂದು ಸರಕಿನ ವಿಷಯ ದಲ್ಲೂ ಕಂಡು ಬರುತ್ತಿದೆ.

ಆಮದು ಮಾಡಿಕೊಳ್ಳುವ ದೇಶಗಳು ಹತ್ತು ಹಲವು ನಿರ್ಬಂಧಗಳನ್ನು ಹೇರುತ್ತಲೇ ಬರುತ್ತಿದ್ದಾರೆ. ಭಾರತ ನಿರ್ಬಂಧ ಹೇರಿದರೆ ಅದು ಅನ್ಯಾಯವಾಗುತ್ತದೆ ಆದರೆ ಅವರು ನಿರ್ಬಂಧ ಹೇರಿದರೆ ಅದು ಅತ್ಯಂತ ಸೂಕ್ತವಾದದ್ದೆಂಬುದೇ ಅವರ ವಾದ.

ಇಂತಹ ನಿರ್ಬಂಧಗಳನ್ನು ಹೇರುವದರಲ್ಲಿ ಯುರೋಪಿನ ಸಮುದಾಯ ಮೊದಲ ಸ್ಥಾನದಲ್ಲಿದೆ. ಈಗ ಯುರೋಪಿನ ಸಮುದಾಯ ಭಾರತದಿಂದ ರಫ್ತಾಗುವ ಕೃಷಿ ಮೂಲದ ಪದಾರ್ಥಗಳಲ್ಲಿ ವಿಷಯುಕ್ತ ಔಷಧಿಗಳು ಇರುವುದೆಂದುಕೊಳ್ಳಿ ಮೇಲೆ ನಿರ್ಬಂಧ ಹೇರಿದೆ.

ಭಾರತದಿಂದ ರಫ್ತಾಗುವ ಶೇಂಗಾ, ಗೋಡಂಬಿ, ಮೆಣಸಿನಕಾಳು, ಎಣ್ಣೆಕಾಳುಗಳ ಹಿಂಡಿ ಇತ್ಯಾದಿಗಳಲ್ಲಿ ಎಫ್ಲೊ ಟಾಕ್ಸಿನ್ ಎಂಬ ಕ್ಯಾನ್ಸರ್‌ಕಾರಕ ವಸ್ತುವಿನ ಪ್ರಮಾಣ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿಗೆ ಇದೆಯಾದ್ದರಿಂದ ಅವುಗಳ ಮೇಲೆ ನಿರ್ಬಂಧ ಹೇರುತ್ತಿದೆ ಎಂದು ಅವು ಹೇಳುತ್ತಿವೆ.

ಈ ಎಫ್ಲೊ ಟಾಕ್ಸಿನ್ ಎಂಬ ವಸ್ತುವಿನ ಪ್ರಮಾಣ ಎಷ್ಟಿರಬೇಕೆಂದು ಭಾರತದಂತಹ ದೇಶಗಳು ನಿಗದಿ ಮಾಡಿಲ್ಲವೆಂದಲ್ಲ, ರಫ್ತು ಮಾಡುವ ದೇಶಗಳಾದ ಚೀನಾ, ಅಮೇರಿಕ, ಭಾರತ, ವಿಯೆಟ್ನಾಂ ಮತ್ತು ಅರ್ಜೆಂಟೆನಾಗಳು ಇದರ ಪ್ರಮಾಣವನ್ನು ನಿಗದಿಪಡಿಸಿವೆ. ಅದೂ ವೈಜ್ಞಾನಿಕವಾಗಿಯೇ. ಆದರೆ ಯುರೋಪಿನ ಸಮುದಾಯದ ದೇಶಗಳು ಈ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣವನ್ನು ನಿಗದಿ ಮಾಡಿವೆ. ಈ ಮೇಲಿನ ಸರಕುಗಳಲ್ಲಿ ಬಹು ತೇಕ ಪ್ರಮಾಣವನ್ನು ಭಾರತವೇ ಪೂರೈಸುವುದರಿಂದ ಈ ನಿರ್ಣಯದಿಂದ ಭಾರತಕ್ಕೆ ದೊಡ್ಡ ಪ್ರಮಾಣದ ತೊಂದರೆ ಆಗುತ್ತದೆ.

ಹೀಗೆ ರಫ್ತು ಸಾಧಿಸುವುದಕ್ಕಾಗಿ ಉದಾರೀಕರಣವನ್ನು ಜಾರಿಗೆ ತಂದಿದ್ದರೂ ರಫ್ತು ಸಾಧಿತವಾಗುವದಿಲ್ಲ. ಅದಕ್ಕೆ ಹಲವು ತೊಡಕುಗಳನ್ನು ಈ ಅಭಿವೃದ್ಧಿ ಹೊಂದಿದ ದೇಶಗಳೇ ಒಡ್ಡುತ್ತವೆ ಎಂಬುದು ಸ್ಪಷ್ಟ. ಉದಾರೀಕರಣ ವಾದಿಗಳ ಭ್ರಮೆಗಳು ಮಾತ್ರ ಇನ್ನೂ ಹಾಗೇ ಉಳಿದಿರುವಂತೆ ಕಾಣುತ್ತವೆ.

ಅಥವಾ ಇದು ಆತ್ಮದ್ರೋಹವೇ?

ವ್ಯಾಪಾರೀ ವಿಶ್ವಾಸ ಪಾತಾಳಕ್ಕೆ ಇಳಿದಿದೆ

ಇವೆಲ್ಲ ಜಾಗತೀಕರಣದಿಂದ ಬಂದ ಹೊಸ ಹೊಸ ಶಬ್ದಗಳು. ಉದಾರೀಕರಣ ದಿಂದ ಹಲವು ತರಹದ ಲಾಭಗಳು ಆಗಬೇಕಾಗಿದ್ದು ವ್ಯಾಪಾರೀ ವಿಶ್ವಾಸ ಪ್ರಬಲ ವಾಗಬೇಕಾದದ್ದು ಅಂತಹ ಒಂದು ಪರಿಣಾಮ.

ಈಗ ಎನ್.ಸಿ.ಎ.ಇ.ಆರ್ ಎಂಬ ಸಂಶೋಧನಾ ಸಂಸ್ಥೆಯ ಒಂದು ಸಮೀಕ್ಷೆಯ ಪ್ರಕಾರ ವ್ಯಾಪಾರೀ ವಿಶ್ವಾಸ ಪಾತಾಳಕ್ಕೆ ಇಳಿದಿದೆಯಂತೆ. ಈ ಸಂಸ್ಥೆ 500 ವ್ಯಾಪಾರೀ ಸಂಸ್ಥೆಗಳ ಸಮೀಕ್ಷೆಯನ್ನು ನಡೆಸಿತಂತೆ.

ರಾಜಕೀಯ ಅಸ್ಥಿರತೆ ಮತ್ತು ಬೇಡಿಕೆಯಲ್ಲಿ ಆಗಿರುವ ಕುಸಿತದಿಂದಾಗಿ ಇಂತಹ ವ್ಯಾಪಾರೀ ವಿಶ್ವಾಸದ ಕೊರತೆ ಉಂಟಾಗಿದೆ ಎಂಬುದು ಅದರ ವಿಶೇಷ. ಇದಲ್ಲದೆ ಜಾಗತೀಕ ಮಟ್ಟದ ರೇಟಿಂಗ್ ಸಂಸ್ಥೆಗಳು ಭಾರತಕ್ಕೆ ಬಹಳ ಕಡಿಮೆ ರೇಟಿಂಗ್ ನೀಡಿರುವುದೂ ಒಂದು ಕಾರಣ. ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಮೇಲೆ ಎಂತೆಂತಹ ಒತ್ತಡವನ್ನು ಹಾಕಲಾಗು ತ್ತಿದೆ ಮತ್ತು ನಮ್ಮ ಆಂತರಿಕ ವಿಷಯಗಳಲ್ಲಿ ಸಾಮ್ರಾಜ್ಯಶಾಹಿಗಳು ಹೇಗೆ ಮೂಗು ತೂರಿಸುತ್ತಾರೆ ಮತ್ತು ನಮ್ಮ ಆರ್ಥಿಕವನ್ನೇ ಏರುಪೇರು ಮಾಡಲು ಹೇಗೆ ಪ್ರಯತ್ನ ಮಾಡಲಾಗುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ. ಭಾರತದಲ್ಲಿ ಸಂಯುಕ್ತರಂಗ ಸರ್ಕಾರ ಅಧಿಕಾರದಲ್ಲಿದ್ದದ್ದು ಮತ್ತು ಆ ಸರ್ಕಾರದ ಎಡ ಪಕ್ಷಗಳ ಒತ್ತಡದಿಂದಾಗಿ ಮಿತಿ ಮೀರಿದ ಉದಾರೀಕರಣವನ್ನು ಮಾಡಲಾಗದೇ ಹೋದದ್ದು ಈ ಸಾಮ್ರಾಜ್ಯಶಾಹಿಗಳಿಗೆ ಕಣ್ಣುರಿ ಉಂಟು ಮಾಡಿತು.

ಆದ್ದರಿಂದಲೇ ಭಾರತದಲ್ಲಿ ರಾಜಕೀಯ ಅಸ್ಥಿರತೆ ಇದೆ ಎಂಬ ಗುಲ್ಲು ಹಬ್ಬಿಸಲಾಗಿದ್ದು ಭಾರತ ಅಂತರ್ರಾಷ್ಟ್ರೀಯ ಮಟ್ಟದ ವ್ಯಾಪಾರೀ ಒಪ್ಪಂದಗಳನ್ನೇನು ಮುರಿದಿಲ್ಲ. ಹಾಗಿದ್ದರೆ ಇವರ ವ್ಯಾಪಾರಕ್ಕೆ ಏನು ತೊಂದರೆ? ಇಲ್ಲಿ ರಾಜಕೀಯ ಅಸ್ಥಿರತೆ ಇರುವುದರಿಂದ ವ್ಯಾಪಾರಿ ಒಪ್ಪಂದಗಳನ್ನು ಮುಂದೆ ಮುರಿಯ ಬಹುದು ಎಂಬುದು ಅವರ ಈ ಧೋರಣೆಯ ಇಂಗಿತ.

ಆಳದಲ್ಲಿ ತಮ್ಮ ಲಾಭಕ್ಕಾಗಿ ತಾವು ಈ ಭಾರತ ದೇಶವನ್ನೇ ಕೊಳ್ಳೆ ಹೊಡೆಯುವಂತಹ ಉದಾರೀಕರಣ ಬರಬೇಕು ತಮಗೆ ಯಾವುದೇ ತರಹದ ನಿರ್ಬಂಧ ಗಳು ಇರಬಾರದು ಎಂದು ಇವರು ಬಯಸುತ್ತಾರೆ. ಅದ್ದರಿಂದಲೇ ಇಂತಹ ಧೋರಣೆ. ಇದನ್ನೇ ದೊಡ್ಡ ಶಬ್ದಗಳಲ್ಲಿ ವ್ಯಾಪಾರಿ ವಿಶ್ವಾಸದ ಕುಸಿತ/ಕೊರತೆ ಎಂದೆಲ್ಲ ವರ್ಣಿಸುತ್ತಾರೆ ಅಷ್ಟೇ.

ವಶೀಕರಣ ವಿಲೀನಗಳಿಗೆ ಸರ್ಕಾರೀ ನೆರವು

ಕಂಪನಿಗಳ ವಶೀಕರಣ ಮತ್ತು ವಿಲೀನಗಳಿಗೆ ಸರ್ಕಾರದ ನಿರ್ದೇಶಕ ಸೂತ್ರಗಳು ಆಗಲೇ ಬಂದಿವೆ. ಅಂದರೆ ಇಂತಹ ಏಕೀಕರಣ ಮತ್ತು ವಿಲೀನವನ್ನೂ ಸರ್ಕಾರವೇ ಮಾನ್ಯ ಮಾಡುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ ಎಂಬುದು ಸ್ಪಷ್ಟ.

ಇಂತಹ ವಶೀಕರಣ ಮತ್ತು ವಿಲೀನಗಳಿಗೆ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ಹಣಕಾಸು ನೆರವನ್ನೂ ನೀಡಬಹುದೆಂಬುದೇ ಈಗಿನ ಹೊಸ ಬೆಳವಣಿಗೆ.

ಇಲ್ಲಿ ನೇರವಾಗಿ ಸಾಲ ನೀಡುವಂತಿಲ್ಲ. ಆದರೆ ಈ ವಶೀಕರಣವಾಗುವ ವಿಲೀನಗೊಳ್ಳುವ ಕಂಪನಿಗಳ ಷೇರುಕೊಳ್ಳಲು ಡಿಬೆಂಚರುಗಳನ್ನು ಕೊಳ್ಳಲು ಯಾವುದೇ ನಿರ್ಬಂಧವಿಲ್ಲ.

ಈಗಾಗಲೇ ದೊಡ್ಡ ಪ್ರಮಾಣದಲ್ಲಿ ವಶೀಕರಣ ವಿಲೀನಗಳು ನಡೆಯುತ್ತಿವೆ. ಇಂತಹ ಹಲವು ವಶೀಕರಣ ವಿಲೀನಗಳಲ್ಲಿ ಹಣಕಾಸಿನ ಕೊರತೆ ತಡೆಯುಂಟು ಮಾಡಿತು.

ಬಂಡವಾಳಶಾಹಿ ಪದ್ಧತಿಯಲ್ಲಿ ದೊಡ್ಡ ಮೀನು ಸಣ್ಣ ಮೀನನ್ನು ನುಂಗುವಂತೆ ದೊಡ್ಡ ಕಂಪನಿಗಳು ಸಣ್ಣ ಕಂಪನಿಗಳನ್ನು ವಶೀಕರಿಸಿ ವಿಲೀನಗೊಳಿಸಿಕೊಳ್ಳುತ್ತವೆ. ಇದರಿಂದ ಹಲವು ಸಣ್ಣ ಕಂಪನಿಗಳು ಇನ್ನಿಲ್ಲವಾಗುತ್ತವೆ. ಹೀಗೆ ಕಂಪನಿಗಳು ಇನ್ನಿಲ್ಲವಾಗುವಾಗ ಅಥವಾ ವಿಲೀನ ವಾಗುವಾಗ ಅಂತಹ ಕಂಪನಿಗಳ ಉದ್ಯೋಗಿಗಳು/ಕಾರ್ಮಿಕರು ಅಪಾರ ನೋವು ಅನುಭವಿಸಬೇಕಾಗುತ್ತದೆ.

ಅಬ್ಬರ ಅಡಗಿದ ಬಿ.ಜೆ.ಪಿ - ದಂಗುಬಡಿದ ದಳ

ಕರ್ನಾಟಕದಲ್ಲಿ

ಫೆಬ್ರವರಿ 6

● "ಕಾಂಗ್ರೆಸ್ ಸಾಲ ಮಾಡಿ ದೇಶದ ಆರೋಗ್ಯ ಕೆಡಿಸಿದೆ. ಬಿ.ಜೆ.ಪಿ. ಮತೀಯವಾದದಿಂದ ಎಲ್ಲರ ಮನಸ್ಸು ಕೆಡಿಸಿದೆ ಎಂದು ಶಿವಮೊಗ್ಗೆಯಲ್ಲಿ ಮುಖ್ಯಮಂತ್ರಿ.

ಫೆಬ್ರವರಿ 7

● ಈ ಚುನಾವಣೆಯ ನಂತರ ಕಾಂಗ್ರೆಸ್ ಪಕ್ಷ ತಾನಾಗಿಯೇ ಪರ್ಯಾವಸಾನಗೊಳ್ಳುವುದು ಎಂದು ಕಾಂಗ್ರೆಸ್ಸಿಗರೂ ಆಗಿದ್ದ ಮಾಜಿ ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಅಭಿಪ್ರಾಯ.

ಫೆಬ್ರವರಿ 8

● ತಮ್ಮ ಪಕ್ಷ ಜಾತ್ಯಾತೀತ ನೀತಿಗೆ ಬದ್ಧವಾಗಿದೆ ಎಂದು ಲೋಕಶಕ್ತಿಯ ಪ್ರಣಾಳಿಕೆ ಬಿಡುಗಡೆ ಮಾಡುತ್ತಾ ಡಾ|| ಜೀವರಾಜ್ ಆಳ್ವ.

ಫೆಬ್ರವರಿ 9

● ಅರಣ್ಯ ಸಚಿವ ಗುರುಪಾದಪ್ಪ ನಾಗಮಾರಪಳ್ಳಿ ರಾಜೀನಾಮೆ- ರಾಜೀನಾಮೆ ಕೊಟ್ಟ ನಾಲ್ಕನೇ ಸಚಿವರು.

ಫೆಬ್ರವರಿ 10

● "ಹಲವಾರು ಸಮಸ್ಯೆಗಳು ದೇಶವನ್ನು ಕಿತ್ತು ತಿನ್ನುತ್ತಿರುವಾಗ ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ರಾಮಮಂದಿರ ನಿರ್ಮಾಣ, ಸಂವಿಧಾನದ 370ನೇ ವಿಧಿ ರದ್ದು ಮಾಡುವುದರ ಬಗ್ಗೆ ಮಾತನಾಡುವುದು ಮೂರ್ಖತನ ಎಂದು ಲೋಕಶಕ್ತಿಯ ರಾಷ್ಟ್ರೀಯಕಾರ್ಯದರ್ಶಿ ಶ್ರೀಕಂಠಮೂರ್ತಿ"

ಫೆಬ್ರವರಿ 11

● "ಪಕ್ಷ-ವಿರೋಧಿ ಚಟುವಟಿಕೆ, ಅಪರಾಧಿ ಹಿನ್ನೆಲೆ ಇರುವ ವ್ಯಕ್ತಿಗಳಿಗೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಟಿಕೆಟ್ ದೊರಕಿರುವಾಗ ಉತ್ತಮ ಚಾರಿತ್ರ್ಯ ಹಾಗೂ ಪಕ್ಷನಿಷ್ಠೆ ಇರುವ ನನಗೆ ಯಾವ ಕಾರಣಕ್ಕೆ ಟಿಕೇಟ್ ನೀಡಲಿಲ್ಲ?" ಪಕ್ಷದ ಅಧ್ಯಕ್ಷರಿಗೆ ಎಂ.ವಿ. ಚಂದ್ರಶೇಖರ್ ಮೂರ್ತಿ ಪತ್ರದಲ್ಲಿ ಪ್ರಶ್ನೆ.

ಫೆಬ್ರವರಿ 12

● ನೈತಿಕತೆ ಹಾಗೂ ರಾಜಕೀಯ ಮೌಲ್ಯಗಳ ಬಗ್ಗೆ ಮಾತನಾಡುವವರು ಶಾಸಕ ಸ್ಥಾನಕ್ಕೆ ತಾವಾಗಿಯೇ ರಾಜೀನಾಮೆ ನೀಡಲಿ- ದೇಶಪಾಂಡೆಗೆ ಸಿಂಧ್ಯಾ ಸವಾಲು.

ಫೆಬ್ರವರಿ 13

● ಪಕ್ಷಾಂತರ ನಿಷೇಧ ಕಾನೂನಿನಡಿ ಮಾಜಿ ಸಚಿವರನ್ನು ವಿಧಾನಸಭಾ ಸದಸ್ಯತ್ವದಿಂದ ಅನರ್ಹಗೊಳಿಸಲು ವಿಧಾನಸಭಾಧ್ಯಕ್ಷರಿಗೆ ಮುಖ್ಯಮಂತ್ರಿ ಪತ್ರ.

ಫೆಬ್ರವರಿ 14

● ರಾಜ್ಯದಲ್ಲಿ ಈ ಬಾರಿ ಯಾವುದೇ ಅಲೆಯಿಲ್ಲ, ಕೇಂದ್ರದಲ್ಲಿ ಬಿಜೆಪಿ ಹೊರತುಪಡಿಸಿ ಜಾತಿ-ಮತವಿಲ್ಲದೆ ಸಾಮಾಜಿಕ ನ್ಯಾಯಕ್ಕೆ ಬದ್ಧವಾದ ಸಮ್ಮಿಶ್ರ ಸರ್ಕಾರ ರಚನೆಯಾಗಲಿದೆ ಎಂದು ಶಿವಮೊಗ್ಗದಲ್ಲಿ ಬಂಗಾರಪ್ಪನವರ ಭವಿಷ್ಯ.

ಫೆಬ್ರವರಿ 16

● ರಾಜ್ಯದ 18 ಸ್ಥಾನಗಳೂ ಸೇರಿದಂತೆ ದೇಶದ 222 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ. ರಾಜ್ಯದಲ್ಲಿ ಸರಾಸರಿ 66% ಮತದಾನವಾಗಿದೆ ಎಂದು ಅಂದಾಜು. ಮಂಡ್ಯ, ಹಾಸನ, ಮಂಗಳೂರಿನಲ್ಲಿ ಅತಿ ಹೆಚ್ಚು ಮತದಾನ. ಬಿಜಾಪುರದಲ್ಲಿ ಅತಿ ಕಮ್ಮಿ. ಪಾಂಡವಪುರ, ಸಕಲೇಶಪುರದಲ್ಲಿ ಸಣ್ಣಪುಟ್ಟ ಘಟನೆಗಳು ಬಿಟ್ಟರೆ ಉಳಿದಂತೆ ರಾಜ್ಯದಲ್ಲಿ ಮತದಾನ ಶಾಂತಿಯುತ.

ಫೆಬ್ರವರಿ 17

● ಕಲ್ಬುರ್ಗಿಯಲ್ಲಿ ಸಮತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಾರ್ಜ್‌ಫರ್ನಾಂಡೀಸ್ ವಿರುದ್ಧ ಅವರ ಪಕ್ಷದ ಕಾರ್ಯಕರ್ತರಿಂದಲೇ ಪ್ರತಿಭಟನೆ. ಬಹಿರಂಗ ಸಭೆಯಲ್ಲಿ ವಾಜಪೇಯಿ ಮುಂದಿನ ಪ್ರಧಾನಿ ಎಂದು ಸಾರಿದ್ದಕ್ಕೆ, ಹೊಗಳುವವರನ್ನು ಪ್ರಶಂಸಿದ್ದಕ್ಕೆ ಆಕ್ರೋಶ.

ಫೆಬ್ರವರಿ 19

● ಚಿಕ್ಕಮಗಳೂರು, ಹಾಸನ ಹಾಗೂ ಬಿಜಾಪುರ ಕ್ಷೇತ್ರದ ಎಂಟು ಮತಗಟ್ಟೆಗಳಲ್ಲಿ ಶಾಂತಿಯುತ ಮರು ಮತದಾನ.

● ಜಮ್ಮು-ಕಾಶ್ಮೀರಕ್ಕೆ ವಿಶೇಷ ಅವಕಾಶ ನೀಡುವ ಸಂವಿಧಾನದ 370ನೇ ಕಲಮನ್ನು ರದ್ದುಗೊಳಿಸುವುದು ಸಾಧ್ಯವಿಲ್ಲ, ಎಂದು ರಾಮಕೃಷ್ಣ ಹೆಗಡೆ

ಕೋಲಾರ ಮೀಸಲು ಕ್ಷೇತ್ರದಿಂದ ವಿಶೇಷ ವರದಿ: ಜಯರಾಂ.ಎಂ

ಫೆಬ್ರವರಿ 19,1998. ಇಡೀ ಕೋಲಾರ ಕ್ಷೇತ್ರದಲ್ಲಿ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ತಾರಕಕ್ಕೇರಿದೆ. ಹಳ್ಳಿ ಪಟ್ಟಣವೆನ್ನದೆ ಕಾರು, ವ್ಯಾನ್, ಆಟೋಗಳು ಕ್ಷೇತ್ರವನ್ನು ಕ್ರಮಿಸಿ ತಮ್ಮ ಪಕ್ಷಕ್ಕೆ ಮತ ನೀಡುವಂತೆ ಮತದಾರರ ಮುಂದೆ ಇನ್ನಿಲ್ಲದ ತಾಲಿಮು ನಡೆಸಿವೆ. ಆದರೆ ಜನತೆ ಈ ಚುನಾವಣೆಯಿಂದ ಮತ್ತು ಈ ರಾಜಕೀಯ ಪಕ್ಷಗಳಿಂದ ಭ್ರಮ ನಿರಸನಕ್ಕೊಳಗಾಗಿರುವುದು ಎದ್ದು ಕಾಣುವ ಅಂಶವಾಗಿದೆ. ಕೆಲವು ಹಳ್ಳಿಗಳಲ್ಲಿ ಯಾವುದೇ ರಾಜಕೀಯ ಪಕ್ಷಗಳನ್ನು ಗ್ರಾಮಗಳ ಒಳಗೆ ಬರಲು ಬಿಡದೆ ಇರುವುದೂ ಉಂಟು.

ಎರಝುಂಡಾನಾ ಬನ್ನಿ!

ಕೋಲಾರ ಜನತೆಯನ್ನು ತೀವ್ರವಾಗಿ ಕಾಡುತ್ತಿರುವ ಇಂದಿನ ಸಮಸ್ಯೆ ಎಂದರೆ ವಿದ್ಯುತ್. ಇಲ್ಲಿ ಯಾವ ನದಿಯಾಗಲಿ, ನೀರಾವರಿ ಯೋಜನೆಗಳಾಗಲಿ ಇಲ್ಲದಿರುವುದರಿಂದ ಇಲ್ಲಿಯ ರೈತಾಪಿ ವರ್ಗ ಕೆರೆಗಳು ಹಾಗೂ ಪಂಪ್‌ಸೆಟ್ ಗಳನ್ನೇ ವ್ಯವಸಾಯಕ್ಕೆ ಹೆಚ್ಚು ಅವಲಂಬಿಸಿದ್ದಾರೆ. ಮಳೆಗಾಲ ಮುಗಿದಿರುವುದರಿಂದ ಕೆರೆಯಲ್ಲಿ ನೀರು ಖಾಲಿಯಾಗಿರುವುದರಿಂದ ಪಂಪ್ಸೆಟ್‌ಗಳು ರೈತರ ಜೀವನಾಡಿಯಾಗಿವೆ. ಆದರೆ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ದಿನಕ್ಕೆ 2-3 ತಾಸು ಮಾತ್ರವಾಗಿದ್ದು, ಇಲ್ಲಿನ ತರಕಾರಿ ಬೆಳೆಗಳಾದ ಆಲೂಗೆಡ್ಡೆ, ಟಮೊಟೊ, ಕ್ಯಾರೇಟ್ ಹಾಗೂ ರೇಷ್ಮೆ ನೀರಿಲ್ಲದೆ ಒಣಗುತ್ತಿರುವುದು. ಇನ್ನು ಹಲವು ಹಳ್ಳಿಗಳಿಗೆ ವಿದ್ಯುತ್, ಪಂಪ್ಸೆಟ್, ರಸ್ತೆ ಸೌಕರ್ಯ, ರಸ್ತೆ ಇರುವ ಕಡೆ ಸಾರಿಗೆ ವ್ಯವಸ್ಥೆ ಇಲ್ಲ. ಶಾಲೆಗಳಿಲ್ಲದ ಹಲವು ಹಳ್ಳಿಗಳನ್ನು ಕೋಲಾರ ಜಿಲ್ಲೆಯಲ್ಲಿ ಇನ್ನೂ ಕಾಣಬಹುದೆಂದರೆ ಆಶ್ಚರ್ಯವೇನಲ್ಲ. ಈ ಎಲ್ಲ ಕಾರಣದಿಂದಾಗಿಯೇ ರಾಜಕೀಯ ಪಕ್ಷಗಳ ಬಗ್ಗೆ ಜನರಲ್ಲಿ ಸಹಜವಾದ ಅತೃಪ್ತಿ ಮೂಡಿದೆ. ಚುನಾವಣಾ ಪ್ರಚಾರ ಸಮಯದಲ್ಲಿ ಮಾತ್ರ ಬರುವುದನ್ನು ವಿರೋಧಿಸಿದ್ದಾರೆ. ಆದರೆ ತೆಲಂಗಾಣ ಹೋರಾಟದ ಇತಿಹಾಸ ಹೊತ್ತಿರುವ ಕೆಂಬಾವುಟದ ಕಮ್ಯುನಿಸ್ಟ್ ಪಕ್ಷ ಹಳ್ಳಿಗಳನ್ನು ಪ್ರವೇಶಿಸಲು ನಿರ್ಬಂಧವಿಲ್ಲ. ಕಾರಣ ಕೆಂಬಾವುಟದ ಬಗ್ಗೆಗಿನ ಅಭಿಮಾನ ಇದು. ಬಂಗಾರಪೇಟೆ, ಮಾಲೂರು, ಮುಳಬಾಗಿಲು, ಚಿಂತಾಮಣಿ ತಾಲೂಕಿನ ಹಳ್ಳಿಗಳಲ್ಲಿ ಮಾತ್ರವಲ್ಲದೆ, ಇಡೀ ಕ್ಷೇತ್ರದಲ್ಲಿ ಕೆಂಬಾವುಟದ ಬಗ್ಗೆ ಉಕ್ಕಿಬರುವ ಅಭಿಮಾನದ ಪ್ರತೀಕ. ಇದರಿಂದ ಸಿಪಿಐ(ಎಂ)ನ ಯುವ ಕಾರ್ಯಕರ್ತರಲ್ಲಂತೂ ನವ ಚೇತನ ಮೂಡಿದೆ.

ಸಂಯುಕ್ತ ರಂಗವೇ?

ಪಕ್ಷದ ಕಾರ್ಯಕರ್ತರು ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಬರುವ 8 ವಿಧಾನಸಭಾ ಕ್ಷೇತ್ರಗಳಲ್ಲಿ ತಂಡಗಳಾಗಿ ವಿಂಗಡಿಸಿ, ಕ್ಷೇತ್ರದ ತುಂಬಾ ಸಂಯುಕ್ತರಂಗ ರಚನೆ, ಕಾಂಗ್ರೆಸ್ಸಿನ ಹೊಸ ಆರ್ಥಿಕ ಕೃಷಿ ನೀತಿ, ಬಿಜೆಪಿಯ ಒಡೆದು ಆಳುವ ನೀತಿ, ಇವುಗಳಿಂದಾಗುವ ಪರಿಣಾಮ ಮತ್ತೆ ಕೇಂದ್ರದಲ್ಲಿ ಸಂಯುಕ್ತ ರಂಗ ಸರ್ಕಾರ ಸ್ಥಾಪನೆಗಾಗಿ ಅದರ ಪ್ರಬಲಶಕ್ತಿ ಸಿಪಿಐ(ಎಂ) ಗೆ ಮತ ನೀಡುವಂತೆ ಕೇಳಿದಾಗ ತುಂಬಾ ಹಳ್ಳಿಗಳಲ್ಲಿ 'ಸಂಯುಕ್ತ ರಂಗಾನ? ಅದು ನಾವು ಬೆಳೆದ ಆಲೂಗೆಡ್ಡೆಯನ್ನು ವಿದೇಶಕ್ಕೆ ರಫ್ತು ಮಾಡಲು ಅವಕಾಶ ಮಾಡಿಕೊಡದೆ ನಾವು ನಷ್ಟ ಅನುಭವಿಸುವಂತೆ ಮಾಡಿದೆ' ಎಂದು ಪ್ರಶ್ನಿಸುವುದೂ ಉಂಟು. ಆದರೆ ಇದಕ್ಕೆಲ್ಲ ಕಾರಣ ಸಂಯುಕ್ತರಂಗವಲ್ಲ 1991ರಲ್ಲಿ ಕಾಂಗ್ರೆಸ್‌ನ ನರಸಿಂಹರಾವ್ ನೇತೃತ್ವದ ಸರ್ಕಾರ ತಂದ ಹೊಸ ಆರ್ಥಿಕ ನೀತಿ, ಕೈಗಾರಿಕಾ ನೀತಿ ಹಾಗೂ ಕೃಷಿ ನೀತಿಯಿಂದಾಗಿಯೇ ತರಕಾರಿ, ರೇಷ್ಮೆ ಬೆಳೆಯುವ ಕೋಲಾರದ ರೈತರ, ತೊಗರಿ ಬೆಳೆಯುವ ಬೀದರ್-ಗುಲ್ಬರ್ಗದ ರೈತರ, ಕಬ್ಬು ಬೆಳೆಯುವ ಮಂಡ್ಯ-ಶಿವಮೊಗ್ಗ ರೈತರ, ಹತ್ತಿ ಬೆಳೆದು ಆತ್ಮಹತ್ಯೆ ಮಾಡಿಕೊಂಡ ಆಂಧ್ರದ ರೈತರ ಸಂಕಷ್ಟಗಳಿಗೆ, ಉಳ್ಳವರ, ದೊಡ್ಡ ಜಮೀನ್ದಾರರ ಪರವಾದ ಕೃಷಿನೀತಿಯೇ ಕಾರಣ ಎಂದು ವಿವರಿಸಿದಾಗ ಹಳ್ಳಿಯ ರೈತರು ವಿಸ್ಮಯಗೊಂಡಿದ್ದು ವಿಶೇಷ ವೆನ್ನಿಸಿತು.

ಜಿಲ್ಲೆಯ ರೈತರ ಸಮಸ್ಯೆಗಳ ಪರಿಹಾರಕ್ಕೆ ಜಿಲ್ಲಾ ಆಡಳಿತದ ಮುಂದೆ ಸಿ.ಪಿ.ಐ.(ಎಂ) ಜಿಲ್ಲಾ ಸಮ್ಮೇಳನ ಹಾಗೂ ರಾಜ್ಯ ಸಮ್ಮೇಳನಗಳು ಹಲವು ಪರ್ಯಾಯ ಮಾರ್ಗ ಸೂಚಿಸಿದವು. ಅಂತರ್ಜಲ ಕಡಿಮೆ ಇರುವುದರಿಂದ ಇಳಿಜಾರು ಪ್ರದೇಶದಲ್ಲಿ ಅಡ್ಡ ತಡೆಗಳನ್ನು ನಿರ್ಮಿಸಿ, ಮಳೆಗಾಲದಲ್ಲಿ ನೀರು ನಿಲ್ಲುವಂತೆ ಮಾಡುವುದು, ಕುಡಿಯುವ ನೀರನ್ನು ಶುದ್ಧಗೊಳಿಸುವಂತೆ ಶುದ್ಧೀಕರಣ ಘಟಕ ಸ್ಥಾಪನೆ, ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗುವಂತೆ ಹೊಸ ವಿಸ್ತರಣ ಕೇಂದ್ರಗಳನ್ನು ಸ್ಥಾಪಿಸುವಂತೆ, ರೇಷ್ಮೆ ಬೆಳೆಗಾರರಿಗೆ ಉತ್ತೇಜನವಾಗುವಂತೆ ರೇಷ್ಮೆ ಮಂಡಲಿ ಸ್ಥಾಪನೆಗೆ ಒತ್ತಾಯಿಸಿತ್ತು. ಆದರೆ ಇದ್ಯಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಜಿಲ್ಲಾ ಆಡಳಿತ ಹಾಗೂ ಪ್ರತಿನಿಧಿಗಳು ಚುನಾವಣೆಗಳೇ ಜನ ಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ಎನ್ನುವಂತೆ ಪ್ರತಿಷ್ಠೆಯಾಗಿ ಪರಿಗಣಿಸಿ ನೈಜ ಕಷ್ಟಗಳತ್ತ ಗಮನ ಹರಿಸದಿರುವುದೇ ಇಡೀ ಕ್ಷೇತ್ರ ಸಂಚರಿಸಿದಾಗ ಗೋಚರಿಸುವ ಅಂಶವಾಗಿದೆ.

ಚಿನ್ನದ ಗಣಿಯಲ್ಲ-ಇದು ಬಯಲು

ಜಿಲ್ಲೆಯ ಎರಡು ಕಣ್ಣುಗಳೆಂದು ಕರೆಯಲ್ಪಡುವ ಚಿನ್ನದ ಗಣಿ ಹಾಗೂ ಬಿ.ಇ.ಎಂ.ಎಲ್. ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಹಾಗೂ ದುಡಿಯುತ್ತಿರುವ ಕಾರ್ಮಿಕರ ಕಣ್ಣಲ್ಲಿ ನೀರು ಸುರಿಯುತ್ತಿದೆ. ಅವರ ಕಣ್ಣೀರಿಗೆ ಯಾವುದೇ ಖಾಯಿಲೆಯಿಲ್ಲ. ಬದಲಾಗಿ ಚಿನ್ನದ ಗಣಿಯನ್ನು ಸರಕಾರದ ಉದ್ದೇಶದಂತೆ ಡಿಸೆಂಬರ್ 31ರಂದು ಮುಚ್ಚಬೇಕಾಯಿತು. ಆದರೆ ಕೇಂದ್ರ ಸರ್ಕಾರ ಬಿದ್ದ ಕಾರಣ ಸದ್ಯ ಮುಚ್ಚುವಿಕೆ ಮುಂದು ಹೋಗಿದೆ. ಬಿ.ಇ.ಎಂ. ಎಲ್.ನ್ನು ಉದ್ದೇಶಪೂರ್ವಕವಾಗಿ ರೋಗಗ್ರಸ್ಥಗೊಳಿಸಿ ಅದನ್ನು ಖಾಸಗಿಯವರಿಗೆ ಮಾರುವ ಯತ್ನ ನಡೆದಿದೆ. ಇದರಿಂದಾಗಿ ಭವಿಷ್ಯದ ಬದುಕನ್ನು ನೆನೆದು ಕಾರ್ಮಿಕರ ಕಣ್ಣಲ್ಲಿ ನೀರಾಡುತ್ತಿದೆ. ಈ ಕಾರಣದಿಂದಾಗಿಯೂ ಜನತೆಯಲ್ಲಿ ರಾಜಕೀಯ ಪಕ್ಷಗಳ ಬಗ್ಗೆ ಅವುಗಳ ನಿಲುವುಗಳ ಬಗ್ಗೆ ಜಿಗುಪ್ಸೆ ಮೂಡಿದೆ.

ಜಗತ್ತಿನ 2ನೇ ಅತಿ ದೊಡ್ಡ ಆಳದ ಚಾಂಪಿಯನ್ ಗಣಿ ಇಲ್ಲಿದೆ. ಸಮುದ್ರ ಮಟ್ಟಕ್ಕಿಂತ 2 ಸಾವಿರ ಅಡಿ ಮೇಲಿರುವ ಕೆ.ಜಿ.ಎಫ್.ನಲ್ಲಿ 14 ಸಾವಿರ ಅಡಿ ಆಳದಷ್ಟು, ಸಮುದ್ರ ಮಟ್ಟಕ್ಕಿಂತ 12 ಸಾವಿರ ಅಡಿ ಆಳ ಇದೆ. ಇದರಿಂದ ಬಹುತೇಕ ಗಣಿಗಳಲ್ಲಿ ನೀರು ತುಂಬಿದೆ. ನೀರನ್ನು ಹೊರ ತೆಗೆಯಲಾಗುತ್ತಿಲ್ಲ. ಇದರಿಂದಾಗಿ ಕೆಲಸ ನಡೆಯುತ್ತಿರುವ 3-4 ಗಣಿಗಳಿಗೂ ತೊಂದರೆ ಉಂಟಾಗಿದೆ. (ಯಾವುದೇ ಗಣಿಯಲ್ಲಿ ನೀರು ತುಂಬಿದರೆ ಸರ್ಕಾರದ ಅನುಮತಿ ಇಲ್ಲದೆ ಗಣಿ ಮುಚ್ಚಬಹುದೆಂಬ ಕಾನೂನಿದೆ.) ಗಣಿ ಮುಚ್ಚುವಿಕೆಯ ಭೀತಿ ಕಾರ್ಮಿಕರನ್ನು ಕಾಡುತ್ತಿದೆ. ಜೊತೆಗೆ ಕ್ಯಾಂಟೀನ್ ಊಟದ ಬೆಲೆಯನ್ನು 2 ಪಟ್ಟು ಹೆಚ್ಚಿಸಿದೆ. ಮನೆ ಬಾಡಿಗೆಯನ್ನು 7 ರಿಂದ 8 ಪಟ್ಟು ಹೆಚ್ಚಿಸಿ ಸಕಾಲದಲ್ಲಿ ಸಂಬಳ ಇಲ್ಲದೆ ಕಾರ್ಮಿಕರು ಕಂಗಾಲಾಗಿದ್ದಾರೆ. ಐ.ಎನ್.ಟಿ.ಯು.ಸಿ ಸಂಘಟನೆಯೂ ಇದರ ಬಗ್ಗೆ ಚಕಾರವೆತ್ತಿಲ್ಲ. ಇದೇ 23 ರಿಂದ ಕಾರ್ಮಿಕರು ಉಪವಾಸ ಸತ್ಯಾಗ್ರಹ ನಡೆಸುವ ಸಿದ್ಧತೆಯಲ್ಲಿದ್ದಾರೆ. ಇದಕ್ಕೆ ಅವರ ಕುಟುಂಬದ ಸದಸ್ಯರು ಹಾಗೂ ಸಿ.ಐ.ಟಿ.ಯು. ಸಂಘಟನೆ ಕೂಡ ಬೆಂಬಲ ನೀಡಿದೆ. ಈ ಎಲ್ಲವು ಈ ಚುನಾವಣೆಯಲ್ಲಿ ಪರಿಣಾಮ ಬೀರುವ ಅಂಶವಾಗಿವೆ.

ಗಣಿ ಮುಚ್ಚುವಿಕೆಗೆ ಕಾರಣ ಚಿನ್ನದ ನಿಕ್ಷೇಪ ಖಾಲಿಯಾಗಿದೆ ಎಂದು. ಆದರೆ ಸಿ.ಪಿ.ಐ.(ಎಂ)ನ ತಮಿಳುನಾಡು ಮುಖಂಡರು ಹಾಗೂ ರಾಷ್ಟ್ರದ ಸಿ.ಐ.ಟಿ.ಯು. ನಾಯಕರಾದ ವರದ ರಾಜನ್‌ರ ಪ್ರಕಾರ ಕೆ.ಜಿ.ಎಫ್. ಎಂದರೆ 'ಕೋಲಾರ ಚಿನ್ನದ ಬಯಲು' (ಕೋಲಾರ್ ಗೋಲ್ಡ್ ಫೀಲ್ಡ್) ಆದ್ದರಿಂದ ಚಿನ್ನ ಖಾಲಿಯಾಗುವ ಪ್ರಶ್ನೆಯೇ ಇಲ್ಲ. ಬಯಲು ವಿಶಾಲವಾಗಿರುವುದರಿಂದ ಮುಚ್ಚುವ ಪ್ರಮೇಯವೇ ಇಲ್ಲ ಎನ್ನುತ್ತಾರೆ.

ಯಾವುದೇ ರಾಜಕೀಯ ಪಕ್ಷ ಮೇಲಿನ ಸಮಸ್ಯೆಗಳ ಬಗ್ಗೆ ಮಾತನಾಡದೆ ಕೇವಲ ಚಕ್ರಕ್ಕೆ ಮತ ನೀಡಿ, ಕಮಲಕ್ಕೆ ಓಟು ಕೊಡಿ, ಹಸ್ತಕ್ಕೆ ನಿಮ್ಮ ಬೆಂಬಲ ಎನ್ನುವಲ್ಲಿ ಮಾತ್ರ ನಿರತವಾಗಿರುವುದು ಜನರಲ್ಲಿ ಅಸಮಧಾನಕ್ಕೆ ಕಾರಣವಾಗಿದೆ. ಸಿ.ಪಿ.ಐ.(ಎಂ)ನ ಕಾರ್ಯಕರ್ತರು ಮಾತ್ರ ಮತಕ್ಕಿಂತ ಮಹತ್ವವನ್ನು ಜನತೆಯ ಸಂಕಷ್ಟಗಳ ಪರಿಹಾರಕ್ಕೆ ಮಾರ್ಗಗಳನ್ನು ಸೂಚಿಸುತ್ತಾ ತಮ್ಮ ಪಕ್ಷದ ನೇತೃತ್ವ ವಹಿಸಿರುವ ಕೇರಳ, ಪ.ಬಂಗಾಳ, ತ್ರಿಪುರದ ಎಡರಂಗ ಸರ್ಕಾರಗಳ ಸಾಧನೆ, ಜನತೆಯ ಸಾಮರಸ್ಯ ಬದುಕಿನ ಬಗ್ಗೆ ವಿವರಿಸುತ್ತಿದ್ದಾರೆ.

ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ತೀವ್ರವಾಗಿಯೇ ಕಾಡುತ್ತಿದ್ದು ಕೆ.ಜಿ.ಎಫ್.ನಲ್ಲಿ ಗಣಿ ಮುಚ್ಚುವಿಕೆಯಿಂದ ನಿರುದ್ಯೋಗ ಆಕಾಶಕ್ಕೇರಿದೆ. ಕೆ.ಜಿ.ಎಫ್.ನ ಹಲವು ಪ್ರದೇಶಗಳಲ್ಲಿ ಬಿಕೋ ವಾತಾವರಣ ಕಾಣಸಿಗುತ್ತಿದೆ. ಪಕ್ಕದ ನಗರಗಳಿಗೆ ಉದ್ಯೋಗಕ್ಕಾಗಿ ಪ್ರತಿನಿತ್ಯ ವಲಸೆ ಪ್ರಾರಂಭಿಸಿದ್ದಾರೆ. ಜಿಲ್ಲೆಯ ಹಲವು ಯುವ ಜನತೆ ಸಮಾಜ ವಿರೋಧಿ ಕೃತ್ಯಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಜಿಲ್ಲೆಯ ಭವಿಷ್ಯ ಆತಂಕದೆಡೆ ಸಾಗುತ್ತಿರುವುದು ಸ್ಪಷ್ಟವಾಗುತ್ತಿದೆ.

ಎಂಥಾ ಹೆಂಗಸರು!

ಕೋಲಾರದ ಯಾವ ಭಾಗದಲ್ಲೂ ಕೇಳುವ ಸಾಮಾನ್ಯ ಪ್ರಶ್ನೆಯಾಗಿದೆ. ಸಿ.ಪಿ.ಐ.(ಎಂ) ಮಹಿಳಾ ಸಂಘಟನೆಯ ಮುಖಂಡರು, ವಿದ್ಯಾರ್ಥಿನಿಯರು ಚುನಾವಣೆಯ ಪ್ರಚಾರದಲ್ಲಿ ತೊಡಗಿರುವುದು ಇಲ್ಲಿಯ ಜನತೆಗೆ ಆಶ್ಚರ್ಯದ ಜೊತೆ ವಿಸ್ಮಯ ಕೂಡ. ಜನರ ಗಮನ ತಮ್ಮತ್ತ ಸೆಳೆಯಲು ಹಾಡುವುದು, ಪಾದರಸದಂತೆ ಓಡಾಡಿ ಕರಪತ್ರ ಹಂಚುವುದು, ಜನರು ಸೇರಿದ ಕೂಡಲೇ ಭಾಷಣ ಮಾಡುವುದು, ಸ್ಥಳೀಯ ಸಮಸ್ಯೆಗಳ ಜೊತೆಗೆ ಆಂಧ್ರ, ಬೀದರ್, ಗುಲ್ಬರ್ಗದಲ್ಲಿ ಹತ್ತಿ ಬೆಳೆಗಾರರು ಆತ್ಮಹತ್ಯ ಮಾಡಿಕೊಂಡ ಕಾರಣ, ವಿದ್ಯುತ್ ಸಮಸ್ಯೆ, ಪ.ಬಂಗಾಳದಲ್ಲಿ ವಿದ್ಯುತ್ ಪೂರೈಕೆಯ ಸಾಧನೆ, ಬಿ.ಜೆ.ಪಿ.ಯ ಉತ್ತರ ಪ್ರದೇಶದ 'ಶುದ್ಧತೆ', ಗುಜರಾತಿನ 'ಸ್ಥಿರತೆ', ವಾಜಪೇಯಿಯವರ ಸ್ವಾತಂತ್ರ್ಯ ಹೋರಾಟದ ಪಾತ್ರ, ಕಾಂಗ್ರೆಸ್ಸಿನ ಬ್ರಹ್ಮಾಂಡ ಭ್ರಷ್ಟತೆ, ಸಂಯುಕ್ತ ರಂಗದ ಹಾಗೂ ಸಿ.ಪಿ.ಐ.(ಎಂ) ಪಾತ್ರದ ಬಗ್ಗೆ ಮಾತನಾಡುವಾಗ ನಿಜವಾಗಿಯು ಜನತೆ ಆಶ್ಚರ್ಯ ವ್ಯಕ್ತ ಪಡಿಸುವುದೇ ಅಲ್ಲ ನಮ್ಮ ಎಂ.ಎಲ್.ಎ.ಗಳಿಗೆ ಇಷ್ಟು ಜ್ಞಾನ ಇದ್ದರೆ ನಮ್ಮ ಸಂಕಷ್ಟಗಳು ಎಷ್ಟು ಪರಿಹಾರ ಆಗುತ್ತಿದ್ದವು, ಎಂಥ ಹೆಂಗಸರು ಸಾರ್ ನಿಮ್ಮ ಪಕ್ಷದವರು ಎನ್ನುತ್ತಾರೆ. ಎಲ್ಲಾ ಪಕ್ಷಗಳ ಹಲವು ಮುಖಂಡರುಗಳು ವಾರದ ಸಂತೆಗಳಲ್ಲಿ ನಡೆಯುವ ಸಭೆಗಳಲ್ಲಿ ಬಿ.ಜೆ.ಪಿ. ಅಭ್ಯರ್ಥಿಯೂ ಸೇರಿದಂತೆ ಹಲವು ಮುಖಂಡರು ಸಿ.ಪಿ.ಐ.(ಎಂ) ಕಾರ್ಯಕರ್ತರ ಭಾಷಣಗಳನ್ನು ಕೇಳಿಸಿಕೊಳ್ಳುತ್ತಿದ್ದಾರೆಂದರೆ ಪ್ರಚಾರದ ವೈಖರಿಯ ಮಹತ್ವ ಎಷ್ಟೆಂದು ಅರಿಯಬಹುದಾಗಿದೆ.


ಶೂನ್ಯದಲ್ಲಿ ಸಂಪಾದನೆ!

ಮಾಲೂರು: ಇದು ಕೋಲಾರದ ಒಂದು ತಾಲೂಕು ಕೇಂದ್ರ. ಇಲ್ಲಿ ಕೋಲಾರದ ಹಾಗೆ ವಿದ್ಯಾರ್ಥಿ-ಯುವಜನತೆಯ ಸಂಘಟನೆಯಿಲ್ಲ. ಮುಳಬಾಗಲು-ಚಿಂತಾಮಣಿಯ ರೀತಿಯಲ್ಲಿ ಪಕ್ಷದ ಪ್ರಭಾವವಿಲ್ಲ. ಕೆ.ಜಿ.ಎಫ್., ಬಂಗಾರಪೇಟೆಯಲ್ಲಿರುವಂತೆ ಕಾರ್ಮಿಕ ಸಂಘಟನೆಯ ಸುಳಿವಿಲ್ಲ. ಶ್ರೀನಿವಾಸಪುರದ ಹಾಗೆ ಗ್ರಾಮಪಂಚಾಯತ್-ಅಂಗನವಾಡಿ ನೌಕರರು ಸಂಘಟಿತರಾಗಿಲ್ಲ. ರೈತ ಸಂಘವಂತೂ ಕಾಣಸಿಗುತ್ತಿಲ್ಲ. ತೆಲಂಗಾಣ ಹೋರಾಟದ ನೆನಪಷ್ಟೆ ಇಲ್ಲಿರುವುದು. ಆದರೂ ಅಲ್ಲಿಯ ಪ್ರತಿ ಹಳ್ಳಿಗಳಿಗೂ ಕೆಂಬಾವುಟದ ಪರಿಚಯವಾಗಿದೆ. ಕಮ್ಯುನಿಸ್ಟ್ ಪಕ್ಷವನ್ನು ಗೌರವಿಸುತ್ತಾರೆ. ಯಾರಿಗೂ ಪ್ರವೇಶವಿಲ್ಲದ ಗ್ರಾಮಗಳಿಗೆ ಮುಕ್ತ ಸ್ವಾಗತ ಕೋರುತ್ತಾರೆ-ಇಡೀ ಮಾಲೂರು ವಿಧಾನಸಭಾ ಕ್ಷೇತ್ರದ ಜವಬ್ದಾರಿಯನ್ನು ಬೆಂಗಳೂರು ಜಿಲ್ಲಾ ಸಮಿತಿ ವಹಿಸಿಕೊಂಡು ಹಳೆಯ ಸ್ಥಳೀಯರಾದ ಜಿ. ರಾಮಯ್ಯ, ಪ್ರಕಾಶ್.ಕೆ ಮುಖಂಡತ್ವದಲ್ಲಿ ಯುವಜನ, ವಿದ್ಯಾರ್ಥಿ, ಕಾರ್ಮಿಕ, ಮಹಿಳಾ ಹೀಗೆ ಹಲವು ಸಂಘಟನೆಗಳ ಮುಖಂಡರುಗಳು ಹಾಗೂ ಕಾರ್ಯಕರ್ತರು ಮಾಲೂರು ಜನತೆಯ ಮನದಾಳದಲ್ಲಿದ್ದಾರೆ. ಯಾವುದೇ ಒಬ್ಬ ಸ್ಥಳೀಯ ಕಾರ್ಯಕರ್ತರಿಲ್ಲದೆ ಇಡೀ ಕ್ಷೇತ್ರದ ತುಂಬಾ ಪ್ರತಿ ಮನೆಮನೆಗೂ ಹೋಗಿ ಮತ ಕೇಳುವುದಂತೂ ಸಾಹಸವೇ ಸರಿ. ಬಿ.ಜೆ.ಪಿ.ಯವರ ಬೆದರಿಕೆ ಹಾಗೂ ಹಲ್ಲೆಗಳಿಗೆ ಹೆದರದೆ ಬಿ.ಜೆ.ಪಿ.ಯ ಹೂರಣವನ್ನು ಬಿಚ್ಚಿ ಇಟ್ಟಿರುವುದಂತೂ ಬಿ.ಜೆ.ಪಿ.ಯವರಿಗೆ ನುಂಗಲಾರದ ತುತ್ತಾಗಿರುವುದಲ್ಲದೆ ಅದರ ಪ್ರಭಾವ ಕಡಿಮೆಯಾಗಿದೆ. ಪ್ರಚಾರ ಹೇಗಿತ್ತು ಎಂದರೆ ಇವರ ಸಭೆಗಳಿಗೆ ಕಾಂಗ್ರೆಸ್-ಬಿ.ಜೆ.ಪಿ. ಇಬ್ಬರೂ ಸೇರಿರುತ್ತಿದ್ದರು.

ಪುಟ 8 ನೋಡಿ

ಬಂಗಾರಪೇಟೆ ಬಸ್ ನಿಲ್ದಾಣದಲ್ಲಿ ಕಲಾ ತಂಡದ 'ಕಬ್ಬಡ್ಡಿ' ನಾಟಕ ಪ್ರದರ್ಶನ





ಸಿಪಿಐ(ಎಂ)ಗೊಂದು ವೆಬ್‌ಸೈಟು

ಸಿಪಿಐ(ಎಂ) ವೆಬ್‌ಸೈಟು ಹೊಂದಿದೆ. ಆ ಮೂಲಕ ಸಂಪರ್ಕ ತಂತ್ರಜ್ಞಾನದ ಅತ್ಯಾಧುನಿಕ ರೂಪವಾದ 'ಇಂಟರ್‌ನೆಟ್'ನ್ನು ಬಳಸಲಾರಂಭಿಸಿದೆ ಎಂದು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಏನಪ್ಪಾ ಇದು ವೆಬ್‌ಸೈಟು? ಈ ಸೈಟು ಎಷ್ಟು ದೊಡ್ಡದು? ದಿಲ್ಲಿಯಲ್ಲೊ ಬೆಂಗಳೂರಿನಲ್ಲೋ? ಪಾರ್ಟಿಗೆ ಈ ಸೈಟಿನಲ್ಲೊಂದು ಕಟ್ಟಡ ಕಟ್ಟಬಹುದೇ? ಎಂದೆಲ್ಲಾ ನೀವು ತಲೆ ಕೆರೆದು ಕೊಂಡಿರಬೇಕು.

ವೆಬ್‌ಸೈಟು ಕಟ್ಟಡ ಕಟ್ಟಬಹುದಾದ ಸೈಟಲ್ಲ. ವೆಬ್‌ಸೈಟು ಎಂದರೆ 'ಇಂಟರ್‌ನೆಟ್' ಎಂಬ ಕಂಪ್ಯೂಟರ್ ಜಾಲದಲ್ಲಿ ಮಾಹಿತಿ ಕೊಡುವ ಒಂದು ವಿಶಿಷ್ಟ ಕಂಪ್ಯೂಟರ್ ಅಷ್ಟೇ. ಇದೇನು 'ಇಂಟರ್‌ನೆಟ್' ಎಂದಿರಾ? 'ಇಂಟರ್‌ನೆಟ್' ಎಂದರೆ ಜಗತ್ತಿನ 150 ಕ್ಕೂ ಹೆಚ್ಚು ದೇಶಗಳನ್ನು ವ್ಯಾಪಿಸಿರುವ ಎರಡು ಕೋಟಿಗೂ ಹೆಚ್ಚು ಕಂಪ್ಯೂಟರ್‌ಗಳನ್ನು ಜೋಡಿಸುವ ಜಾಲ. ಅಭಿವೃದ್ಧ ದೇಶಗಳಲ್ಲಿ (ಉದಾ: ಅಮೆರಿಕದಲ್ಲಿ ಮನೆಗಳನ್ನೂ ತಲುಪಿರುವ) ವ್ಯಾಪಕವಾಗಿ ಹಬ್ಬಿರುವ ಕಂಪ್ಯೂಟರ್ ಜಾಲ. ವೆಬ್‌ಸೈಟಿನಲ್ಲಿರುವ ಮಾಹಿತಿಯನ್ನು 'ಇಂಟರ್‌ನೆಟ್'ಗೆ ಜೋಡಿಸಿರುವ ಯಾವುದೇ ಕಂಪ್ಯೂಟರ್‌ನಿಂದ (ಅದು ಜಗತ್ತಿನ ಯಾವುದೇ ಮೂಲೆಯಲ್ಲಿರಲಿ) ಕ್ಷಣ ಮಾತ್ರದಲ್ಲಿ ಪಡೆಯಬಹುದು. (ಇಂಟರ್‌ನೆಟ್ ಮತ್ತು ವೆಬ್‌ಸೈಟು ಬಗ್ಗೆ ಈಗಾಗಲೇ ದೀರ್ಘವಾದ ಲೇಖನವೊಂದನ್ನು ನೀವು ಐಕ್ಯರಂಗದಲ್ಲಿ ಓದಿರುವಿರಿ)

ವೆಬ್‌ಸೈಟು ಸ್ಥಾಪಿಸುವುದು ಎಂದರೆ ಜಗತ್ತಿನ ಎರಡು ಕೋಟಿಗೂ ಹೆಚ್ಚು ಕಂಪ್ಯೂಟರ್‌ಗಳು ಹಾಗೂ ಅವುಗಳನ್ನು ಬಳಸುವ ಇನ್ನೂ ದೊಡ್ಡ ಸಂಖ್ಯೆಯ ಜನರನ್ನು ಮುಟ್ಟಿದಂತೆ. ವೆಬ್‌ಸೈಟು ಸ್ಥಾಪಿಸುವುದು ಎಂದರೆ ರೇಡಿಯೊ, ಟಿವಿ ತರಹದ ಸಾಮೂಹಿಕ ಪ್ರಸಾರ ಮಾಧ್ಯಮ ಹೊಂದಿದಂತೆ. ಹಿಂದೂ, ಡೆಕ್ಕನ್ ಹೆರಾಲ್ಡ್ ನಂತಹ ಪತ್ರಿಕೆಗಳು ತಮ್ಮದೇ ವೆಬ್‌ಸೈಟು ಹೊಂದಿವೆ. ಈ ಪತ್ರಿಕೆಗಳು ವೆಬ್‌ಸೈಟು ಹೊಂದುವುದು ಎಂದರೆ 'ಇಂಟರ್‌ನೆಟ್'ಗೆ ಸಂಪರ್ಕ ಹೊಂದಿರುವ ಎಲ್ಲಾ ಜನರಿಗೆ ದಿನಾ ಪೇಪರ್ ಹಾಕಿದಂತೆ. ಜಗತ್ತಿನ ಯಾವುದೇ ಮೂಲೆಯಲ್ಲಿರುವ ಭಾರತೀಯ ತನ್ನ ನೆಚ್ಚಿನ ಪತ್ರಿಕೆ ಓದಬಹುದು. ಈ ಎರಡು ಪತ್ರಿಕೆಗಳ ವೆಬ್‌ಸೈಟುಗಳಲ್ಲಿ ಬರುವ 'ವರ-ವಧು ಬೇಕಾಗಿದ್ದಾರೆ' ಕಾಲಂಗಳು ವಿದೇಶಗಳಲ್ಲಿರುವ ಭಾರತೀಯರಲ್ಲಿ ಜನಪ್ರಿಯವಾಗಿವೆಯಂತೆ!

ಆದರೆ ಸಿಪಿಐ(ಎಂ) ಪಾರ್ಟಿಗೆ ಏಕೆ ಈ ವೆಬ್‌ಸೈಟು ಉಸಾಬರಿ ಎಂದಿರಾ? ಇದಕ್ಕೆ ಉತ್ತರಿಸುವ ಮೊದಲು ಒಂದು ಸಾಮೂಹಿಕ ಮಾಧ್ಯಮವಾಗಿ 'ಇಂಟರ್‌ನೆಟ್ ವೆಬ್‌ಸೈಟ್'ನ ವಿಶೇಷತೆ ಏನು ಎಂದು ತಿಳಿದುಕೊಳ್ಳಬೇಕು. 'ಇಂಟರ್‌ನೆಟ್ ವೆಬ್‌ಸೈಟು' ಅತ್ಯಂತ ಅಗ್ಗದ, ಅತ್ಯಂತ ವೇಗದ, ದೇಶದ ಗಡಿಗಳನ್ನು ಲೀಲಾಜಾಲವಾಗಿ ದಾಟುವ ಮಾಧ್ಯಮ. ಅತ್ಯಂತ ಅಗ್ಗದ ಯಾಕೆಂದರೆ, ಮಾಹಿತಿ ತಯಾರಿಸಲು ಮಾತ್ರ ಖರ್ಚು. ಅದನ್ನು ಪ್ರಸಾರ ಮಾಡಲು ಖರ್ಚೇ ಇಲ್ಲ.

ಸಿಪಿಐ(ಎಂ) ನ 'ಇಂಟರ್‌ನೆಟ್ ವೆಬ್‌ಸೈಟ್' ಗೆ ಈಗ ಹೋಗೋಣ. ಸೈಟು 'ಹೊಕ್ಕ' ಕೂಡಲೇ ಮೊದಲು ಕಾಣುವುದು ಬೋಟ್‌ಕ್ಲಬ್‌ನ ಐತಿಹಾಸಿಕ ವಿಶಾಲ ಎಡ ರ್‍ಯಾಲಿಯ ಹಿನ್ನೆಲೆ ಮತ್ತು ಮೇಲೆ ತಿರುಗುತ್ತಿರುವ ಕುಡುಗೋಲು ಸುತ್ತಿಗೆ. ಇಲ್ಲಿಂದ 'ಒಳಗೆ' ಹೋದರೆ ಪಾರ್ಟಿ ಕಾರ್ಯಕ್ರಮ, ಸಂವಿಧಾನ, ದಸ್ತಾವೇಜುಗಳು, ಚುನಾವಣೆ, ಪಾರ್ಟಿ ಸಂಘಟನೆ, ಪ್ರಕಟಣೆಗಳು, ಸಾಮೂಹಿಕ ಸಂಘಟನೆಗಳು, ರಾಜ್ಯ ಸರಕಾರಗಳು, ಫೋಟೊ ಗ್ಯಾಲರಿ, ಕಮ್ಯುನಿಸ್ಟ್ ಕೊಂಡಿಗಳು ಮತ್ತು 'ಸಿಪಿಐ(ಎಂ) ಮಾತನಾಡುತ್ತದೆ' ಮುಂತಾದವುಗಳಿಗೆ ಮೀಸಲಾದ 'ಕೋಣೆ'ಗಳು ಸಿಗುತ್ತವೆ. ನಿಮಗೆ ಇಷ್ಟವಾದ 'ಕೋಣೆ'ಗೆ ಹೋಗಿ. ನಿಮಗೆ ಇಷ್ಟವಾದ ಮಾಹಿತಿ ತೆಗೆದುಕೊಳ್ಳಿ. 'ಹೊರ'ಬನ್ನಿ. ಇತರ ಇಷ್ಟವಾದ 'ಕೋಣೆ'ಗಳಿಗೆ ಒಂದೊಂದಾಗಿ ಹೋಗಿ. ಉದಾಹರಣೆಗೆ 'ಪ್ರಕಟಣೆಗಳು' ಕೋಣೆಗೆ ಹೋಗಿ. ಅಲ್ಲಿ ಪೀಪಲ್ಸ್ ಡೆಮೊಕ್ರಸಿ, ಮಾರ್ಕ್ಸಿಸ್ಟ್‌ಗಳ ಇತ್ತೀಚಿನ ಪ್ರತಿ ಸಿಗುತ್ತದೆ. ಪಾರ್ಟಿಯ ಐದು ದೈನಿಕಗಳು ದೊರೆಯುತ್ತವೆ. ಪಾರ್ಟಿಯ ದೈನಿಕಗಳಾದ ಬಂಗಾಳಿ ಭಾಷೆಯ 'ಗಣಶಕ್ತಿ' ಮತ್ತು ಮಲಯಾಳಂ ಭಾಷೆಯ 'ದೇಶಾಭಿಮಾನಿ' ತಮ್ಮದೇ 'ಇಂಟರ್‌ನೆಟ್ ವೆಬ್‌ಸೈಟು' ಹೊಂದಿವೆ. ಆದರೆ ಸಿಪಿಐ(ಎಂ) ನ ಸೈಟಿನ 'ಪ್ರಕಟಣೆಗಳು' ಕೋಣೆಯಿಂದ ನೇರವಾಗಿ ಆ ಸೈಟುಗಳಿಗೆ 'ಜಿಗಿಯು'ಬಹುದು. 'ಸಿಪಿಐ(ಎಂ) ಮಾತನಾಡುತ್ತದೆ' ಕೋಣೆಯಲ್ಲಿ ಇತ್ತೀಚಿನ ಪಾರ್ಟಿ ಪೊಲಿಟ್‌ಬ್ಯೂರೋ, ಕೇಂದ್ರಸಮಿತಿ ಹೇಳಿಕೆಗಳು ಸಿಗುತ್ತವೆ. ವೆಬ್‌ಸೈಟಿಗೆ ಹೋಗುವುದು ಎಂದರೆ ಸಿಪಿಐ(ಎಂ) ನ ಆಫೀಸಿಗೆ ಹೋಗಿ ಬಂದಂತೆ. ಇನ್ನು 'ಕಮ್ಯುನಿಸ್ಟ್ ಕೊಂಡಿಗಳು' ಕೋಣೆಗೆ ಹೋಗಿ. ಅಲ್ಲಿಂದ 'ಇಂಟರ್‌ನೆಟ್' ವೆಬ್‌ಸೈಟು ಹೊಂದಿರುವ ಜಗತ್ತಿನ ಯಾವುದೇ ಕಮ್ಯುನಿಸ್ಟ್ ಪಾರ್ಟಿಯ ಸೈಟಿಗೆ ಜಿಗಿಯಬಹುದು. ಅಲ್ಲದೆ ಮಾರ್ಕ್ಸ್, ಎಂಗೇಲ್ಸ್‌ರ ಮತ್ತು ಇತರ ಮಾರ್ಕ್ಸ್‌ವಾದಿ ಕೃತಿಗಳನ್ನು ಓದಬೇಕೆನಿಸಿದರೆ ಅವು ಇರುವ ಸೈಟುಗಳಿಗೂ ಜಿಗಿಯಬಹುದು.

ಇಷ್ಟೆಲ್ಲಾ ನೀವು ಮನೆಯಲ್ಲಿ ಕೂತಲ್ಲೆ ಮಾಡಬಹುದು - ನಿಮ್ಮ ಮನೆಯಲ್ಲಿ ಕಂಪ್ಯೂಟರ್, ಟೆಲಿಫೋನ್ ಮತ್ತು ಇಂಟರ್‌ನೆಟ್ ಕನೆಕ್ಷನ್ ಇದ್ದರೆ. ಇದು ದೊಡ್ಡ 'ರೆ' ಎಂದಿರಾ? ನಮ್ಮದೇಶದಲ್ಲಿ 'ಇಂಟರ್‌ನೆಟ್' ಸೌಲಭ್ಯ ಪ್ರಮುಖ ನಗರಗಳಲ್ಲಿ ಈಗ ಲಭ್ಯವಿದೆ. ಈಗಾಗಲೆ 60 ಸಾವಿರಕ್ಕೂ ಹೆಚ್ಚು 'ಇಂಟರ್‌ನೆಟ್' ಸಂಪರ್ಕಗಳಿವೆ. ಮನೆಗಳಲ್ಲದಿದ್ದರೂ ಆಫೀಸುಗಳಲ್ಲಿ 'ಇಂಟರ್‌ನೆಟ್' ಈಗಾಗಲೇ ಸಾಮಾನ್ಯವಾಗಿಬಿಟ್ಟಿದೆ - ಒಂದು ಸಂಪರ್ಕ ಮಾಧ್ಯಮವಾಗಿ - ಫೋನು, ಫ್ಯಾಕ್ಸುಗಳಂತೆ.

ವೆಬ್‌ಸೈಟು ಪಾರ್ಟಿಯ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಸಂಪರ್ಕಗಳನ್ನು ಗಟ್ಟಿಗೊಳಿಸುತ್ತದೆ. 'ವೆಬ್‌ಸೈಟು' ಪಾರ್ಟಿಯ ಇನ್ನೊಂದು ಸಾಮೂಹಿಕ ಮಾಧ್ಯಮ. ಅಲ್ಲದೆ ದೇಶದೊಳಗೆ ಕನಿಷ್ಠ ಜಿಲ್ಲಾ ಸಮಿತಿ ಕಚೇರಿಗಳು ಕಂಪ್ಯೂಟರ್, ಟೆಲಿಫೋನ್ ಮತ್ತು ಇಂಟರ್‌ನೆಟ್ ಸಂಪರ್ಕ ಹೊಂದುವಂತಾದರೆ ಪಾರ್ಟಿ ಘಟಕಗಳ ನಡುವೆ ಸಂಪರ್ಕ ಚುರುಕಾಗುತ್ತದೆ, ವೇಗದಿಂದ ಆಗುತ್ತದೆ. ಪ್ರಮುಖ ಪೊಲಿಟ್‌ಬ್ಯೂರೋ ಕೇಂದ್ರ ಸಮಿತಿ ಹೇಳಿಕೆಗಳನ್ನು ವೆಬ್‌ಸೈಟಿನಲ್ಲಿ ಇಟ್ಟರಾಯ್ತು. ಜಿಲ್ಲಾ ಸಮಿತಿಗಳವರೆಗೆ ಕೆಲವೇ ನಿಮಿಷಗಳಲ್ಲಿ ತಲುಪುತ್ತದೆ. ಐ.ಎನ್.ಎನ್, ಪಾರ್ಟಿ ದೈನಿಕ, ವಾರಪತ್ರಿಕೆಗಳಿಗೆಲ್ಲಾ ಸುದ್ದಿ ವಿತರಣೆ ಕೆಲವೇ ನಿಮಿಷಗಳಲ್ಲಿ ಮಾಡಬಹುದು. 'ಪೀಪಲ್ಸ್ ಡೆಮಾಕ್ರಸಿ' ಗಾಗಿ ದಿನಗಟ್ಟಲೆ ಕಾಯಬೇಕಾಗಿಲ್ಲ. ಆಳುವ ವರ್ಗದ ಅಪಪ್ರಚಾರದ ದಾಳಿಯನ್ನು ಎದುರಿಸಲು 'ವೆಬ್ ಸೈಟು' ಮತ್ತು 'ಇಂಟರ್‌ನೆಟ್' ಬಹಳ ಸಹಾಯಕವಾಗುತ್ತದೆ.

ಹಣವಂತರ ಸೇವೆಯಲ್ಲಿರುವ ಪಕ್ಷ ಬಿ.ಜೆ.ಪಿ.

ಬಿಜೆಪಿ ಹಣವಂತರ ಭ್ರಷ್ಟಾಚಾರಿಗಳ ಹಿತ ಕಾಯುವ ಪಕ್ಷ ಎಂಬುದಕ್ಕೆ ಬೇಕಾದಷ್ಟು ಪುರಾವೆಗಳು ದೊರಕುತ್ತವೆ. 1996 ರ ಸಾರ್ವತ್ರಿಕ ಚುನಾವಣೆಗಳಲ್ಲಿ ದೊಡ್ಡ ವ್ಯಾಪಾರಸ್ಥರು ಈ ಪಕ್ಷವನ್ನು ಬೆಂಬಲಿಸಿದರು. ಒಂದು ಸಮೀಕ್ಷೆಯ ಪ್ರಕಾರ ಶ್ರೀಮಂತರಲ್ಲಿ ಶೇ 48 ರಷ್ಟು ಜನ ಬಿಜೆಪಿಗೆ ಮತ ನೀಡಿದರೆ ಬಡವರು ಎಂದು ಕರೆಸಿಕೊಳ್ಳುವರಲ್ಲಿ ಬರೀ ಶೇ14 ರಷ್ಟು ಜನ ಬಿಜೆಪಿಗೆ ಮತ ನೀಡಿದರು.

ಈ ಹಣವಂತರಿಗೇಕೆ ಬಿಜೆಪಿಯ ಮೇಲೆ ಇಷ್ಟು ಪ್ರೀತಿ? ಇದು ಸಹಜವಾಗಿಯೇ ಏಳುವ ಪ್ರಶ್ನೆ. ಯಾಕೆಂದರೆ ಬಿ.ಜೆ.ಪಿ ಈ ಹಣವಂತರ/'ಉಳ್ಳವರ' ಹಿತಾಸಕ್ತಿಗಳನ್ನು ಶತಾಯಗತಾಯ ಕಾಯುತ್ತದೆಯಾದ್ದರಿಂದ.

ದೇಶಪ್ರೇಮ ಮಾರಾಟಕ್ಕಿದೆ

ಟಾಟಾಗಳ ಟಾಟಾ ಟೀ ಎಂಬ ಕಂಪನಿ ಅಸ್ಸಾಮಿನಲ್ಲಿ ಉಲ್ಫಕ್ಕೆ ಹಣ ನೀಡಿದ ವಿಷಯ ಹೊರಗೆ ಬಂದು ರಾದ್ಧಾಂತವಾಯಿತು. ಆಗ ನುಸ್ಲಿವಾಡಿಯಾ ಎಂಬ ಟಾಟಾರ ಸ್ನೇಹಿತ ಬಿ.ಜೆ.ಪಿ.ಯ ಅಧ್ಯಕ್ಷರನ್ನು ಸಂಪರ್ಕಿಸಿದ. ಅಸ್ಸಾಮಿನ ರಾಜ್ಯಪಾಲರಾದ ಶ್ರೀ ಸಿನ್ಹಾ ಅವರು ಅಡ್ವಾಣಿಯವರಿಗೆ ನಿಕಟ ಪರಿಚಯದವರಾದ್ದರಿಂದ ಅವರ ಮೂಲಕ ಟಾಟಾಗಳಿಗೆ ನೆರವು ದೊರಕಿಸುವ ಪ್ರಯತ್ನ ಈತನದ್ದು. ಈ ನುಸ್ಲಿವಾಡಿಯಾನೂ ಬಿ.ಜೆ.ಪಿ.ಗೆ ಹಣದ ಥೈಲಿ ನೀಡುವವನೆ.

ಹವಾಲ ಪ್ರಕರಣ

ಹವಾಲ ಪ್ರಕರಣವಂತೂ ಈಗ ಜಗಜ್ಜಾಹೀರು. ಕಾಶ್ಮೀರದ ಭಯೋತ್ಪಾದಕರಿಗೆ ಹವಾಲ ಹಣದ ನೆರವು ನೀಡುವವರೇ ಈ ಹವಾಲದ ಮೂಲಕ ಅಡ್ವಾಣಿಯವರಿಗೂ ಹಣ ನೀಡಿದವರೂ. ಅಡ್ವಾಣಿಯವರ ಮೇಲಿನ ಪ್ರಕರಣ ಯಾವುದೋ ತಾಂತ್ರಿಕ ಕಾರಣಕ್ಕಾಗಿ ಬಿದ್ದು ಹೋಯಿತೆಂಬುದು ಬೇರೆ ವಿಷಯ. ಆದರೆ ಅಡ್ವಾಣಿ ಹಣ ಪಡೆದಿರಲಿಲ್ಲವೆ? ಪಡೆದಿದ್ದಾರೆ ಎಂಬುದು ಖಚಿತ. ಹವಾಲ ಸಂಚುಗಾರ ಜೈನ್ ಅವರ ದಿನಚರಿಯಲ್ಲಿ ಅಡ್ವಾಣಿಯವರೊಂದೇ ಹೆಸರಲ್ಲ, ಇತರ ಹಲವರ ಹೆಸರುಗಳಿದ್ದವು. ಅವರಲ್ಲಿ ಜನತಾದಳದ ಶರದ್ ಯಾದವ್ ಒಬ್ಬರು. ಶರದ್ ಯಾದವ್ ತಾವು ಹಣ ಪಡೆದದ್ದು ನಿಜವೆಂದು ಒಪ್ಪಿಕೊಂಡರು. ಅಡ್ವಾಣಿ ತಾವು ಹಣ ಪಡೆದಿಲ್ಲವೆಂದು ಹೇಳಿದರು ಅಷ್ಟೇ.

ಹಿಂದೂಜಾ ಮತ್ತು ಬೋಫೋರ್ಸ್

1989ರಲ್ಲಿ ವಿ.ಪಿ. ಸಿಂಗರು ಅಧಿಕಾರಕ್ಕೆ ಬಂದಾಗ ಬೋಫೋರ್ಸ್ ಹಗರಣದ ತನಿಖೆ ಪ್ರಾರಂಭವಾಯಿತು. ಆಗ ಐದು ಜನ ಸ್ವಿಸ್‌ನ ಕೋರ್ಟ್‌ಗಳಿಗೆ ಭಾರತ ಸರಕಾರಕ್ಕೆ ಯಾವುದೇ ತರಹದ ಮಾಹಿತಿ ನೀಡಬಾರದೆಂಬ ಬೇಡಿಕೆ ಸಲ್ಲಿಸಿದರು. ಬೋಫೋರ್ಸ್ ಏಜೆಂಟ್ ವಿನ್ ಛಡ್ಡಾ, ಒಟಾವಿಯಾ ಮತ್ತು ಮರಿಯೋ ಕ್ವಟ್ರೂಚಿ ದಂಪತಿಗಳು ಮತ್ತು ಹಿಂದೂಜಾ ಸಹೋದರರೇ ಆ ಐವರು. ಬೋಫೋರ್ಸ್ ಲಂಚದ ಹಣದ ಸುಮಾರು 16 ಕೋಟಿ ರೂಪಾಯಿಗಳಷ್ಟು ಜುಬಿಲಿ ಫೈನಾನ್ಸ್ ಕಾರ್ಪೋರೇಷನ್ ಎಂಬುದಕ್ಕೆ ಹೋಗಿದೆಯಂತೆ. ಇದಕ್ಕೂ ಹಿಂದೂಜಾಗಳಿಗೂ ಸಂಬಂಧ ಇದೆಯೆನ್ನಲಾಗುತ್ತಿದೆ.

ನಮ್ಮ ಬಿ.ಜೆ.ಪಿ. ನೇತಾರರಾದ ಅಡ್ವಾಣಿ, ವಾಜಪೇಯಿಯವರು ಕ್ವಟ್ರೂಚಿಗಳ ಬಗೆಗೆ ಮಾತನಾಡಿದರೂ ಹಿಂದೂಜಾಗಳ ಬಗ್ಗೆ ಉಸಿರೆತ್ತುವುದನ್ನೇ ಮರೆತು ಬಿಡುತ್ತಾರೆ. ಯಾಕೆ?

ಹಿಂದೆ 1992ರಲ್ಲಿ ವಾಜಪೇಯಿಯವರು ಆಗಿನ ಪ್ರಧಾನಮಂತ್ರಿಗಳಾದ ಪಿ.ವಿ.ನರಸಿಂಹ ರಾವ್‌ರವರಿಗೆ ಪತ್ರ ಬರೆದು ಹಿಂದೂಜಾ ಅವರು ನಮ್ಮ ಸ್ವಿಸ್ ಖಾತೆಗಳ ತನಿಖೆಗೆ ಒಪ್ಪಿದ್ದಾರೆಂದು ತಿಳಿಸಿದರು. ಅವರು ಹೇಳುವ ಈ ಖಾತೆ ಬೋಫೋರ್ಸ್ ಹಗರಣಕ್ಕೆ ಸಂಬಂಧಿಸಿದ್ದಾಗಿರಲಿಲ್ಲ.

ವಾಜಪೇಯಿ ಒಂದು ಭಾರತೀಯ ಸಂಸದರ ತಂಡಕ್ಕೆ ನಾಯಕರಾಗಿದ್ದರು. ಈ ತಂಡ 1995ರಲ್ಲಿ ಲಂಡನ್ನಿಗೆ ಹೋಗಿತ್ತು. ಆಗ ಹಿಂದೂಜಾಗಳು ಈ ತಂಡವನ್ನು ಜಲ ವಿಹಾರಕ್ಕೆ ಕರೆದು ಕೊಂಡು ಹೋದರು. ಈ ವಿಷಯವನ್ನು ಸಂಸದರಿಗೆ ಮೊದಲೇ ತಿಳಿಸಿರಲಿಲ್ಲ. ಈ ವಿಹಾರ ಸಮಯದಲ್ಲಿ ಹಿಂದೂಜಾಗಳು ಭಾರತದಲ್ಲಿ ಆಡಳಿತವನ್ನು ಹೇಗೆ ನಡೆಸಬೇಕೆಂಬ ಬಗ್ಗೆ ಭಾಷಣ ಬಿಗಿದರು. ವಾಜಪೇಯಿ ಸಹಿತ ಎಲ್ಲರೂ ಮೂಕ ಪ್ರೇಕ್ಷಕರಾದರು. ಸಿ.ಪಿ.ಐ.(ಎಂ)ನ ಸಂಸದ ಸೋಮನಾಥ ಚಟರ್ಜಿಯವರು ಮಾತ್ರ ಇದನ್ನು ತೀವ್ರವಾಗಿ ಪ್ರತಿಭಟಿಸಿದರು.

ಸಂಸದರ/ಶಾಸಕರ ಕೊಳ್ಳುವಿಕೆ

ಇದರಲ್ಲಿ ಸಂಘ ಪರಿವಾರ ನಿಪುಣತೆಯನ್ನು ಸಾಧಿಸಿದೆ ಎಂಬುದು ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಸಾಬೀತಾಯಿತು.

ಎಂತಹ ಉದಾರಿಗಳು ಈ ಬಿ.ಜೆ.ಪಿಯವರೆಂದರೆ ಪಕ್ಷಾಂತರ ಮಾಡಿದ ಪ್ರತಿಯೊಬ್ಬನಿಗೂ ಮಂತ್ರಿ ಪದವಿ ನೀಡಿದರು.

ಕೇಂದ್ರದಲ್ಲಿ ಸಂಯುಕ್ತ ರಂಗ ಸರಕಾರ ಬಿದ್ದಾಗಲೂ ಬಿ.ಜೆ.ಪಿ. ಇಂತಹ ಪ್ರಯತ್ನವನ್ನೇ ಮಾಡಿತು. ಬರೀ ನಲವತ್ತು ಸಂಸದರು ತಮ್ಮೊಡನೆ ಸೇರಲು ಸಮ್ಮತಿಸಿದ್ದಾರೆಂದು ಹೇಳುವಾಗ ಅಡ್ವಾಣಿಯವರ ಮುಖ ಇಂಗು ತಿಂದವರ ಮುಖದಂತಿತ್ತು.

'ಸಹಾರ' ಎಂಬ ಕಂಪನಿಯೊಂದಿದೆ. ಹಲವು ಹತ್ತು ವಹಿವಾಟುಗಳನ್ನು ಹೊಂದಿರುವ ಕಂಪನಿ ಇದು. ಇದರ ಠೇವಣಿಗಳ ಮೊತ್ತ ನೂರಾರು ಕೋಟಿಗಳಾದ್ದರಿಂದ ವರಮಾನ ತೆರಿಗೆಯ ತನಿಖೆ ನಡೆಯಿತು. ಆಗ ತಮ್ಮ ಸಮರ್ಥನೆಗೆ ಅವರು ಹೇಳಿದ್ದು "ಅಟಲ್ ಬಿಹಾರಿ ವಾಜಪೇಯಿಯವರೂ ನಮ್ಮ ಒಬ್ಬ ಠೇವಣಿದಾರರು" ಎಂದು!

ಆರ್ಥಿಕ ನೀತಿ

ವಾಜಪೇಯಿವರು ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಎಂತಹ ಆರ್ಥಿಕ ನೀತಿ ಅನುಸರಿಸುತ್ತದೆ ಎಂಬ ಬಗ್ಗೆ ದೊಡ್ಡ ದೊಡ್ಡ ಮಾತನಾಡುತ್ತಾರೆ. ಆದರೆ ಅಂತಹ ಆರ್ಥಿಕವನ್ನು ಹೇಗೆ ಸಾಧಿಸುತ್ತೀರಿ ಎಂದರೆ ಉತ್ತರವಿಲ್ಲ. 'ಸ್ವದೇಶಿ' ಎಂಬ ದೊಡ್ಡ ಮಾತನ್ನೂ ಆಡುತ್ತಾರೆ. ಜನವರಿ 20 ರಂದು ಬಂದ ಒಂದು ವರದಿಯ ಪ್ರಕಾರ ಬಿ.ಜೆ.ಪಿ. ತಾನು ಅಧಿಕಾರಕ್ಕೆ ಬಂದರೆ ಆರು ತಿಂಗಳುಗಳ ಕಾಲ ವಿದೇಶೀ ಹೂಡಿಕೆಗಳಿಗೆ ಬಂಧನ ಘೋಷಿಸುತ್ತದೆ ಎಂದಿತು. ದೊಡ್ಡ ಬಂಡವಾಳಿಗರು ಧೀವಾರಿ ಹಾಕಿದರು. ಕೂಡಲೇ ಬಿ.ಜೆ.ಪಿ. ನಾಯಕರು ವರದಿಯನ್ನು ಅಲ್ಲಗೆಳೆದರು.

ಹೀಗೆ ಬಿ.ಜೆ.ಪಿ. ನಾನಾ ವಿಧದಲ್ಲಿ ಹಣವಂತರ ಸೇವೆಯಲ್ಲಿ ತೊಡಗಿದೆ. ಇಂತಹ ಸೇವೆಯನ್ನು ಅದು ನೀಡುತ್ತಿರವಾಗ ಬಿ.ಜೆ.ಪಿ.ಗೆ ಹಣಕಾಸು ನೆರವು ನೀಡುವುದು ಮತ್ತು ಅದಕ್ಕೆ ಪ್ರತಿಫಲವಾಗಿ ಒಂದಕ್ಕೆರಡನ್ನು ಪಡೆಯುವುದು ಹಣವಂತರ ಕರ್ತವ್ಯವಲ್ಲವೇ?



ಕೊಯಮತ್ತೂರು ಹಿಂಸಾಚಾರ



ಫೆಬ್ರವರಿ 14 ರಂದು ಕೊಯಮತ್ತೂರಿನಲ್ಲಿ ನಡೆದ ಭೀಕರ ಘಟನೆ ಕೇವಲ ಚುನಾವಣೆಯ ಸಂದರ್ಭದ ಘಟನೆಯಲ್ಲ - ಇದು ಮುಸ್ಲಿಂ ಮೂಲಭೂತವಾದಿಗಳ ಕೃತ್ಯವಾದರೂ ಆರ್.ಎಸ್.ಎಸ್. ಕೂಡಾ ಇದಕ್ಕೆ ನೇರ ಹೊಣೆ - ಇದನ್ನು ಬಯಲಿಗೆಳೆಯಬೇಕು, ಕಾರ್ಮಿಕ ವರ್ಗ ಈ ಎರಡೂ ರೀತಿಯ ಕೋಮುವಾದದ ಸವಾಲನ್ನು ಎದುರಿಸಬೇಕು ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್

ಕಾರ್ಮಿಕ ಆಂದೋಲನಕ್ಕೊಂದು ಗಂಭೀರ ಎಚ್ಚರಿಕೆ

ಕೊಯಮತ್ತೂರನ್ನು ಆವರಿಸಿದ ಹಿಂಸಾಚಾರದ ಅಲೆ ಈಗ ಭೀಕರ ಬಾಂಬ್ ಸ್ಫೋಟದ ರೂಪ ಪಡೆದು 50 ಕ್ಕೂ ಹೆಚ್ಚುಜನರ ಬಲಿತೆಗೆದುಕೊಂಡಿದೆ. 200 ಮಂದಿ ಗಾಯಗೊಂಡಿದ್ದಾರೆ. ಇದು ಆ ನಗರದ ಕಾರ್ಮಿಕ ವರ್ಗಕ್ಕೆ ಹಾಗೂ ಎಲ್ಲಾ ಜಾತ್ಯಾತೀತ ಭಾವನೆಯ ನಾಗರೀಕರಿಗೆ ಒಂದು ಗಂಭೀರ ಎಚ್ಚರಿಕೆ.

ಕೊಯಮತ್ತೂರು ದಕ್ಷಿಣ ಭಾರತದ ಒಂದು ಪ್ರಮುಖ ಕೈಗಾರಿಕಾ ಕೇಂದ್ರ. ಇದು ಕಾರ್ಮಿಕ ಆಂದೋಲನದ ಒಂದು ಕೋಟೆ ಕೂಡಾ. 1940 ರ ದಶಕದಿಂದ ಆರಂಭವಾಗುವ ಒಂದು ದೀರ್ಘ ಇತಿಹಾಸವಿರುವ ಆಂದೋಲನ ಅದು. ಈ ನಗರದಲ್ಲಿ ಕಾರ್ಮಿಕ ಆಂದೋಲನವನ್ನು ರೂಪಿಸುವಲ್ಲಿ ಕಮ್ಯುನಿಸ್ಟ್ ನೇತೃತ್ವದ ಕಾರ್ಮಿಕ ಸಂಘಗಳು ಒಂದು ಮಹತ್ವದ ಪಾತ್ರ ವಹಿಸಿವೆ. ಕೆ.ಆರ್.ರಮಣಿ, ಪಾರ್ವತಿ ಕೃಷ್ಣನ್‌ರಂತಹ ಕಮ್ಯುನಿಸ್ಟ್ ಮುಖಂಡರನ್ನು ಲೋಕಸಭೆಗೆ ಆರಿಸಿ ಕಳಿಸಿದ ನಗರ ಇದು. ಈ ಕೈಗಾರಿಕಾ ಕೇಂದ್ರದ ಜವಳಿ, ಇಂಜಿನಿಯರಿಂಗ್ ಮತ್ತು ಇತರ ಕಾರ್ಖಾನೆಗಲಲ್ಲಿ ಸಂಘಟಿತ ಕಾರ್ಮಿಕ ವರ್ಗದ ಆಂದೋಲನ ಬಲವಾದ ಬೇರು ಬಿಟ್ಟಿದೆ. ಕಾರ್ಮಿಕ ವರ್ಗದ ಅಸಂಖ್ಯ ಹೋರಾಟಗಳನ್ನು ಕಂಡಿರುವ ಕೊಯಮತ್ತೂರಿನಲ್ಲಿ ಒಂದು ಆಧುನಿಕ ಕೈಗಾರಿಕಾ ಸಂಸ್ಕೃತಿ ಇದೆ. ಬಂಡವಾಳಶಾಹಿಗಳು ಮತ್ತುಕಾರ್ಮಿಕ ವರ್ಗ ಎರಡರಲ್ಲೂ ಹರಡಿರುವ ಸಂಸ್ಕೃತಿ ಇದು.

ಕೇವಲ ಚುನಾವಣಾ ಹಿಂಸಾಚಾರವಲ್ಲ

ಈ ಸಮೃದ್ಧಿ ಹೊಂದುತ್ತಿರುವ ಉದ್ದಿಮೆಗಳ ಹಾಗೂ ಕಾರ್ಮಿಕ ವರ್ಗದ ಆಂದೋಲನಗಳ ಕೇಂದ್ರ, ಈಗ ಕೋಮುವಾದಿ ವಿಭಜನೆಯ, ಧಾರ್ಮಿಕ ಮೂಲಭೂತವಾದದ ದುಷ್ಟ ಹಾಗೂ ವಿನಾಶಕಾರಿ ಬೆದರಿಕೆಯನ್ನು ಎದುರಿಸುತ್ತಿದೆ. ಫೆಬ್ರವರಿ 14 ರಂದು ಈ ನಗರದಲ್ಲಿ ಭಾರೀ ಅನಾಹುತ ಮಾಡಿದ ಬಾಂಬ್ ಸ್ಫೋಟಗಳು ಈ ನಗರದ ಸಾಮಾಜಿಕ ಹಂದರವನ್ನೇ ಮುಕ್ಕಾಗಿಸಲು ಹೊರಟಿರುವ ಮತಿಹೀನ ಹಿಂಸಾಚಾರದ ಪ್ರತೀಕ. ಚುನಾವಣೆಯ ಸಮಯಕ್ಕೆಂದು ಈ ಸ್ಫೋಟಗಳನ್ನು ಯೋಜಿಸಲಾಗಿತ್ತು ಎಂಬುದೇನೋ ನಿಜ. ಆದರೆ ಇದನ್ನು ಕೋಮುವಾದಿಗಳು ಉದ್ದೇಶಪೂರ್ವಕವಾಗಿಯೇ ಆರಂಭಿಸಿದ ಘಟನಾವಳಿಗಳಿಂದ ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ.

ಈ ಬಾಂಬ್ ಧಾಳಿಯ ಒಂದು ಗುರಿ ಎಲ್.ಕೆ.ಅಡ್ವಾಣಿಯಾಗಿದ್ದರಿಂದ ಈ ಸಂದರ್ಭವನ್ನು ಬಳಸಿಕೊಂಡು ಬಿಜೆಪಿ ಈ ಘಟನೆಗಳು 'ವೋಟ್‌ಬ್ಯಾಂಕ್ ರಾಜಕಾರಣ' ದ ಫಲಿತಾಂಶ ಎಂಬಂತೆ ಚಿತ್ರಿಸಲು, ಮುಸ್ಲಿಂ ಮೂಲಭೂತವಾದಿಗಳ ಬಗ್ಗೆ ಡಿ.ಎಂ.ಕೆ. ಸರಕಾರದ ಮೃದು ನಿಲುವು ಕಾರಣ ಎಂದು ದೂಷಿಸಲು ಪ್ರಯತ್ನಿಸುತ್ತಿದೆ. ಈ ಇತ್ತೀಚಿನ ಹಿಂಸಾಕೃತ್ಯ ತೀವ್ರಗಾಮಿ ಮುಸ್ಲಿಂ ಮೂಲಭೂತವಾದಿಗಳದ್ದು ಎಂಬುದರಲ್ಲಿ ಸಂದೇಹವಿಲ್ಲವಾದರೂ ಕೊಯಮತ್ತೂರು ಮತ್ತು ತಮಿಳುನಾಡಿನ ಇತರೆಡೆಗಳಲ್ಲಿ ಕೋಮುವಾದಿ ಧ್ರುವೀಕರಣ ತರಲು ಕೆಲಸ ಮಾಡುತ್ತಿರುವ ಆರ್.ಎಸ್.ಎಸ್. ಮತ್ತು ಹಿಂದುತ್ವ ಶಕ್ತಿಗಳ ದುಷ್ಟ ಯೋಜನೆಯನ್ನು ಬಯಲಿಗೆಳೆಯಬೇಕು.

ಹಿಂದೂ ಕೋಮುವಾದಿಗಳ ಸೈದ್ಧಾಂತಿಕ ಹಾಗೂ ರಾಜಕೀಯ ಪ್ರಭಾವದಿಂದ ಮುಕ್ತವಾಗಿದ್ದ ಕೆಲವು ರಾಜ್ಯಗಳಲ್ಲಿ ತಮಿಳುನಾಡು ಒಂದು. ಎಂಭತ್ತರ ದಶಕದ ಆರಂಭದಿಂದಲೇ ಆರ್.ಎಸ್.ಎಸ್. ಇಲ್ಲಿ ತೂರಿಕೊಳ್ಳಲು ಯೋಜನೆ ಆರಂಭಿಸಿತು. ಜನಸಂಖ್ಯೆಯ ವಿಧಾನದಿಂದಾಗಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಸೃಷ್ಟಿಸಲು ಅವಕಾಶವಿರುವ ಕನ್ಯಾಕುಮಾರಿ ಜಿಲ್ಲೆ ಮತ್ತು ದಕ್ಷಿಣ ತಮಿಳುನಾಡಿನ ಕೆಲವು ನಿರ್ದಿಷ್ಟ ಸ್ಥಳಗಳಲ್ಲದೆ ಆರ್.ಎಸ್.ಎಸ್. ಆರಿಸಿದ ಪ್ರಮುಖ ಗುರಿಗಳಲ್ಲಿ ಕೊಯಮತ್ತೂರು ಕೂಡಾ ಒಂದು.

ಧಾರ್ಮಿಕ ಉತ್ಸವಗಳ ಮರೆಯಲ್ಲಿ ಕೋಮುವಾದ

1980 ರಲ್ಲಿ ಆರ್.ಎಸ್.ಎಸ್. ತಮಿಳುನಾಡಿನಲ್ಲಿ ತನ್ನ ರಾಜಕೀಯ ಹಾಗೂ ಕೋಮುವಾದಿ ಚಟುವಟಿಕೆಗಳಿಗಾಗಿ 'ಹಿಂದೂ ಮುನ್ನಾಣಿ' ಯನ್ನು ರಚಿಸಿತು. ಕೊಯಮತ್ತೂರಿನಲ್ಲಿ ಅದು ಚಟುವಟಿಕೆ ಆರಂಭಿಸಿತು. ಈ ಒಂದೂವರೆ ದಶಕದಲ್ಲಿ ಹಿಂದೂ ಮುನ್ನಾಣಿ ಆರ್.ಎಸ್.ಎಸ್. ಕೂಟದ ವೇದಿಕೆಯಾಗಿ ಕೆಲಸ ಮಾಡಿದೆ. ಬೇರೆ ಹಲವು ಪಟ್ಟಣಗಳ ಕೈಗಾರಿಕಾ ಕೇಂದ್ರಗಳಂತೆ ಇಲ್ಲಿಯೂ ಒಂದು ನಿರ್ದಿಷ್ಟ ರೀತಿಯಲ್ಲೇ ಬೆಳವಣಿಗೆಗಳು ನಡೆದವು. ವಿನಾಯಕ ಚತುರ್ಥಿಯಂತಹ ಧಾರ್ಮಿಕ ಮೆರವಣಿಗೆಗಳನ್ನು ನಡೆಸಲು ಪ್ರೋತ್ಸಾಹಿಸಲಾಯಿತು. ಅದುವರೆಗೆ ತಮಿಳುನಾಡಿನಲ್ಲಿ ಇಂತಹ ಧಾರ್ಮಿಕ ಮೆರವಣಿಗೆಗಳ ಕ್ರಮವಿರಲಿಲ್ಲ. ಮಹಾರಾಷ್ಟ್ರದ ಗಣೇಶ ಚತುರ್ಥಿಯ ಮೆರವಣಿಗೆಗಳಂತೆ ಇವನ್ನು ಕೋಮುವಾದಿ ಪ್ರಚಾರದ, ಅಲ್ಪಸಂಖ್ಯಾತರ ವಿರುದ್ಧ ಅಪಪ್ರಚಾರದ ಸಾಧನಗಳಾಗಿ ಬಳಸಲಾಯಿತು. ಇದರಿಂದ ಗಂಭೀರ ಪರಿಸ್ಥಿತಿಗಳು ಏರ್ಪಡಲಾರಂಭಿಸಿದವು. ಇಂತಹ ಮೆರವಣಿಗೆಗಳಿಂದಾಗಿ ಮದ್ರಾಸ್ ನಗರದಲ್ಲಿ ಹಲವು ಘಟನೆಗಳು ನಡೆದವು ಎಂಬುದಿಲ್ಲಿ ನೆನಪಿಸಿಕೊಳ್ಳಬಹುದು. ಆರ್.ಎಸ್.ಎಸ್. ರಚಿಸಿದ ಇನ್ನೊಂದು ಸಂಘಟನೆಯೆಂದರೆ ತಮಿಳುನಾಡು ಹಿಂದೂ ವರ್ತಕರ ಸಂಘ ಎಂಬುದು ಗಮನಾರ್ಹ. ಹಿಂದೂ ವರ್ತಕರನ್ನು ಉದ್ರೇಕಿಸಲು, ಮುಸ್ಲಿಂ ವ್ಯಾಪಾರಸ್ಥರೊಂದಿಗೆ ವಾಣಿಜ್ಯ ಸ್ಪರ್ಧೆಗಳಿಗೆ ಕೋಮುಬಣ್ಣ ನೀಡಲು ಇದನ್ನು ಬಳಸಲಾಯಿತು.

ಕೋಮುವಾದಿ ಸ್ಪರ್ಧೆಯಲ್ಲಿ ಶಾಂತಿಭಂಗ

ಹಿಂದೂ ಮುನ್ನಾಣಿ ವೇದಿಕೆಯಿಂದ ಅಲ್ಪಸಂಖ್ಯಾತರ ವಿರುದ್ಧ ಮತ್ತು ಇಸ್ಲಾಮಿನ ವಿರುದ್ಧ ಉದ್ರೇಕಕಾರಿ ಅಪಪ್ರಚಾರಕ್ಕೆ ಪ್ರತಿಕ್ರಿಯೆ ಬರಲೂ ತಡವಾಗಲಿಲ್ಲ. ಅದುವರೆಗೆ ಕಂಡುಕೇಳರಿಯದ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಆರ್.ಎಸ್.ಎಸ್. ಪ್ರಾಯೋಜಿತ ಚಟುವಟಿಕೆಗಳನ್ನು ಎದುರಿಸಲು ಹುಟ್ಟಿಕೊಂಡವು. ಜೆಹಾದ್ ಕಮಿಟಿ ಮತ್ತು ಅಲ್-ಉಮ್ಮ ಇಂತಹ ಕೋಮುವಾದಿ ಸ್ಪರ್ಧೆಯ ಫಲಗಳು.

ಆಗಸ್ಟ್ 1989 ರಲ್ಲಿ ಕೊಯಮತ್ತೂರಿನಲ್ಲಿ ಒಬ್ಬ ಹಿಂದೂ ಮುನ್ನಾಣಿ ಕಾರ್ಯಕರ್ತನ ಕೊಲೆಯಾಯಿತು. ಸೆಪ್ಟೆಂಬರ್ 1991 ರಲ್ಲಿ ಇಂತಹ ಇನ್ನೊಂದು ಕೊಲೆ ನಡೆಯಿತು. ಅದಕ್ಕೆ ಪ್ರತಿಯಾಗಿ ಅದೇ ದಿನ ಒಬ್ಬ ಮುಸ್ಲಿಂ ಮೌಲ್ವಿಯ ಕೊಲೆಯಾಯಿತು. ಬಾಬ್ರಿ ಮಸೀದಿ ಧ್ವಂಸದ ನಂತರ ಮುಸ್ಲಿಂ ಪ್ರಾಬಲ್ಯದ ಪ್ರದೇಶಗಳಲ್ಲಿ ಭುಗಿಲೆದ್ದ ಹಿಂಸಾಚಾರದಲ್ಲಿ ಅಲ್ - ಉಮ್ಮ ಮೂಡಿಬಂತು. ಈ ರಾಜ್ಯದಲ್ಲಿ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಬೆಳೆದದ್ದು ಬಾಬ್ರಿ ಮಸೀದಿ ಧ್ವಂಸದ ನಂತರ. ಈ ಸಂಘಟನೆಗಳು ಇದಕ್ಕೆ ಪ್ರತಿಯಾಗಿ ಎಸಗಿದ ಒಂದು ಕೃತ್ಯವೆಂದರೆ 1993 ರಲ್ಲಿ ಚೆನ್ನೈನಲ್ಲಿ ಆರ್.ಎಸ್.ಎಸ್. ಕಛೇರಿಯಲ್ಲಿನ ಸ್ಫೋಟ. ಇದರಲ್ಲಿ 11 ಮಂದಿ ಸತ್ತರು.

ಕೊಯಮತ್ತೂರು ಆರ್.ಎಸ್.ಎಸ್. ನೇತೃತ್ವದ ಹಿಂದೂ ಮುನ್ನಾಣಿ ಮತ್ತು ಹಿಂದೂ ಮಕ್ಕಳ್ ಕಚ್ಚಿ ಹಾಗೂ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳಾದ ಅಲ್-ಉಮ್ಮ ಹಾಗೂ ಜೆಹಾದ್ ಕಮಿಟಿ ಮುಂತಾದವುಗಳ ಪರಸ್ಪರ ಹಲ್ಲೆ-ಪ್ರತಿಹಲ್ಲೆಗಳ ಕೇಂದ್ರವಾಯಿತು. 1993 ರಲ್ಲಿ ಹಿಂದೂ ಮುನ್ನಾಣಿಯ ಅಧ್ಯಕ್ಷ ರಾಜಗೋಪಾಲ್ ಕೊಲೆಯಾಯಿತು. ಜನವರಿ 1997 ರಲ್ಲಿ ಜೆಹಾದ್ ಕಮಿಟಿಯ ಪಳನಿಬಾಬನ ಕೊಲೆಯಾಯಿತು. ಈ ಎರಡೂ ಕೊಲೆಗಳ ನಂತರ ಹಿಂಸಾಚಾರ ವ್ಯಾಪಕವಾಗಿ ನಡೆಯಿತು. ಮತ್ತೆ ಸೆಪ್ಟೆಂಬರ್ 1997 ರಲ್ಲಿ ಕೋಮುವಾದಿ ಹಿಂಸಾಚಾರ ನಡೆಯಿತು.

ಮಾರಣಹೋಮದ ಹಿನ್ನೆಲೆ

ಈ ಘಟನೆಗಳ ಸರಮಾಲೆಯಲ್ಲಿ ಮುಂದಿನದ್ದೆಂದರೆ ಕೇವಲ ಮೂರು ತಿಂಗಳ ಹಿಂದೆ 1997 ರ ನವಂಬರ್ 29 ರಿಂದ ಡಿಸೆಂಬರ್ 1 ರವರೆಗೆ ಇಲ್ಲಿ ನಡೆದ ಅಭೂತಪೂರ್ವ ಹಿಂಸಾಚಾರ. ಕೆಲವು ಉಗ್ರಗಾಮಿ ಮುಸ್ಲಿಂ ಯುವಕರು ನಡೆಸಿದ ಒಬ್ಬ ಟ್ರಾಫಿಕ್ ಪೋಲೀಸ್ ಕಾನ್ಸ್‌ಟೇಬಲ್ ಅಮಾನುಷ ಹತ್ಯೆಯೊಂದಿಗೆ ಇದು ಆರಂಭವಾಯಿತು. ಅದಕ್ಕೆ ಪ್ರತಿಕಾರವಾಗಿ ಮೂರು ದಿನಗಳ ಕಾಲ ಕೊಲೆ, ಸುಲಿಗೆ, ಬೆಂಕಿ ಹಚ್ಚುವ ಕೃತ್ಯಗಳು ನಡೆದವು. ಪೋಲೀಸರೂ ಬಂಡಾಯದ ಸ್ಥಿತಿಯಲ್ಲಿದ್ದರು. ಇದರಲ್ಲಿ 18 ಮುಸ್ಲಿಮರು, ಇಬ್ಬರು ಹಿಂದೂಗಳು ಸತ್ತರು. ಕೋಮುವಿಷ ಎಂತಹ ಅಮಾನವೀಯ ಹಾಗೂ ಪಶುಪ್ರವೃತ್ತಿ ಯನ್ನು ಹುಟ್ಟಿಸುತ್ತೆಂಬುದನ್ನು ಜನರಲ್ ಆಸ್ಪತ್ರೆಯಲ್ಲಿನ ಒಂದು ಘಟನೆ ತೋರಿಸಿತು. ದಂಗೆಗಳಲ್ಲಿ ಗಾಯಗೊಂಡ ಮುಸ್ಲಿಮರನ್ನು ಆಸ್ಪತ್ರೆಗೊಯ್ಯುವಾಗ ಅದನ್ನು ಹಿಂದೂ ಮತಾಂಧ ಗುಂಪೊಂದು ಮಾರ್ಗ ಮಧ್ಯದಲ್ಲೇ ತಡೆದು ಅವರಲ್ಲಿ ಮೂವರನ್ನು ಪೋಲೀಸರ ಕಣ್ಣೆದುರೇ ಜಜ್ಜಿ ಹಾಕಿ ಸುಟ್ಟುಬಿಡಲಾಯಿತು. ಆ ವೇಳೆಯಲ್ಲಿ ನಗರಕ್ಕೆ ಭೇಟಿ ನೀಡಿದ್ದ ಪಿಯುಸಿಎಲ್ ನಾಗರಿಕ ಹಕ್ಕುಗಳ ತಂಡ ಇಂತಹ ಅತ್ಯಾಚಾರಗಳ ಹೃದಯ ನಾಟುವ ಘಟನೆಗಳನ್ನು ದಾಖಲಿಸಿಕೊಂಡಿದೆ. ಅಲ್ಪಸಂಖ್ಯಾತರಿಗೆ ಸೇರಿದ ಅಂಗಡಿ-ವ್ಯಾಪಾರ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ಲೂಟಿ ಮಾಡಿ ಅಗ್ನಿಗಾಹುತಿ ಮಾಡಲಾಯಿತು.

ಎಂದಿನಂತೆ ಕೆಲವು ಮೂಲಭೂತವಾದಿಗಳು ಹತ್ತಿದ ಕಿಡಿಗೆ ಪ್ರತಿಯಾಗಿ ಹೊಡೆತದ ಬಹುಪಾಲನ್ನು ಮುಸ್ಲಿಂ ಸಮುದಾಯವೇ ಎದುರಿಸಬೇಕಾಯಿತು. ಆಡಳಿತದ ಜಾತ್ಯಾತೀತ ನಿಷ್ಪಕ್ಷಪಾತದ ಬಗ್ಗೆ ಒಮ್ಮೆ ಅಲ್ಪ ಸಂಖ್ಯಾತರಲ್ಲಿ ವಿಶ್ವಾಸ ಹಾರಿಹೋಯಿತೆಂದರೆ ಅವರಲ್ಲಿ ಪರಕೀಯ ಭಾವನೆ ಬೆಳೆಯಲಾರಂಭಿಸುತ್ತದೆ - ಇದು ಮೂಲಭೂತವಾದಿಗಳಿಗೆ ತಮ್ಮ ಚಟುವಟಿಕೆಗಳನ್ನು ಹೆಚ್ಚಿಸಲು ಇನ್ನಷ್ಟು ಅವಕಾಶ ನೀಡುತ್ತದೆ. ಕೊಯಮತ್ತೂರಿನಲ್ಲಿ ಇಸ್ಲಾಮೀ ಮೂಲಭೂತವಾದಿ ಶಕ್ತಿಗಳಿಗೆ ವಿದೇಶಗಳಿಂದ ನೆರವು ಬರುತ್ತಿದೆ ಎಂಬುದಕ್ಕೆ ಸಾಕಷ್ಟು ಸೂಚನೆಗಳಿವೆ.

ಮುಸ್ಲಿಂ ಸಮುದಾಯದ ಮೇಲಿನ ಈ ಮಾರಣಹೋಮದ ಹಿನ್ನೆಲೆಯಲ್ಲಿ ಕಳೆದವಾರದ ಬಾಂಬ್‌ಸ್ಫೋಟಗಳು ನಡೆದಿವೆ. ಈ ಘಟನೆಗೆ ಪ್ರತೀಕಾರವೆಂಬಂತೆ ಇದು ಈಗ ನಡೆದಿದೆ. ಮುಂಬೈ ನಗರದಲ್ಲಿ 1993 ರಲ್ಲಿ ನಡೆದ ಘಟನೆಗಳ ರೀತಿಯಲ್ಲೇ ಎಂಬುದು ಇನ್ನಷ್ಟು ಆಂತಕಕಾರಿ. ಅಲ್ಲಿ ಅಲ್ಪಸಂಖ್ಯಾತ ಸಮುದಾಯದ ಮೇಲೆ ವ್ಯಾಪಕ ಹಿಂಸಾಚಾರದ, ಪೋಲೀಸ್ ಅತ್ಯಾಚಾರಗಳ ನಂತರ, ಅದಕ್ಕೆ ಪ್ರತೀಕಾರವಾಗಿ ಬಾಂಬ್ ಸ್ಫೋಟಗಳು ನಡೆದವು.

ಮುಸ್ಲಿಂ ಮೂಲಭೂತವಾದಿ ಗಳಷ್ಟೇ ಕಾರಣರಲ್ಲ

ಈ ಎಲ್ಲಾ ಬೆಳವಣಿಗೆಗಳನ್ನು ನಿರ್ಲಕ್ಷಿಸಿ ಒಂದೇ ಅಂಶದ ಬಗ್ಗೆ ರಾಗ ಹಾಡುವುದು ಇಸ್ಲಾಮಿ ಮೂಲಭೂತವಾದಿಗಳು ಹಿಂಸಾಚಾರಕ್ಕೆ ಇಳಿದಿದ್ದಾರೆ ಎಂದು ಚಿತ್ರಿಸುವುದು ಆರ್.ಎಸ್.ಎಸ್. ಮತ್ತು ಬಿಜೆಪಿಯ ಯೋಜನೆಗೆ ಬಹಳ ಅನುಕೂಲದ ಸಂಗತಿ. ಆದರೆ ಇದರಲ್ಲಿ, ಕೊಯಮತ್ತೂರಿನಲ್ಲಿ ಭೀಕರ ಕೋಮು ಹಿಂಸಾಚಾರದ ಪರಿಸ್ಥಿತಿಯನ್ನು ಸೃಷ್ಟಿಸುವಲ್ಲಿ ಆವರ ಪಾತ್ರವೂ ನೇರವಾಗಿದೆ ಎಂಬುದನ್ನೂ ಬಯಲಿಗೆಳೆಯ ಬೇಕಾಗಿದೆ.

ದ್ರಾವಿಡ ಆಂದೋಲನ ಹಾಗೂ ಅದರ ಸಿದ್ಧಾಂತ ತಮಿಳುನಾಡಿನಲ್ಲಿ ಕೋಮುವಾದದ ಬೆಳವಣಿಗೆಯನ್ನು ತಡೆಯುತ್ತದೆ ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿ ಇದೆ. ಆದರೆ ಇದು ತಮಿಳುನಾಡಿನಲ್ಲೂ, ಭಾರತದಲ್ಲೂ ಇರುವ ಹೊಸ ಸನ್ನಿವೇಶದ ಬಗ್ಗೆ ತಪ್ಪು ತಿಳುವಳಿಕೆಯಿಂದ ಕೂಡಿದ ಅಭಿಪ್ರಾಯ. ಕೋಮು ವಿಷಾಣು ತಮಿಳುನಾಡನ್ನೂ ತಟ್ಟಿದೆ. ಅದನ್ನು ನಿವಾರಿಸಲು ನಿರಂತರವಾದ, ತೀವ್ರವಾದ ಪ್ರಯತ್ನಗಳು ಅಗತ್ಯ. ಎಐಎಡಿಎಂಕೆಯೊಂದಿಗೆ ಬಿಜೆಪಿಯ ಮೈತ್ರಿ ರಾಜ್ಯದಲ್ಲಿ ಆರ್.ಎಸ್.ಎಸ್. ಸಿದ್ಧಾಂತ ಹರಡಲು ಇನ್ನಷ್ಟು ಅವಕಾಶಗಳನ್ನು ಒದಗಿಸಿದೆ. ಧಾರ್ಮಿಕ ಉತ್ಸವಗಳು ಹಾಗೂ ಇತರ ಸಂದರ್ಭಗಳನ್ನು ಅಲ್ಪಸಂಖ್ಯಾತರ ವಿರುದ್ಧ ವಿಷಕಾರಲು ಬಳಸಿಕೊಳ್ಳಲು ಸಂಘಟನೆಗಳನ್ನು ಯಾವ್ಯಾವುದೋ ಹೆಸರಲ್ಲಿ ಸ್ಥಾಪಿಸುವುದು, ನಂತರ ಗಲಭೆಗಳನ್ನು ಸೃಷ್ಟಿಸುವುದು ದೇಶದ ಹಲವು ನಗರಗಳಲ್ಲಿ - ಹೈದರಾಬಾದ್, ಮುಂಬೈ, ಅಹ್ಮದಾಬಾದ್, ಜಮ್‌ಶೆಡ್ ಪುರ, ರೂರ್ಕೆಲಾ ಇತ್ಯಾದಿ - ಕಂಡು ಬಂದಿರುವ ಆರ್.ಎಸ್.ಎಸ್. ನ ಕಾರ್ಯತಂತ್ರ. ಇದು ಮತ್ತೆ-ಮತ್ತೆ ಕಾರ್ಮಿಕ ವರ್ಗದ ಐಕ್ಯತೆಯನ್ನು ಛಿದ್ರಗೊಳಿಸಿದೆ.

ದುಷ್ಟ ಶಕ್ತಿಗಳನ್ನು ಮೂಲೆಗುಂಪು ಮಾಡಬೇಕಾಗಿದೆ

ಕೊಯಮತ್ತೂರು ಮತ್ತು ತಮಿಳುನಾಡಿನಲ್ಲಿ ಕಾರ್ಮಿಕ ವರ್ಗದ ಆಂದೋಲನಕ್ಕೆ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಈ ಭಯಾನಕ ಘಟನೆ ನೀಡಿರುವ ಸಂಕೇತ ಸ್ಪಷ್ಟ. ದುಷ್ಟ ಕೋಮುವಾದದಿಂದ ಕಾರ್ಮಿಕ ಆಂದೋಲನಕ್ಕೆ ಉಂಟಾಗಿರುವ ಅಪಾಯ ಎದ್ದುಕಾಣುತ್ತಿದೆ. ಈ ದುಷ್ಟ ಶಕ್ತಿಗಳನ್ನು ಎದುರಿಸಿ ಹಿಮ್ಮೆಟ್ಟಿಸದಿದ್ದರೆ ಕಾರ್ಮಿಕ ಆಂದೋಲನ ತೀವ್ರ ಹೊಡೆತ ಅನುಭವಿಸಬೇಕಾಗುತ್ತದೆ. ಮುಂಬೈ ನಗರದಲ್ಲಿ ಅರವತ್ತರ ದಶಕದಲ್ಲಿ ಶಿವಸೇನೆಯ ಉದಯದ ನಂತರ ನಡೆದ ಘಟನೆಗಳು ಹೇಗೆ ಪ್ರತಿಗಾಮಿ ಕೋಮುವಾದ ಕಾರ್ಮಿಕ ವರ್ಗವನ್ನು ವಿಭಜಿಸಿ, ಛಿದ್ರಗೊಳಿಸಿ ಆಳುವ, ವರ್ಗಗಳಿಗೆ ನೆರವಾಗುತ್ತವೆ, ಅದರ ಹಿತಾಸಕ್ತಿಗಳನ್ನು ಈಡೇರಿಸುತ್ತವೆ ಎಂಬುದನ್ನು ತೋರಿಸಿಕೊಟ್ಟಿದೆ. ಕೊಯಮತ್ತೂರಿನ ಬೆಳವಣಿಗೆಗಳ ನಿಜವಾದ ವರ್ಗಸಾರಾಂಶ ಇದು. ಈ ಹಿಂದೆ ಜಾತ್ಯಾತೀತ ನಿಲುವಿನ ಬೂರ್ಜ್ವಾ ಪಕ್ಷಗಳನ್ನು ಬೆಂಬಲಿಸುತ್ತಿದ್ದ ಕೊಯಮತ್ತೂರಿನ ಕೈಗಾರಿಕೋದ್ಯಮಿಗಳ ಒಂದು ವಿಭಾಗ ಈಗಾಗಲೇ ಬಿಜೆಪಿ ಅಭ್ಯರ್ಥಿಗೆ ಹಣಸಹಾಯ ಒದಗಿಸುತ್ತಿವೆ ಎಂಬ ಆತಂಕಕಾರಿ ಸುದ್ದಿ ಬಂದಿದೆ.

ಫೆಬ್ರವರಿ 1997 ರಲ್ಲಿ ಕೊಯಮತ್ತೂರಿನಲ್ಲಿ ಕೋಮುಗಲಭೆಗಳು ನಡೆದಾಗ ಕಾರ್ಮಿಕ ಸಂಘಗಳು ಒಂದು ದೊಡ್ಡ ಮೆರವಣಿಗೆ ನಡೆಸಿ ಶಾಂತಿ ನೆಲೆಸುವಲ್ಲಿ ಮಧ್ಯಪ್ರವೇಶ ಮಾಡಿದವು. ಒಂದು ಪ್ರಜ್ಞಾವಂತ ಕಾರ್ಮಿಕ ವಿಭಾಗ, ಅದಕ್ಕೆ ಬೆಂಬಲವಾಗಿ ಒಂದು ಬಲಿಷ್ಠ ಪ್ರಜಾಪ್ರಭುತ್ವಆಂದೋಲನ ಕೊಯಮತ್ತೂರು ಮತ್ತು ಸುತ್ತಮುತ್ತಲಿ ನಲ್ಲಿದೆ. ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದ ಒಡ್ಡಿರುವ ಈ ಸವಾಲನ್ನು ಎತ್ತಿಕೊಂಡು ಈ ಶಕ್ತಿಗಳ ವಿರುದ್ಧ ಹೋರಾಟವನ್ನು ಮುಂದುವರೆಸಬೇಕು. ಇದಕ್ಕಾಗಿ ವರ್ಗ ಆಧಾರಿತ ಆಂದೋಲನಗಳಲ್ಲಿ ಹಾಗೂ ಒಂದು ಅವಿರತ ರಾಜಕೀಯ-ಸೈದ್ಧಾಂತಿಕ ಸಮರದ ಮೂಲಕ ಜನಗಳನ್ನು ಅಣಿನೆರೆಸಿ ಇನ್ನೂ ಜನಗಳ ನಡುವೆ ಆಳವಾದ ಬೇರು ಬಿಟ್ಟಿರದ ಈ ದುಷ್ಟ ಶಕ್ತಿಗಳನ್ನು ಮೂಲೆಗುಂಪು ಮಾಡಬೇಕು.

> ಧಾರ್ಮಿಕ ಉತ್ಸವಗಳು ಹಾಗೂ ಇತರ ಸಂದರ್ಭಗಳನ್ನು ಅಲ್ಪಸಂಖ್ಯಾತರ ವಿರುದ್ಧ ವಿಷಕಾರಲು ಬಳಸಿಕೊಳ್ಳಲು ಸಂಘಟನೆಗಳನ್ನು ಯಾವ್ಯಾವುದೋ ಹೆಸರಲ್ಲಿ ಸ್ಥಾಪಿಸುವುದು, ನಂತರ ಗಲಭೆಗಳನ್ನು ಸೃಷ್ಟಿಸುವುದು ದೇಶದ ಹಲವು ನಗರಗಳಲ್ಲಿ - ಹೈದರಾಬಾದ್, ಮುಂಬೈ, ಅಹ್ಮದಾಬಾದ್, ಜಮ್‌ಶೆಡ್‌ಪುರ, ರೂರ್ಕೆಲಾ ಇತ್ಯಾದಿ - ಕಂಡು ಬಂದಿರುವ ಆರ್.ಎಸ್.ಎಸ್. ನ ಕಾರ್ಯತಂತ್ರ. ಇದು ಮತ್ತೆ-ಮತ್ತೆ ಕಾರ್ಮಿಕ ವರ್ಗದ ಐಕ್ಯತೆಯನ್ನು ಛಿದ್ರಗೊಳಿಸಿದೆ.

ದೇಶದೊಳಗೆ

ತ್ರಿಪುರಾದಲ್ಲಿ 19 ಜನರ ಹತ್ಯೆ

ತ್ರಿಪುರಾದಲ್ಲಿ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಮಧ್ಯೆ ದ್ವೇಷದ ಕಿಚ್ಚನ್ನು ಹಚ್ಚಿ ಅವರ ಏಕತೆಯನ್ನು ಮುರಿಯುವ ಯತ್ನವನ್ನು ಪ್ರತ್ಯೇಕತಾವಾದಿ ಶಕ್ತಿಗಳು ಇನ್ನೂ ಮುಂದುವರೆಸಿದ್ದಾರೆ. ಫೆ. 11 ರಂದು ಉಗ್ರಗಾಮಿಗಳು ನಾನಾಕಡೆ ಆಕ್ರಮಣ ಮಾಡಿ 19 ಜನರನ್ನು ಕೊಂದು ಹಾಕಿದರು. ಚುನಾವಣೆ ಪ್ರಕ್ರಿಯೆಗೆ ಧಕ್ಕೆ ತರುವುದು ಉಗ್ರಗಾಮಿಗಳ ಉದ್ದೇಶ ವಾಗಿತ್ತು. ಆದರೆ, ಫೆ. 16 ರಂದು ತ್ರಿಪುರಾ ದಲ್ಲಿ ಲೋಕಸಭೆಯ ಎರಡೂ ಸ್ಥಾನಗಳು ಮತ್ತು ವಿಧಾನಸಭೆಯ ಎಲ್ಲಾ 60 ಸ್ಥಾನಗ ಳಿಗೆ ಮತದಾನ ಬಹುತೇಕ ಶಾಂತಿಯುತ ವಾಗಿ ನಡೆಯಿತು. ಇದು ಸಮಾಧಾನದ ಅಂಶವಾಗಿದೆ.

ಸುಳ್ಳಿನ ಸಂತೆಗೆ ಇನ್ನೊಂದು ಕಂತೆ

ಈ ಬಾರಿ ಅಲ್ಲದಿದ್ದರೆ ಇನ್ನೆಂದೂ ಇಲ್ಲ ಎಂಬ ಪ್ರಚಾರದೊಂದಿಗೆ ಮತದಾರರ ಭಾವನೆಗಳ ಮೇಲೆ ಸವಾರಿ ಮಾಡುತ್ತಿರುವ ಭಾರತೀಯ ಜನತಾ ಪಕ್ಷದ ಹಾಗೂ ಅದರ ಮುಖಂಡರ ಸುಳ್ಳಿನ ಕಂತೆಗಳನ್ನು, ವಚನಭಂಗದ ಹಲವಾರು ಪ್ರಕರಣಗಳನ್ನು 'ಐಕ್ಯರಂಗ' ದ ಹಿಂದಿನ ಹಲವು ಸಂಚಿಕೆಗಳಲ್ಲಿ ಓದಿರುವಿರಷ್ಟೆ. 'ರಾಮರಾಜ್ಯ' ಸ್ಥಾಪಿಸುವ ಈ ಪಕ್ಷದವರು ಸುಳ್ಳಿನೊಡನೆ ಸರಸವಾಡುವ ಪರಿಯ ಈಚಿನ ಇನ್ನೊಂದು ಪ್ರಕರಣವನ್ನು ಇಲ್ಲಿ ಕೊಡಲಾಗಿದೆ.

ಬಿಜೆಪಿ ಈಚೆಗೆ ಒಂದು ಕ್ಯಾಲೆಂಡರನ್ನು ಮುದ್ರಿಸಿತ್ತು. ಚುನಾವಣೆ ಸಂದರ್ಭದ ಬಳಕೆಗಾಗಿ ಬಿಡುಗಡೆ ಮಾಡಲಾಗಿದ್ದ ಈ ಕ್ಯಾಲೆಂಡರಿನಲ್ಲಿ ಗುರುಗೋವಿಂದ ಸಿಂಗ್ ಅವರ ಭಾವಚಿತ್ರದೊಂದಿಗೆ ಬಿಜೆಪಿಯ ಉನ್ನತ ನಾಯಕರಾದ ಎಲ್.ಕೆ. ಅಡ್ವಾಣಿ ಮತ್ತು ಎ.ಬಿ.ವಾಜಪೇಯಿ ಮತ್ತಿತರರ ಭಾವಚಿತ್ರಗಳನ್ನು ಮುದ್ರಿಸಲಾಗಿತ್ತು!

ಧಾರ್ಮಿಕ ಮುಖಂಡರ ಭಾವಚಿತ್ರಗಳನ್ನು ಬಳಸುವುದು ಚುನಾವಣೆ ನೀತಿಸಂಹಿತೆಯ ಸ್ಪಷ್ಟ ಉಲ್ಲಂಘನೆ ಆಗಿದೆ. ಈ ಸಂಬಂಧ ಕಾಂಗ್ರೆಸ್ ಪಕ್ಷ ಚುನಾವಣೆ ಆಯೋಗಕ್ಕೆ ದೂರನ್ನು ಸಲ್ಲಿಸಿದೆ.

ಆದರೆ, ಈ ಕ್ಯಾಲೆಂಡರ್ ಸಂಬಂಧವಾಗಿ ಬಿಜೆಪಿಯ ಹಲವು ನಾಯಕರು ಹಲವು ರೀತಿಯ ಹೇಳಿಕೆಗಳನ್ನು ನೀಡುತ್ತಿರುವುದನ್ನು ನೋಡಿದರೆ ಈ ಬಗ್ಗೆ ಅವರು ಬಗೆ ಬಗೆಯ ಸುಳ್ಳನ್ನು ಹೇಳುತ್ತಿದ್ದಾರೆ ಎಂದು ಖಂಡಿತವಾಗಿಯೂ ನಂಬಬಹುದು.

ಬಿಜೆಪಿಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಕೆ.ಎಸ್. ಗೋವಿಂದಾಚಾರ್ಯ ಟಿವಿ ಸಂದರ್ಶನವೊಂದರಲ್ಲಿ ಮಾತನಾಡುತ್ತಾ ಈ ಕ್ಯಾಲೆಂಡರ್ ಹೊರಡಿಸಿದ್ದನ್ನು ಸಮರ್ಥಿಸಿಕೊಂಡರು. ಆದರೆ ಅದೇ ಪಕ್ಷದ ಇನ್ನೊಬ್ಬ ಪ್ರಧಾನ ಕಾರ್ಯದರ್ಶಿ ವೆಂಕಯ್ಯ ನಾಯ್ಡು ಪಕ್ಷದ ಅಧ್ಯಕ್ಷ ಅಡ್ವಾಣಿ ಅಥವಾ ವಾಜಪೇಯಿಗೆ ಗೊತ್ತಿಲ್ಲದೆ ಈ ಕ್ಯಾಲೆಂಡರ್ ಮುದ್ರಣಗೊಂಡಿದೆ ಎನ್ನುತ್ತಾರೆ.

ಈ ಪ್ರಕರಣ ಗಮನಕ್ಕೆ ಬಂದ ಮೇಲೆ, ಕ್ಯಾಲೆಂಡರನ್ನು ಪ್ರಚಾರದ ವೇಳೆ ಬಳಸಿಕೊಳ್ಳದಂತೆ ಕಾರ್ಯಕರ್ತರಿಗೆ ಸೂಚನೆ ನೀಡಲಾಗಿದೆ ಎಂದಿದ್ದಾರೆ. ಕ್ಯಾಲೆಂಡರನ್ನು ಪಕ್ಷ ಹಿಂದೆ ಪಡೆದಿದೆಯೇ ಎಂದು ಸುದ್ದಿಗಾರರು ಪದೇ ಪದೇ ಪ್ರಶ್ನಿಸಿದಾಗ 'ನಾವು ಅದನ್ನು ಬಳಸುವುದಿಲ್ಲ' ಎನ್ನುವುದಷ್ಟೆ ನಾಯ್ಡು ಕೊಟ್ಟ ಉತ್ತರ.

ನವದೆಹಲಿಯ ಅಶೋಕಾ ರಸ್ತೆಯಲ್ಲಿರುವ ಬಿಜೆಪಿ ಕೇಂದ್ರ ಕಛೇರಿಯಿಂದ ಕ್ಯಾಲೆಂಡರನ್ನು ಹೊರಡಿಸಲಾಗಿದೆ ಎಂದು ಕ್ಯಾಲೆಂಡರಿನ ಪ್ರಿಂಟ್ ಲೈನ್‌ನಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಇದನ್ನು ಬಾತ್ಮೀದಾರರು ನಾಯ್ಡು ಗಮನಕ್ಕೆ ತಂದಾಗ, 'ಪಕ್ಷದ ನಾಯಕತ್ವಕ್ಕೆ ಈ ವಿಚಾರ ಗೊತ್ತೇ ಇಲ್ಲ' ಎಂದರು...!

ಹಾಗಾದರೆ ಬಿಜೆಪಿಯ 'ಅನುಮತಿಯಿಲ್ಲದೆ' ಕ್ಯಾಲೆಂಡರ್ ಮುದ್ರಿಸಿದವರ ಮೇಲೆ ಪಕ್ಷ ಕ್ರಮಗಳನ್ನು ಕೈಗೊಳ್ಳುತ್ತದೆಯೇ? ಕ್ಯಾಲೆಂಡರ್ ಮುದ್ರಣದ ವಿಚಾರ ಗೊತ್ತೇ ಇರಲಿಲ್ಲ ಎಂಬ ಹೇಳಿಕೆಯಲ್ಲಿ ಸತ್ಯಾಂಶ ಇರುವುದೇ ಆದಲ್ಲಿ ಅದು ಕ್ರಮ ಕೈಗೊಳ್ಳಲೇಬೇಕಲ್ಲವೇ? ಇಲ್ಲದಿದ್ದಲ್ಲಿ ಇದೂ ಬಿಜೆಪಿಯ ಸುಳ್ಳಿನ ಸಂತೆಯಲ್ಲಿನ ಇನ್ನೊಂದು ಕತೆ ಎಂದು ದೇಶದ ಜನರು ಪರಿಗಣಿಸಬೇಕಾಗುತ್ತದೆ. ಈ ಸುಳ್ಳನ್ನು ಮುಚ್ಚಿಹಾಕಲು ಇನ್ನೊಂದು ಸುಳ್ಳಿನ ಕಂತೆಯನ್ನು ಹೊಸೆಯಬೇಕಾಗುತ್ತದೆ......

ಓಹೋ ಅದಕ್ಕೇನಂತೆ. ಅದಕ್ಕೆ ನಾವು ಸಿದ್ಧ ಅಂತೀರಾ ಭಾಜಪ ನಾಯಕಮಣಿಗಳೇ?

ಬಾಂಬ್ ಸ್ಫೋಟ- ವಿಚಾರಶೀಲರ ವೇದಿಕೆ ಖಂಡನೆ

ಫೆಬ್ರವರಿ 14 ರಂದು ತಮಿಳುನಾಡಿನ ಕೊಯಮತ್ತೂರು ನಗರದಲ್ಲಿ ನಡೆದ ಸರಣಿ ಬಾಂಬ್ ಸ್ಫೋಟವನ್ನು 'ವಿವೇಕ' (ವಿಚಾರಶೀಲರ ವೇದಿಕೆ ಕರ್ನಾಟಕ) ವು ಉಗ್ರವಾಗಿ ಖಂಡಿಸಿದೆ. ಪ್ರಜಾಪ್ರಭುತ್ವದ ಪ್ರಕ್ರಿಯೆಗೆ ಕೊಡಲಿ ಪೆಟ್ಟು ಹಾಕುವ ಪ್ರಯತ್ನ ಇದು ಎಂದಿರುವ ಅದು ಇಂತಹ ಪ್ರಯತ್ನಗಳನ್ನು ಚಿವುಟಿ ಹಾಕುವುದರ ಜೊತೆಗೆ ಇಂತಹ ಕೃತ್ಯಗಳಲ್ಲಿ ತೊಡಗಿದ ದುಷ್ಕರ್ಮಿಗಳನ್ನು ಉಗ್ರವಾಗಿ ಶಿಕ್ಷಿಸಬೇಕೆಂದು ತಮಿಳುನಾಡು ಸರ್ಕಾರವನ್ನು 'ವಿವೇಕ' ಆಗ್ರಹ ಪಡಿಸಿದೆ.

ಈ ಸಂದರ್ಭವನ್ನು ರಾಜಕೀಯ ದುರ್ಲಾಭಗಳಿಗೆ ಬಳಸಿಕೊಳ್ಳಲು ಹವಣಿಸುತ್ತಿರುವ ಎಲ್ಲಾ ಶಕ್ತಿಗಳನ್ನು ಮತ್ತು ರಾಜಕೀಯ ಪಕ್ಷಗಳನ್ನು ಅದು ಅತ್ಯುಗ್ರ ವಾಗಿ ಖಂಡಿಸಿದೆ.

ಮೂಲಭೂತವಾದಿ ಹಾಗೂ ಕೋಮುವಾದಿ ವಿಷವನ್ನು ಹಬ್ಬಿಸುತ್ತಾ ವಾತಾವರಣವನ್ನು ಕಲುಷಿತಗೊಳಿಸು ತ್ತಿರುವ ಪಕ್ಷಗಳು ಹಾಗೂ ದುಷ್ಟಶಕ್ತಿಗಳನ್ನು, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತವಾದ ದಲ್ಲಿ ನಂಬಿಕೆ ಇರುವ ಎಲ್ಲರೂ ಒಗ್ಗಟ್ಟಿನಿಂದ ನಿಷ್ಕ್ರಿಯಗೊಳಿಸಬೇಕಾಗಿದೆ.

ಆದ್ದರಿಂದಲೇ ಹಿಂಸೆ ಮತ್ತು ಭಯೋತ್ಪಾದನೆಗಳ ಮೂಲಕ ಜನರನ್ನು ಬೆದರಿಸಬಯಸುವವರಿಗೆ ಬಗ್ಗದೆ ಈ ದೇಶದ ನಾಗರೀಕರಾದ ನಾವು ನಮ್ಮ ನಂಬಿಕೆಗಳಲ್ಲಿ ಅಚಲ ವಿಶ್ವಾಸವನ್ನು ತೋರಬೇಕಾದ್ದದ್ದು ಈಗ ಅತ್ಯಂತ ಅವಶ್ಯವಾಗಿದೆ ಎಂದು 'ವಿವೇಕ' ದ ಸಂಚಾಲಕರಾದ ಪ್ರೊ. ಜಿ.ಕೆ.ಗೋವಿಂದರಾವ್ ಹಾಗೂ ಕೆ.ವಿ. ಶ್ರೀನಿವಾಸ್ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಯಶಸ್ವಿ ನಿರಶನ ಸತ್ಯಾಗ್ರಹ

ಬೆಳಗಾವಿ ಜಿಲ್ಲೆಯ ರಾಮದುರ್ಗದ ಬೆಂಬಳಗಿ ಕಾಲೇಜಿನ ವಿದ್ಯಾರ್ಥಿಗಳು ಕಳೆದ ಒಂದೂವರೆ ತಿಂಗಳು ಕಾಲ ಪ್ರತಿಭಟನೆ, ಮೆರವಣಿಗೆ ನಡೆಸಿ 8 ವರ್ಷಗಳಿಂದ ವಸೂಲಿ ಮಾಡುತ್ತಿದ್ದ ಕಟ್ಟಡ ನಿಧಿಯನ್ನು ಕೈ ಬಿಡುವಂತೆ ಒತ್ತಾಯಿಸಿ 3 ದಿನಗಳ ಕಾಲ ನಿರಶನ ಸತ್ಯಾಗ್ರಹ ನಡೆಸಿದರು. ಮೊದಲು ವಂತಿಗೆ ನಿಲ್ಲಿಸಲು ನಿರಾಕರಿಸಿದ ಆಡಳಿತ ವರ್ಗ ಕೊನೆಗೆ ವಿದ್ಯಾರ್ಥಿ ಚಳುವಳಿಗೆ ಮಣಿದು 150 ರೂ. ಗಳಲ್ಲಿ 50 ರೂಗಳನ್ನು ಕಡಿಮೆಗೊಳಿಸಬೇಕಾಯಿತು.

ಈ ಸತ್ಯಾಗ್ರಹದಲ್ಲಿ ಕಾಲೇಜಿನ ವಿದ್ಯಾರ್ಥಿಗಳಲ್ಲದೆ, ಎಸ್‌ಎಫ್‌ಐ ಮುಖಂಡರು ಹಾಗೂ ಸಿಪಿಐ(ಎಂ)ನ ವಿ.ಪಿ.ಕುಲಕರ್ಣಿ ಕೂಡ ಸತ್ಯಾಗ್ರಹದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಸಂತಾಪ ಸೂಚನೆ

ಸಿಪಿಐ(ಎಂ) ಬಿಜಾಪುರ ಪ್ರಾದೇಶಿಕ ಸಮಿತಿ ಸದಸ್ಯ ಎಂ.ಎಸ್.ನದಾಫ ಅವರ ತಂದೆ ಲಾಲಸಾಬ ಪೀರಸಾಬ ನದಾಫ ಅವರು ರಕ್ತದ ಒತ್ತಡದಿಂದ ದಿ. 17.2.98 ರಂದು ಮೃತರಾದರು. ಅವರಿಗೆ 70 ವರ್ಷ. ಅವರು ಬಹಳ ವರ್ಷಗಳಿಂದಲೂ ಕಮ್ಯುನಿಸ್ಟ್ ಪಕ್ಷದ ಸಹಾನುಭೂತಿದಾರರಾಗಿದ್ದರು. ಲಾಲಸಾಬ ನದಾಫರ ಆಕಾಲಿಕ ಮರಣಕ್ಕೆ ಸಿಪಿಐ(ಎಂ) ಬಿಜಾಪುರ ಪ್ರಾದೇಶಿಕ ಸಮಿತಿ ಸಂತಾಪ ವ್ಯಕ್ತಪಡಿಸುತ್ತದೆ.

ಅಸ್ಸಾಮ್‌ನಲ್ಲಿ ಅಭ್ಯರ್ಥಿಯ ಕೊಲೆ

ಅಸ್ಸಾಮ್‌ನಲ್ಲಿ ಅಸ್ಸಾಂ ವಿಮೋಚನಾ ಸಂಯುಕ್ತರಂಗದ (ಉಲ್ಫಾ) ಉಗ್ರಗಾಮಿಗಳು ಸಿಪಿಐ(ಎಂ.ಎಲ್)ನ ಒಬ್ಬ ಲೋಕಸಭಾ ಅಭ್ಯರ್ಥಿಯನ್ನು ಗುಂಡಿಟ್ಟು ಕೊಂದು ಹಾಕಿದ್ದಾರೆ. ಹಾಗೂ ರಾಜ್ಯದ ಮಂತ್ರಿಯೊಬ್ಬರ ಮೇಲೆ ಗುಂಡು ಹಾರಿಸಿದ್ದು ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಚುನಾವಣೆ ಬಹಿಷ್ಕಾರಕ್ಕೆ ಉಲ್ಫಾ ಕರೆ ನೀಡಿದ್ದರಿಂದ ಮತದಾನದ ದಿನ ಭಾರೀ ಹಿಂಸಾಚಾರ ನಡೆಯಬಹುದೆಂದು ಭಯ ಪಡಲಾಗಿತ್ತು. ಆದರೆ ಅಂಥದ್ದೇನೂ ನಡೆಯದೆ ಬಹುತೇಕ ಶಾಂತವಾಗಿ ಮೊದಲ ಹಂತದ ಚುನಾವಣೆ ಸುಗಮವಾಗಿ ಸಾಗಿದ್ದು ನಿಟ್ಟುಸಿರು ಬಿಡುವಂತಾಗಿದೆ.



ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಚಾರ
ಮೇಲಿನ ಚಿತ್ರ ತೃಣಮೂಲ ಕಾಂಗ್ರೆಸ್ - ಬಿಜೆಪಿ ಮೈತ್ರಿಯನ್ನು ಗ್ರ್ಯಾಂಡ್ ಸರ್ಕಸ್ ಎಂದು ಗೇಲಿ ಮಾಡುವ ಭಿತ್ತಿಚಿತ್ರ.
ಕೆಳಗಿನದ್ದು ಗ್ರಾಮವೊಂದರಲ್ಲಿ ತಮ್ಮ ಮನೆಯ ಗೋಡೆಯ ಮೇಲೆ ಪ್ರಚಾರ ಬರಹಗಳನ್ನು ಮೂಡಿಸುತ್ತಿರುವ ಮಹಿಳೆಯರು



ಲೋಕಸಂಚಾರ

ಶರತ್ ಚಂದ್ರ

ಪೋಪರ ಯಶಸ್ವಿ ಕ್ಯೂಬಾ ಭೇಟಿ - ಅಮೆರಿಕಾಕ್ಕೆ ಕಿರಿಕಿರಿ

ಪೋಪರ ಯಶಸ್ವಿ ಕ್ಯೂಬಾ ಭೇಟಿ, ಅಮೆರಿಕಾಕ್ಕೆ ಭಾರಿ ಕಿರಿಕಿರಿ ಉಂಟು ಮಾಡಿದೆ. ಅಮೆರಿಕಾದ ದಿಗ್ಬಂಧನ ನಿರ್ಲಕ್ಷಿಸಿ ಪೋಪರು ಕ್ಯೂಬಾಕ್ಕೆ ಭೇಟಿ ನೀಡಿದ್ದೇ, ಅಮೆರಿಕಾದ ಸರ್ಕಾರಕ್ಕೆ ನುಂಗಲಾರದ ತುತ್ತಾಗಿತ್ತು. ಇನ್ನು ಕ್ಯೂಬಾದ ನೆಲದಿಂದ ಪೋಪರು ಆ ದೇಶದ ಮೇಲೆ 36 ವರ್ಷಗಳಿಂದ ಜಾರಿಯಲ್ಲಿರುವ ಅಮೆರಿಕಾದ ದಿಗ್ಬಂಧನ ಅನ್ಯಾಯಯುತ ಮತ್ತು ಅನೈತಿಕ ಎಂದು ಕರೆದು, ಅದನ್ನು ಜಗತ್ತಿನ 96 ಕೋಟಿ ಕ್ಯಾಥೋಲಿಕರು ಖಂಡಿಸುತ್ತಾರೆ ಎಂದು ಹೇಳಿದ್ದು ಗಾಯದ ಮೇಲೆ ಉಪ್ಪು ಬಳಿದಂತಾಗಿದೆ.

ಪೋಪರ ಯಶಸ್ವಿ ಕ್ಯೂಬಾ ಭೇಟಿಯನ್ನು ನಿರ್ಲಕ್ಷಿಸಲಾಗದೆ ಸಾಮ್ರಾಜ್ಯಶಾಹಿ ಸುದ್ದಿ ಮಾಧ್ಯಮಗಳು, ಈ ಭೇಟಿ ನಂತರ ಕ್ಯೂಬಾದಲ್ಲಿ ಸಮಾಜವಾದ ಬಿದ್ದು ಹೋಗುತ್ತದೆ ಎಂದೆಲ್ಲಾ ಪ್ರಚಾರ ಮಾಡಿವೆ. 80ರ ದಶಕದಲ್ಲಿ ಪೋಲೆಂಡ್‌ಗೆ ಪೋಪರ ಭೇಟಿ ಕಾಲದಲ್ಲಿ ಕಮ್ಯುನಿಸ್ಟ್ ವಿರೋಧಿ ಸಂಘಟನೆ ಸಾಲಿಡಾರಿಟಿಗೆ ಬೆಂಬಲ ನೀಡಿ, ಆಮೇಲೆ ಅಲ್ಲಿ ಕಮ್ಯುನಿಸ್ಟ್ ಸರ್ಕಾರದ ಪತನಕ್ಕೆ ಕಾರಣವಾದರು ಎಂದು ಪ್ರಚಾರ ಮಾಡಿದ್ದೇ ಮಾಡಿದ್ದು. ಆದರೆ ಇತ್ತೀಚೆಗೆ ನವ ಉದಾರವಾದಿ ಮತ್ತು ಜಾಗತೀಕರಣದ ನೀತಿಗಳು ಸಾಮಾನ್ಯ ಜನತೆ ಮೇಲೆ ಉಂಟುಮಾಡಿರುವ ದುಷ್ಪರಿಣಾಮ ಮತ್ತು ಇರಾಕ್, ಲಿಬ್ಯಾ, ಇರಾನ್ ಮತ್ತು ಕ್ಯೂಬಾಗಳ ಮೇಲೆ ಅಮೆರಿಕಾದ ದಿಗ್ಬಂಧನ - ಇವುಗಳ ಬಗ್ಗೆ ಪೋಪರು ತೋರಿಸಿರುವ ಆತಂಕ ಮತ್ತು ಖಂಡನೆಯನ್ನು ಮರೆ ಮಾಚಿದ್ದೇ ಮಾಚಿದ್ದು.

ಜನವರಿ 21 ರಿಂದ 25 ರವರೆಗೆ ಕ್ಯೂಬನ್ ಸರ್ಕಾರದ ಅತಿಥಿಯಾಗಿ ಎಲ್ಲಾ ಪ್ರಮುಖ ನಗರಗಳಿಗೆ ಭೇಟಿಯಿತ್ತ ಪೋಪರಿಗೆ ಹೋದಲ್ಲೆಲ್ಲ ಭಾರೀ ಸ್ವಾಗತ ನೀಡಲಾಯಿತು. ಪೋಪರಿಗೆ ಹೋದ ಕಡೆಯೆಲ್ಲಾ ಯಾವುದೇ ನಿರ್ಬಂಧವಿಲ್ಲದೆ, ಅವರ ಅಭಿಪ್ರಾಯಗಳನ್ನು ಹೇಳಲು ಮತ್ತು ಧಾರ್ಮಿಕ ಪ್ರವಚನ ಮಾಡಲು ಅವಕಾಶ ಕೊಡಲಾಯಿತು. ಪೋಪರು ಶಿಕ್ಷಣದ ಮೇಲೆ ಸರ್ಕಾರದ ಏಕಸ್ವಾಮ್ಯ, ಗರ್ಭಪಾತ, ಧಾರ್ಮಿಕ ಸ್ವಾತಂತ್ರ್ಯ - ಮುಂತಾದ ಬಗ್ಗೆ ಕ್ಯೂಬಾದ ನೀತಿಗಳನ್ನು ಟೀಕಿಸಿದರೂ, ಅವರ ಬಗ್ಗೆ ಕ್ಯೂಬನ್ ಸರ್ಕಾರದ ಧೋರಣೆಯಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ, ಆದರೆ ಪೋಪರ ಕೆಲವು ಟೀಕೆಗಳಿಗೆ ಗಂಭೀರವಾದ ಉತ್ತರ ನೀಡಲಾಯಿತು. ಭೇಟಿ ಕಾಲದಲ್ಲಿ ಕ್ಯೂಬನ್ ಯುವಜನತೆಗೆ ಬರೆದ ಪತ್ರದಲ್ಲಿ ದಿಗ್ಬಂಧನ ಯಾವಾಗಲೂ ಅತ್ಯಂತ ದಲಿತರನ್ನು ತಟ್ಟುತ್ತದೆ, ಆದ್ದರಿಂದ ದಿಗ್ಬಂಧನ ಅಮಾನುಷವಾಗಿರುತ್ತದೆ ಎಂದಿದ್ದಾರೆ.

ಒಟ್ಟಾರೆಯಾಗಿ ಪೋಪರ ಯಶಸ್ವಿ ಕ್ಯೂಬಾ ಭೇಟಿ, ಕ್ಯೂಬಾದ ಮೇಲೆ ಅಮೇರಿಕಾದ ಅಮಾನುಷ ದಿಗ್ಬಂಧನದತ್ತ ಅಂತರ್‌ರಾಷ್ಟ್ರೀಯ ಗಮನ ಸೆಳೆದಿದೆ.

ಇರಾಕ್ ಬಿಕ್ಕಟ್ಟು-ವಿಶ್ವಸಂಸ್ಥೆ ಕಾರ್ಯದರ್ಶಿ ರಾಜಿ ಪ್ರಯತ್ನ

ಕೊಲ್ಲಿ ಯುದ್ಧ -2 ಆರಂಭಿಸುವ ಅಮೆರಿಕದ ತರಾತುರಿಗೆ ಇನ್ನೂ ಹೆಚ್ಚಿನ ಮೂಲಗಳಿಂದ ವಿರೋಧ ಬಂದಿದೆ. ರಶ್ಯ ಇರಾಕ್ ಜತೆ ಮಾತುಕತೆ ನಡೆಸಿ ಶಾಂತಿಯುತ ಪರಿಹಾರಕ್ಕೆ ಪ್ರಯತ್ನಿಸು ತ್ತಿದ್ದು, ಈ ನಡುವೆ ಅಮೆರಿಕದ ಏಕಪಕ್ಷೀಯ ಮಿಲಿಟರಿ ಪರಿಹಾರವನ್ನು ಖಂಡ ತುಂಡವಾಗಿ ವಿರೋಧಿಸಿದೆ. ಅಮೆರಿಕ ಕೊಲ್ಲಿ ಯುದ್ಧ -2 ಆರಂಭಿಸುವ ಪ್ರಯತ್ನ ಮಾಡಿದರೆ, ತಾನು ಸುಮ್ಮನಿರುವುದಿಲ್ಲ ಎಂದು ಎಚ್ಚರಿಸಿದೆ. ಕೊಲ್ಲಿ ಪ್ರದೇಶದ ಎಲ್ಲಾ ಅರಬ್ ದೇಶಗಳು ಇರಾಕನ್ನು ಒಂದು ಆಕ್ರಾಮಕ ದೇಶ ಎಂದು ಒಪ್ಪಲು ತಯಾರಿಲ್ಲ. ಅಮೆರಿಕ ಬೆಂಬಲಿಸುತ್ತಿರುವ ಇಸ್ರೇಲ್ ಒಂದು ಆಕ್ರಾಮಕ ದೇಶ ಎಂದು ಅವು ಭಾವಿಸಿವೆ. ಇರಾಕ್ ಈಗ ಒಂದು ಬಲಿಪಶು ಎಂದು ಅವರು ಕಾಣುತ್ತಿದ್ದಾರೆ. ಆದ್ದರಿಂದ 1991-92ರ ಕೊಲ್ಲಿ ಯುದ್ಧದಲ್ಲಿ ರಚಿಸಿದ ಮಿಲಿಟರಿ ಕೂಟವನ್ನು ಪುನಃ ರಚಿಸಲು ಸಾಧ್ಯವಾಗುತ್ತಿಲ್ಲ.

ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಭದ್ರತಾ ಸಮಿತಿಯ ಐದು ಶಾಶ್ವತ ಸದಸ್ಯರ ಅಭಿಪ್ರಾಯದ ಮೇರೆಗೆ ಶಾಂತಿಯುತ ಪರಿಹಾರಕ್ಕೆ ಪ್ರಯತ್ನಿಸುತ್ತಿದ್ದು, ಮಿಲಿಟರಿ ಪರಿಹಾರವನ್ನು ತಳ್ಳಿ ಹಾಕಿದ್ದಾರೆ. ಒಂಬತ್ತು ಅಧ್ಯಕ್ಷೀಯ ಅರಮನೆಗಳನ್ನು, ವಿಶ್ವಸಂಸ್ಥೆ ಮಹಾಕಾರ್ಯದರ್ಶಿಯ ಪ್ರತಿನಿಧಿಗಳಿಗೆ ತೋರಿಸುವ ಇರಾಕ್‌ನ ಸಲಹೆಯನ್ನು ಮಹಾ ಕಾರ್ಯದರ್ಶಿಗಳು ಅಂಗೀಕರಿ ಸಿದ್ದು, ಒಂದು ತಾಂತ್ರಿಕ ಸಮಿತಿಯನ್ನು ಕಳಿಸಲಿದ್ದಾರೆ. ಮಹಾ ಕಾರ್ಯದರ್ಶಿಗಳೂ ಇರಾಕ್‌ಗೆ ಭೇಟಿ ನೀಡುವ ಯೋಜನೆಯಿದೆ.

ಆದರೂ ಇದೆಲ್ಲವನ್ನೂ ನಿರ್ಲಕ್ಷಿಸಿ ಕೊಲ್ಲಿಯಲ್ಲಿ ಇರಾಕ್ ಮೇಲೆ ಪೂರ್ಣ ಪ್ರಮಾಣದ ಯುದ್ಧಕ್ಕೆ ಸಿದ್ಧತೆ ನಡೆಸಿದೆ.

ಇಂಡೋನೇಶ್ಯಾದಲ್ಲಿ ವ್ಯಾಪಕ ಆಹಾರ ದಂಗೆಗಳು

ಇಂಡೋನೇಶ್ಯಾದಲ್ಲಿ ಇನ್ನಷ್ಟು ಪಟ್ಟಣಗಳಿಂದ ಆಹಾರ ದಂಗೆಗಳು ನಡೆದಿರುವ ವರದಿಗಳು ಬರುತ್ತಿವೆ. ದೇಶದ ಜನಭರಿತ ದ್ವೀಪ ಜಾವಾದ ಉತ್ತರ ತೀರ ಪ್ರದೇಶದ ಹಲವು ಪಟ್ಟಣಗಳಿಂದ ಆಹಾರ ವಸ್ತು ಮಾರುವ ಅಂಗಡಿಗಳಿಂದ ಆಹಾರ ಲೂಟಿ ಮಾಡಿರುವ ವರದಿಗಳು ಬರುತ್ತಿವೆ. ಇಂಡೋನೇಶ್ಯಾದಲ್ಲಿ ವ್ಯಾಪಾರ ಬಹುಪಾಲು ಅಲ್ಪಸಂಖ್ಯಾತ ಚೀನೀಯರ ಕೈಯಲ್ಲಿ ಇರುವುದರಿಂದ ಇದು ಚೀನೀಯರ ಅಂಗಡಿಗಳ ಲೂಟಿಯ ರೂಪ ಪಡೆದಿದೆ. ಆಹಾರ ದಂಗೆಗಳು ನಡೆದ ಪಟ್ಟಣಗಳಲ್ಲಿ ದಂಗೆ ನಿಲ್ಲಿಸಲು ಸೈನ್ಯ ತರಿಸಬೇಕಾಯಿತು. ನೂರಾರು ಜನರನ್ನು ಈ ಸಂಬಂಧದಲ್ಲಿ ಬಂಧಿಸಲಾಗಿದೆ. ಆದರೂ ಆಹಾರ ದಂಗೆಗಳು ದೇಶದಲ್ಲಿ ವ್ಯಾಪಕವಾಗಿ ಹರಡುವ ಲಕ್ಷಣಗಳು ಕಾಣುತ್ತಿವೆ.

ಈ ನಡುವೆ ಅಧ್ಯಕ್ಷ ಸುಹಾರ್ತೋರನ್ನು ಏಳನೇ ಬಾರಿ ಅಧ್ಯಕ್ಷ ಸ್ಥಾನಕ್ಕೆ ಆರಿಸುವ ಸಾಧ್ಯತೆ ಹೆಚ್ಚಿದ್ದು, ಇದು ವ್ಯಾಪಕ ರಾಜಕೀಯ ಅಲ್ಲೋಲ ಕಲ್ಲೋಲಕ್ಕೆ ಹಾದಿ ಮಾಡಿಕೊಡಬಹುದು. ಇಂಡೋನೇಶ್ಯಾದಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿ ತೀವ್ರ ಆರ್ಥಿಕ, ರಾಜಕೀಯ, ಸಾಮಾಜಿಕ ಬಿಕ್ಕಟ್ಟು ತಲೆದೋರಿದೆ. ಅಧ್ಯಕ್ಷ ಸುಹಾರ್ತೋ ಏನೂ ಆಗಿಲ್ಲ ಎಂಬಂತೆ ಹಳೆಯ ರೀತಿಯಲ್ಲಿ ಮುಂದುವರಿಯುತ್ತಿದ್ದಾರೆ. ಅವರ ಈ ಆಟ ಸಾಗಲಿಕ್ಕಿಲ್ಲ.

ದ.ಕೋರಿಯಾದಲ್ಲಿ ಒಪ್ಪಂದಕ್ಕೆ ಕಾರ್ಮಿಕರ ವಿರೋಧ

ದಕ್ಷಿಣ ಕೋರಿಯಾ ಆರ್ಥಿಕ ಬಿಕ್ಕಟ್ಟಿಗೆ ಪರಿಹಾರ ಹುಡುಕಲು ಆರಂಭಿಸಿದ್ದು, ಸ್ವಾಭಾವಿಕವಾಗಿಯೇ ಬಿಕ್ಕಟ್ಟಿನ ಹೊರೆಯನ್ನು ದುಡಿಯುವ ಜನರ ಮೇಲೆ ಹೊರಿಸುವ ಪ್ರಯತ್ನ ನಡೆದಿದೆ. ಹೊಸದಾಗಿ ಆಯ್ಕೆ ಯಾದ ಅಧ್ಯಕ್ಷ, ಐದು ಲಕ್ಷ ಕಾರ್ಮಿಕರನ್ನು ಪ್ರತಿನಿಧಿಸುವ ಕಾನ್ಫೆಡರೇಶನ್ ಆಫ್ ಕೊರಿಯನ್ ಟ್ರೇಡ್ ಯೂನಿಯನ್ಸ್ ಮೇಲೆ ಒತ್ತಡ ಹೇರಿ ಕಾರ್ಮಿಕರನ್ನು ಸುಲಭವಾಗಿ ಕೆಲಸದಿಂದ ತೆಗೆದು ಹಾಕುವ ಕಾನೂನು ತರುವ ಬಗ್ಗೆ ಒಪ್ಪಂದ ಮಾಡಿಕೊಂಡಿದ್ದ. ಆದರೆ ಆ ಟ್ರೇಡ್ ಯೂನಿಯನ್‌ನ ಕೇಂದ್ರೀಯ ನಾಯಕತ್ವದ ಪೂರ್ಣ ಸಭೆ ಈ ಒಪ್ಪಂದವನ್ನು ತಿರಸ್ಕರಿಸಿದೆ. ಈ ಕಾನ್ಫೆಡರೇಶನ್ ಪ್ರತಿನಿಧಿಸುವ ಮುನ್ನೂರು ಟ್ರೇಡ್ ಯೂನಿಯನ್‌ಗಳ ನಾಯಕರು ಈ ಸಭೆಯಲ್ಲಿ ಕಾರ್ಮಿಕರನ್ನು ಸುಲಭವಾಗಿ ಕೆಲಸದಿಂದ ತೆಗೆದು ಹಾಕುವ ಕಾನೂನು ಬಗ್ಗೆ ಒಪ್ಪಂದವನ್ನು ತಿರಸ್ಕರಿಸಿದ್ದು ಮಾತ್ರವಲ್ಲ, ಮುಂದಿನ ವಾರ ಈ ಬಗ್ಗೆ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ.



ಇನ್ನೊಂದು ಕಾನ್ಫೆಡರೇಶನ್ ಈಗಾಗಲೇ ಈ ಒಪ್ಪಂದವನ್ನು ಅಂಗೀಕರಿಸಿದ್ದರೂ, ಸಾರ್ವತ್ರಿಕ ಮುಷ್ಕರಕ್ಕೆ ಭಾರೀ ಸ್ಪಂದನ ದೊರಕುವ ಸಾಧ್ಯತೆಯಿದೆ. ದಕ್ಷಿಣ ಕೋರಿಯಾದ ಕಾರ್ಮಿಕ ವರ್ಗ, ಐಎಂಎಫ್ ನೀತಿಗಳನ್ನು ಹೊರಿಸುವ ಸರ್ಕಾರಕ್ಕೆ ತೀವ್ರ ಪ್ರತಿರೋಧ ಒಡ್ಡುತ್ತದೆ ಎಂಬುದು ಖಚಿತ.

ಬ್ರಿಟಿಷ್ ರಾಜಸತ್ತೆ ಕೊನೆಗೊಳಿಸಲು ಜನಮತ ಸಂಗ್ರಹಕ್ಕೆ ಆಸ್ಟ್ರೇಲಿಯಾ ನಿರ್ಧಾರ

ಆಸ್ಟ್ರೇಲಿಯಾ ಸ್ವತಂತ್ರ ದೇಶ ವಾದರೂ, ಬ್ರಿಟಿಷ್ ರಾಣಿಯನ್ನು ತನ್ನ ದೇಶದ ರಾಣಿಯೆಂದು ಮನ್ನಿಸುವ ಮೂಲಕ ಬ್ರಿಟಿಷ್ ರಾಜಸತ್ತೆಗೆ ಅಧೀನ ವಾಗಿದೆ. ಆ ದೇಶದಲ್ಲಿ ಈ ಬಗ್ಗೆ ಹಲವು ವರ್ಷಗಳಿಂದ ರಾಜಕೀಯ ಚರ್ಚೆ ನಡೆಯುತ್ತಿದ್ದು, ರಾಜಸತ್ತೆ ಕೊನೆಗೊಳಿಸಲು ಒತ್ತಡ ಹೆಚ್ಚುತ್ತಿದೆ. ಇದಕ್ಕಾಗಿ ರಚಿಸಲಾಗಿದ್ದ ಸಂವೈಧಾನಿಕ ಸಮಾವೇಶ ರಾಜಸತ್ತೆ ಕೊನೆಗೊಳಿಸಲು ಬಹುಮತದಿಂದ ನಿರ್ಧರಿಸಿದೆ. ಈ ಸಂವೈಧಾನಿಕ ಸಮಾವೇಶ 89-52 ಮತಗಳಿಂದ ರಾಜಸತ್ತೆ ಕೊನೆಗೊಳಿಸಿ, ಆಸ್ಟ್ರೇಲಿಯಾ ವನ್ನು ಸ್ವತಂತ್ರ ರಿಪಬ್ಲಿಕ್ ಎಂದು ಘೋಷಿಸಬೇಕೆಂದು ನಿರ್ಧರಿಸಿದೆ.

ರಾಜಸತ್ತೆಗೆ ವಿರೋಧವಾದ ಜನಾಭಿಪ್ರಾಯ ಸಿಡ್ನಿ ಒಲಂಪಿಕ್ಸ್ ಒಳಗೆ (2000ದ ಒಳಗೆ) ಆಸ್ಟ್ರೇಲಿಯಾ ಸ್ವತಂತ್ರ ರಿಪಬ್ಲಿಕ್ ಆಗಿ ತನ್ನದೇ ಅಧ್ಯಕ್ಷರನ್ನು ಹೊಂದ ಬೇಕೆಂದು ಬಯಸುತ್ತದೆ. ಪ್ರಸ್ತುತ ಪ್ರಧಾನಿ ಇದಕ್ಕೆ ವಿರೋಧವಾಗಿದ್ದು, ಸಂವೈಧಾನಿಕ ಸಮಾವೇಶ ರಾಜಸತ್ತೆ ಕೊನೆಗೊಳಿಸಲು ಬಹುಮತದಿಂದ ನಿರ್ಧರಿಸಿ ದ್ದರೂ, ಕೊನೆಯ ನಿರ್ಧಾರ 1999ರಲ್ಲಿ ಈ ಬಗ್ಗೆ ನಡೆ ಸಲಾಗುವ ಜನಮತ ಸಂಗ್ರಹದಲ್ಲೇ ಆಗಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಜನಾಭಿ ಪ್ರಾಯ ಸಂಗ್ರಹದ ಪ್ರಕಾರ ಈಗ ಶೇಕಡಾ 51 ಕ್ಕೂ ಹೆಚ್ಚು ಜನ ರಾಜಸತ್ತೆ ಕೊನೆಗೊಳಿಸಲು ಬೆಂಬಲ ಕೊಡುತ್ತಾರೆ ಎಂದು ತಿಳಿದು ಬಂದಿದೆ.

ತುರ್ಕಿಯಲ್ಲಿ ಮುಸ್ಲಿಂ ಮೂಲಭೂತವಾದಿ ಪಕ್ಷದ ನಿಷೇಧ

ತುರ್ಕಿಯಲ್ಲಿ ಇತ್ತೀಚಿನವರೆಗೆ ಆಳುವ ರಂಗದಲ್ಲಿದ್ದ ಮುಸ್ಲಿಂ ಮೂಲಭೂತವಾದಿ ಪಕ್ಷ ವೇಲ್ಫೇರ್ ಪಾರ್ಟಿಯನ್ನು ಅಲ್ಲಿನ ಈಗಿನ ಸರ್ಕಾರ ನಿಷೇಧಿಸಿದೆ. ವೇಲ್ಫೇರ್ ಪಾರ್ಟಿಯ ನಿಷೇಧ ಈಗಿನ ಸರ್ಕಾರ ಮತ್ತು ಸೈನ್ಯ ತುರ್ಕಿಯಲ್ಲಿ ಪ್ರಬಲವಾಗಿ ಬೆಳೆಯುತ್ತಿರುವ ಮುಸ್ಲಿಂ ಮೂಲಭೂತವಾದವನ್ನು ತಡೆಯು ವುದರಲ್ಲಿ ಸಫಲವಾಗುತ್ತದೆ ಎಂಬ ಬಗ್ಗೆ ತೀವ್ರ ಸಂದೇಹಗಳಿವೆ.

ಅಲ್ಜೀರಿಯಾದ ಅನುಭವ ನಿಷೇಧ ಮುಸ್ಲಿಂ ಮೂಲಭೂತವಾದವನ್ನು ಶಕ್ತಿಶಾಲಿಗೊಳಿಸಬಹುದು ಎಂದು ಸಾರುತ್ತದೆ. ಈ ಎರಡೂ ದೇಶಗಳಲ್ಲಿ ವ್ಯವಸ್ಥೆ ವಿರುದ್ಧ ಅತೃಪ್ತಿಯನ್ನು ಬಳಸಿಕೊಂಡು ಮುಸ್ಲಿಂ ಮೂಲಭೂತವಾದ ಬೆಳೆದಿರುವುದರಿಂದ, ವ್ಯವಸ್ಥೆ ತೃಪ್ತಿಕಾರಕವಾಗಿ ಬದಲಾಗದೆ, ಬರಿಯ ನಿಷೇಧ ವಿರುದ್ಧ ಪರಿಣಾಮ ಕೊಡಬಹುದು.

ಉತ್ತರ ಐರ್ಲೆಂಡ್ - ಶಾಂತಿಗೆ ಪ್ರಯತ್ನ

ಉತ್ತರ ಐರ್ಲೆಂಡ್‌ನಲ್ಲಿ ಶಾಂತಿಯ ಪ್ರಯತ್ನ ತೀವ್ರ ಸಮಸ್ಯೆ ಎದುರಿಸುತ್ತಿದ್ದರೂ, ಪ್ರಯತ್ನ ಮುಂದುವರೆದಿದೆ. ಮೇ ಒಳಗೆ ಶಾಂತಿಗೆ ಒಂದು ಸೂತ್ರ ತಯಾರಾಗಬಹುದು ಅಥವಾ ಉತ್ತರ ಐರ್ಲೆಂಡ್ ಅಂತಃ ಕಲಹದಲ್ಲಿ ಮುಳುಗಿಹೋಗಬಹುದು. ಬ್ರಿಟಿಷ್ ಪ್ರಧಾನಿ ಹಾಗೂ ಸಿನ್ ಫಿನ್ ನಾಯಕತ್ವ ಶಾಂತಿಗೆ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿರು ವುದರಿಂದ ಈ ಬಗ್ಗೆ ಭರವಸೆ ಉಳಿದಿದೆ.

ಈ ನಡುವೆ ಬ್ರಿಟಿಷ್ ಪ್ರಧಾನಿ - 1971 ಫೆಬ್ರುವರಿ 1 ರಂದು ಉತ್ತರ ಐರ್ಲೆಂಡ್‌ನ ಲಂಡನ್ ಬೆರಿ ಎಂಬ ಪಟ್ಟಣದಲ್ಲಿ ಬ್ರಿಟಿಷ್ ಸೈನ್ಯದಿಂದ ಕ್ಯಾಥೋಲಿಕ್ ಜನರ ಮೇಲೆ ನಡೆದ-ಗೋಳಿಬಾರಿನ ಬಗ್ಗೆ ವಿಚಾರಣೆ ನಡೆಸಲು ಆಜ್ಞೆ ಮಾಡಿದ್ದಾರೆ. ಬ್ಲಾಕ್ ಸಂಡೇ ಎಂದು ಕರೆಯಲ್ಪಡುವ ಲಂಡನ್ ಬೆರಿ ಘಟನೆಯ ನೆನಪಿಗಾಗಿ ಪ್ರತೀ ವರ್ಷ ಭಾರಿ ಮೆರವಣಿಗೆಗಳು ನಡೆಯುತ್ತವೆ. ಈ ವರ್ಷವೂ 40 ಸಾವಿರ ಜನ ಭಾಗವಹಿಸಿದ ಭಾರಿ ಮೆರವಣಿಗೆ ಲಂಡನ್ ಬೆರಿನಲ್ಲಿ ನಡೆಯಿತು.

ಲಂಡನ್ ಬೆರಿಯ ಈ ಬ್ಲಾಕ್ ಸಂಡೇ ಕ್ಯಾಥೋಲಿಕ್ ಜನ ಬ್ರಿಟಿಷ್ ಸರ್ಕಾರದ ಮೇಲೆ ಪೂರ್ಣ ಭರವಸೆ ಕಳೆದುಕೊಳ್ಳುವ ಹಾಗೆ ಮಾಡಿತ್ತು. ಲಂಡನ್ ಬೆರಿಯ ವಿಚಾರಣೆ ಈ ಭರವಸೆ ವಾಪಸು ತರಬಲ್ಲುದೇ ಎಂದು ಕಾದುನೋಡಬೇಕಾಗಿದೆ.

ಬಿ.ಜೆ.ಪಿ ಮತ್ತು ಹಿಂದುತ್ವವಾದಿ ಸಂವಿಧಾನ

1998 ರ ಲೋಕಸಭಾ ಚುನಾವಣೆಯ ಸಂದರ್ಭ ಬಿ.ಜೆ.ಪಿ. ತನ್ನ ಪ್ರಣಾಳಿಕೆಯಲ್ಲಿ ತಾನು ಅಧಿಕಾರಕ್ಕೆ ಬಂದರೆ ಸಂವಿಧಾನವನ್ನು ಆಮೂಲಾಗ್ರವಾಗಿ ತಿದ್ದುಪಡಿ ಮಾಡುವ ಪ್ರಸ್ತಾಪ ಮಾಡಿದೆ. ಬಿ.ಜೆ.ಪಿ. ಎಂತಹ ಸಂವಿಧಾನ ತರಬಯಸುತ್ತದೆ ಎಂದು 1992 ರಲ್ಲಿ ಬಾಬ್ರಿ ಮಸೀದಿ ಕೆಡವಿದ ಅಟ್ಟಹಾಸದ ಅಬ್ಬರದ ಸಂದರ್ಭ ಸಂಘಪರಿವಾರದ 'ಧರ್ಮ ಸಂಸತ್'ಗಳಲ್ಲಿ 68 ಪುಟಗಳ ಟಿಪ್ಪಣಿ ಸಿದ್ಧವಾಗಿದ್ದು ಅದರ ಮುಖ್ಯಾಂಶಗಳನ್ನು ಪಯೋನಿಯರ್ ಪತ್ರಿಕೆ 3-1-93 ಮತ್ತು ಫ್ರಂಟ್‌ಲೈನ್ ಪತ್ರಿಕೆ ದಿ. 29-3-93 ರಲ್ಲಿ ಪ್ರಕಟವಾದ ಲೇಖನಗಳಲ್ಲಿ ಕಾಣಬಹುದು. ಅವುಗಳಲ್ಲಿ ಕೆಲವು ಅಂಶಗಳನ್ನು ಐಕ್ಯರಂಗದ ಓದುಗರಿಗೆ ಒದಗಿಸಲಾಗಿದೆ.

● ಭಾರತದ ಸಂವಿಧಾನ ಬ್ರಿಟಿಷರ ಕಾನೂನುಗಳ ಆಧಾರದಲ್ಲಿ ರಚಿತವಾದುದು. ಅದು ಹಿಂದೂ ಭಾವನೆಗಳನ್ನು, ನಂಬಿಕೆಗಳನ್ನು, ಸತ್ಯಗಳನ್ನು, ಪುರಾತನ ಪುಣ್ಯಭೂಮಿ ಸ್ಥಳಗಳನ್ನು ಆಧರಿಸಿಲ್ಲ. ಈ ಸಂವಿಧಾನದ ಕುಂದು ಕೊರತೆಗಳು

— ಪ್ರಸ್ತಾವನೆಯಲ್ಲಿ ' ಜಾತ್ಯಾತೀತ', 'ಸಮಾಜವಾದಿ', 'ಪ್ರಜಾಪ್ರಭುತ್ವವಾದಿ', 'ಸಾರ್ವಭೌಮ' ಗಣರಾಜ್ಯ ಎಂದಿದೆ. ' ಜಾತ್ಯಾತೀತತೆ' ಮತ್ತು 'ಸಮಾಜವಾದ' ಹಿಂದೂಧರ್ಮದ ಪರಿಕಲ್ಪನೆಗಳಿಗೆ ವಿರುದ್ಧವಾಗಿದೆ.

— ಅಲ್ಪ ಸಂಖ್ಯಾತರಾದ ಮುಸ್ಲಿಮರಿಗೆ, ಕ್ರಿಶ್ಚಿಯನ್ನರಿಗೆ ವಿಶೇಷ ಹಕ್ಕು ನೀಡಿದ್ದು ಸರಿಯಲ್ಲ.

— ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಸೌಲಭ್ಯ ನೀಡಬಾರದಾಗಿತ್ತು.

— ಇನ್ನೂ ಇಂಗ್ಲೀಷ್ ಭಾಷೆ ಬಳಸುವುದು ಸರಿಯಲ್ಲ.

— ರಾಷ್ಟ್ರಗೀತೆ 'ಜನಗಣಮನ' ದ ಬದಲು 'ವಂದೇ ಮಾತರಂ' ಆಗಬೇಕಾಗಿತ್ತು.

— ಭಾಷಾವಾರು ಪ್ರಾಂತಗಳನ್ನು ರಚಿಸಿದ್ದು ಸರಿಯಲ್ಲ. ಭಾರತವು ಒಂದೇ ಸಂಸ್ಕೃತಿಯ ಒಂದು ಅಖಂಡ ಹಿಂದೂ ರಾಷ್ಟ್ರವಾಗಿದೆ. ಆಡಳಿತದ ಅನುಕೂಲಕ್ಕಾಗಿ ಅದನ್ನು 60-70 ಸಣ್ಣ ಸಣ್ಣ ರಾಜ್ಯಗಳನ್ನಾಗಿ ಏಕೀಕೃತ (Unitary) ಅತಿ ಕೇಂದ್ರೀಕೃತ ಪ್ರಭುತ್ವದ ಸ್ಥಾಪನೆಯಾಗಬೇಕು.

— ಭಾರತದ ನಾಗರಿಕ ಹಕ್ಕುಗಳನ್ನು ಭಾರತದ ತಂದೆ ತಾಯಿಯರಿಗೆ ಹುಟ್ಟಿದವರಿಗೆಲ್ಲಾ ಯಾಂತ್ರಿಕವಾಗಿ ಕೊಡುವುದು ಸರಿಯಲ್ಲ. ಯಾರು ದೇಶಪ್ರೇಮಕ್ಕೆ ಬದ್ಧರೋ ಅವರಿಗೆ ಕೊಡಬೇಕು. (ಅರ್ಥಾತ್, ಅಲ್ಪ ಸಂಖ್ಯಾತರು ಪೂರ್ವ ನಿಶ್ಚಿತವಾಗಿ ರಾಷ್ಟ್ರ ದ್ರೋಹಿಗಳು. ಹಿಂದೂ ಸನಾತನ ಧರ್ಮದಲ್ಲಿ ತಾವು ನಂಬಿಕೆಯುಳ್ಳವರೆಂದು ಸಾಬೀತುಪಡಿಸಿಕೊಂಡು ತಮ್ಮ ರಾಷ್ಟ್ರಪ್ರೇಮವನ್ನು ದೃಢಪಡಿಸಿಕೊಳ್ಳಬೇಕು!)

— ಭಾರತ ಎಂದರೆ 'ಹಿಂದೂ ರಾಷ್ಟ್ರ' ಎಂದಾಗಬೇಕಿತ್ತು. ರಾಷ್ಟ್ರಧ್ವಜ ಬದಲಾಗಬೇಕು. ಅದರಲ್ಲಿರುವ ಅಶೋಕಚಕ್ರದ ಬದಲಿಗೆ ಹಿಂದೂಧರ್ಮದ ಲಾಂಛನವಾದ ಸಂಸ್ಕೃತ 'ಓಂ' ಅಥವಾ 'ಸ್ವಸ್ತಿಕ' ಇರಬೇಕು.

— ಹಿಂದೂ ಸಮಾಜದಲ್ಲಿ ಇದುವರೆಗೆ ನಡೆದ ಸುಧಾರಣೆಗಳನ್ನು, ಪ್ರಗತಿಯನ್ನು ನಾಶಗೊಳಿಸಿ ಬ್ರಾಹ್ಮಣ ಶ್ರೇಷ್ಠತೆಯ ವರ್ಣಾಶ್ರಮ ಧರ್ಮದ, ಜಾತಿಪದ್ಧತಿಯ, ಸನಾತನ, ಮೂಲಭೂತವಾದಿ, ಹಿಂದೂ ಧರ್ಮವನ್ನು ಪುನರ್‌ಸ್ಥಾಪಿಸಬೇಕು. ಬಾಲ್ಯವಿವಾಹ, ವರದಕ್ಷಿಣೆ, ಸತಿ, ಅಸ್ಪೃಶ್ಯತೆ, ಏಕಪತ್ನಿತ್ವ, ಮಹಿಳೆಗೆ ಆಸ್ತಿಯಲ್ಲಿ ಹಕ್ಕು....... ಇತ್ಯಾದಿ ಕಾನೂನುಗಳು ರದ್ದಾಗಬೇಕು.

(ಸಂಗ್ರಹ: ಸಿ.ಆರ್.ಭಟ್. ಆಧಾರ:ರಾಷ್ಟ್ರೀಯ ಏಕತಾ ಆಂದೋಲನ, 1993, ಧಾರವಾಡ).

ಸಂಯುಕ್ತ ರಂಗಕ್ಕೆ ಬಹುಮತ ನೀಡಿ

ಕಿಸಾನ್ ಸಭಾ ಕರೆ

ದೇಶದ ಜನಸಂಖ್ಯೆಯ ಮೂರನೇ ಎರಡರಷ್ಟಿರುವ ರೈತಾಪಿ ಜನಗಳು ಲೋಕಸಭಾ ಚುನಾವಣೆಗಳಲ್ಲಿ ಸಂಯುಕ್ತ ರಂಗ ಗೆಲ್ಲುವಂತೆ ಮಾಡಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಕರೆ ನೀಡಿದೆ. ಈ ಮೂಲಕ ಕೋಮುವಾದಿ ಹಿಂಸಾಚಾರ ಹಾಗೂ ರೈತರ ಐಕ್ಯತೆಯನ್ನು ಒಡೆಯುವ ಪಕ್ಷವಾದ ಬಿಜೆಪಿ ಸಮಗ್ರ ಸೋಲುಣ್ಣುವಂತಾಗಬೇಕು ಎಂದು ಅದು ಹೇಳಿದೆ. ಅದೇ ರೀತಿ ಜನ-ವಿರೋಧಿ, ಐಎಂಎಫ್-ವಿಶ್ವಬ್ಯಾಂಕ್ ಹೇರಿಕೆಯ ಧೋರಣೆಗಳ ವಿನಾಶಕಾರಿ ಪರಿಣಾಮಗಳಿಂದ ದೇಶವನ್ನು ಉಳಿಸಲು ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕು ಎಂದು ಶ್ರಮಜೀವಿ ರೈತಾಪಿ ಜನಗಳಿಗೆ ಕಿಸಾನ್‌ಸಭಾ ಕರೆ ನೀಡಿದೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಭಾರತೀಯ ರೈತಾಪಿ ವರ್ಗ ವಹಿಸಿದ ಮಹಾನ್ ಸಾಮ್ರಾಜ್ಯಶಾಹಿ-ವಿರೋಧಿ ಪಾತ್ರವನ್ನು ನೆನಪಿಸಿರುವ ಎಐಕೆಎಸ್ ಈಗ ಎಚ್ಚೆತ್ತು ದೇಶದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಚೌಕಟ್ಟನ್ನು ಹಾಗೂ ಧಾಳಿಗೊಳಗಾಗಿರುವ ಅದರ ಆರ್ಥಿಕ ಸಾರ್ವಭೌಮತೆಯನ್ನು ಕಾಪಾಡಿಕೊಳ್ಳಲು ಮುಂದಾಗಬೇಕು ಎಂದು ಹೇಳಿದೆ.

ಫೆಬ್ರವರಿ 5 ರಂದು ನೀಡಿದ ಹೇಳಿಕೆಯಲ್ಲಿ ಎಐಕೆಎಸ್ ಎಡಪಕ್ಷಗಳ ಬಲವನ್ನು ಹೆಚ್ಚಿಸಬೇಕೆಂದೂ ಕರೆ ನೀಡಿದೆ. ಏಕೆಂದರೆ ಸಂಯುಕ್ತ ರಂಗದ ಐಕ್ಯತೆಯನ್ನು ಬೆಸೆದದ್ದು ಈ ಎಡಪಕ್ಷಗಳೇ, ಈ ರೀತಿ ಎಡಪಕ್ಷಗಳ ಶಕ್ತಿ ಹೆಚ್ಚಿದರೆ ಮಾತ್ರವೇ ದೀರ್ಘಕಾಲದಿಂದ ಈಡೇರದೇ ಉಳಿದಿರುವ ತೀವ್ರಗಾಮಿ ಭೂಸುಧಾರಣೆ .ಗಳು, ಕೃಷಿ ಕಾರ್ಮಿಕರ ಸಮಗ್ರ ಶಾಸನ ಇತ್ಯಾದಿಗಳು ಜಾರಿಗೆ ಬರುವಂತಾಗಲು ಸಾಧ್ಯ. ಎಡಪಕ್ಷಗಳು ಮಾತ್ರವೇ ಒಂದು ಪರ್ಯಾಯ ರೈತ-ಪರ ಕೃಷಿ ನೀತಿಗಳನ್ನು ಪ್ರತಿಪಾದಿಸುತ್ತಿದ್ದು ಈ ಮೂಲಕ ಮಾತ್ರವೇ ಬೆಳವಣಿಗೆಯ ಫಲವನ್ನು ರೈತರೂ ಸೇರಿದಂತೆ ಎಲ್ಲಾ ಜನ ವಿಭಾಗಗಳಿಗೆ ನ್ಯಾಯಪೂರ್ಣವಾಗಿ ಹಂಚಲು ಸಾಧ್ಯ ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ.

ಸಣ್ಣ ಮತ್ತು ಅಂಚಿನಲ್ಲಿರುವ ರೈತರ ಗದ್ದೆಗಳ ಉತ್ಪಾದಕತೆಯನ್ನು ಹೆಚ್ಚಿಸಲಾಗಲೀ, ಅವರ ಉತ್ಪನ್ನಗಳಿಗೆ ಹಳ್ಳಿಯೊಳಗೇ ಲಾಭದಾಯಕ ಮಾರುಕಟ್ಟೆ ಒದಗಿಸಲಾಗಲೀ ತ್ವರಿತ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಸೂಚಿಸಿರುವುದು ಎಡಪಕ್ಷಗಳು ಮಾತ್ರವೇ. ಸಣ್ಣ ಪ್ರಮಾಣದ ಹಾಗೂ ಗ್ರಾಮೀಣ ಬಡವರೇ ನಡೆಸುವ ಕೃಷಿ ಆಧಾರಿತ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಗ್ರಾಮೀಣ ನಿರುದ್ಯೋಗವನ್ನು ನಿವಾರಿಸುವ ವಿಶೇಷ ಕಾರ್ಯಸಾಧ್ಯ ಯೋಜನೆಗಳನ್ನು ಸೂಚಿಸಿರುವುದೂ ಎಡಪಕ್ಷಗಳು ಮಾತ್ರವೇ.

ಆದ್ದರಿಂದಲೇ ಸಂಯುಕ್ತರಂಗವನ್ನು ಬಹುಮತದಿಂದ ಆರಿಸುವುದು, ಸಂಸತ್ತಿನಲ್ಲಿ ಎಡಪಕ್ಷಗಳ ಪ್ರಾತಿನಿಧ್ಯ ಹೆಚ್ಚುವಂತೆ ಮಾಡುವುದು ಈಗ ಅತ್ಯಾವಶ್ಯಕ. ಈ ಮೂಲಕ ರೈತರ ಮತ್ತು ಇತರ ಶ್ರಮಜೀವಿ ವಿಭಾಗಗಳ ತಕ್ಷಣದ ಹಾಗೂ ದೀರ್ಘಕಾಲದ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಸಾಧ್ಯ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ.

ಕೋಮುವಾದವನ್ನು ಖಂಡಿಸುವ ಗಾಂಧೀಜಿಯ ಮೂಲದನಿ ಇರುವ ಸಿಪಿಐ(ಎಂ) ವಿಡಿಯೋ ಕ್ಯಾಸೆಟ್

ಫೆಬ್ರವರಿ 7 ರಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಮಯೆಚೂರಿಯವರು ಚುನಾವಣಾ ಪ್ರಚಾರಕ್ಕೆಂದು ತಯಾರಿಸಿದ ವಿಡಿಯೋ ಕ್ಯಾಸೆಟ್ಟನ್ನು ಬಿಡುಗಡೆ ಮಾಡಿದರು.

ಹತ್ತು ನಿಮಿಷಗಳ ಈ ಚಿತ್ರ ಕಾಂಗ್ರೆಸ್ಸಿನ ವಿನಾಶಕಾರಿ ನೀತಿಗಳ ಚಿತ್ರಣದೊಂದಿಗೆ ಆರಂಭವಾಗುತ್ತದೆ. ದೇಶವನ್ನು ನಾಲ್ಕು ದಶಕಗಳ ಆಳ್ವಿಕೆಯಲ್ಲಿ ವಿನಾಶದ ಅಂಚಿಗೊಯ್ದ ಚಿತ್ರಣದ ನಂತರ ಬಿಜೆಪಿಯ ಬಗ್ಗೆ ಹೇಳುತ್ತಾ ಇವರು ಹಿಟ್ಲರನ ಭಾರತೀಯ ಅನುಯಾಯಿಗಳು ಎನ್ನಲಾಗಿದೆ. ಆ ಪಕ್ಷದ ಮುಖವಾಡ ಮತ್ತು ನಿಜವಾದ ಮುಖದತ್ತ ಗಮನ ಕೇಂದ್ರೀಕರಿಸುತ್ತಾ ಈ ಚಿತ್ರ ಕೋಮುವಾದಿ ಶಕ್ತಿಗಳ ದುಷ್ಟ ಆಟದತ್ತ ಜನರ ಗಮನ ಸೆಳೆಯುತ್ತದೆ. ಈ ಚಿತ್ರದ ಒಂದು ವಿಶೇಷತೆಯೆಂದರೆ ಕೋಮುವಾದವನ್ನು ಖಂಡಿಸುವ ಮಹಾತ್ಮ ಗಾಂಧಿಯವರ ಮೂಲದನಿಯ ಬಳಕೆ. ಅವರ ಹತ್ಯೆಯ 50ನೇ ವಾರ್ಷಿಕದ ಸಂದರ್ಭದಲ್ಲಿ ಅವರ ಹತ್ಯೆಗೆ ಕಾರಣವಾದ ಕೋಮುವಾದಿ ಶಕ್ತಿಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ಚಿತ್ರ ಹೇಳುತ್ತದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸುರವರ ಭಾಷಣಗಳೂ ಈ ಚಿತ್ರದಲ್ಲಿವೆ. ಸಂಯುಕ್ತ ರಂಗಕ್ಕೆ ಬಹುಮತ ನೀಡಿ ಎಂದು ಕರೆ ನೀಡುವ ಈ ಇಬ್ಬರು ಮುಖಂಡರ ಭಾಷಣಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ಸಿನ ಸ್ಥಿರತೆಯ ದಾವೆಗಳನ್ನು ಪರಿಹಾಸ ಮಾಡುತ್ತಾ ಇವರು ಕೋಮುವಾದದ ಹಾಗೂ ಭ್ರಷ್ಟಾಚಾರದ ಸ್ಥಿರತೆಯನ್ನಷ್ಟೇ ಕೊಡಬಲ್ಲರು ಎನ್ನಲಾಗಿದೆ.

(ಐಎನ್‌ಎನ್)

ಕೋಲಾರ ಕ್ಷೇತ್ರದಿಂದ

ಪುಟ 3 ರಿಂದ

ಕಾಂಗ್ರೆಸ್ಸಿನ 45 ವರ್ಷಗಳ ಅಧಿಕಾರ ದಾಹದ ಬಗ್ಗೆ ವಿವರಿಸುವಾಗ ಬಿಜೆಪಿಯವರು ಹಾಗೂ ಬಿಜೆಪಿಯ ದಿಢೀರ್ 'ಬೆಳವಣಿಗೆ' ಕುರಿತು ವಿವರಿಸುವಾಗ ಕಾಂಗ್ರೆಸ್‌ನವರು ಖುಷಿ ಪಡುವುದಂತೂ ಸರ್ವೆ ಸಾಮಾನ್ಯವಾಗಿತ್ತು. ಮಾಸ್ತಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಜನತಾದಳದವರೇ ಮೈಕು ವೇದಿಕೆ ಕೊಟ್ಟರೆ ಕಾಂಗ್ರೆ ಮತ್ತು ಬಿ.ಜೆ.ಪಿ. ಜನರೆ ಜನ ಸೇರಿಸಿ ಸಿ.ಪಿ.ಐ.(ಎಂ)ಸಭೆ ಯಶಸ್ವಿಗೊಳಿಸಿದ್ದಾರೆ. ದೊಡ್ಡ ಸಂತೆಯಲ್ಲಿ ಪ್ರಚಾರ ಭಾಷಣ ಮಾಡುವಾಗ ಬಿ.ಜೆ.ಪಿ.ಯವರು ಹಲ್ಲೆ ನಡೆಸಿದಾಗ ಜನತೆ ಅವರನ್ನೇ ಅಲ್ಲಿಂದ ಓಡಿಸಿದರು. ನಂತರ ತೊಂದರೆ ಕೊಡುವುದನ್ನೇ ಬಿಡಬೇಕಾಯಿತು. ಇಲ್ಲಿ ಸಿ.ಪಿ.ಐ.(ಎಂ)ಗೆ ಸಾವಿರಾರು ಮತ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆ ಕಾರ್ಯಕರ್ತರಿಗೆ.

ಕೆ.ಜಿ.ಎಫ್.ನಲ್ಲಿ ಸುರ್ಜಿತ್

ಸಿ.ಪಿ.ಐ.(ಎಂ) ಪರವಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್‌ರವರು ಕೆ.ಜಿ.ಎಫ್.ನಲ್ಲಿ ಸಾವಿರಾರು ಜನ ಭಾಗವಹಿಸಿದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡು ದೇಶದ ರಾಜಕೀಯದಲ್ಲಿ ಸಂಯುಕ್ತ ರಂಗದ ಮಹತ್ವ ಹಾಗೂ ಎಡ ಪಕ್ಷಗಳ ಪಾತ್ರ ಕುರಿತು ವಿವರಿಸಿ ಕರ್ನಾಟಕದ ಜನತೆಯಲ್ಲಿ ಸಂಯುಕ್ತ ರಂಗವನ್ನು ಆರಿಸುವಂತೆ ಹಾಗೂ ಕೋಲಾರದಲ್ಲಿ ಸಿ.ಪಿ.ಐ.(ಎಂ)ಗೆ ಮತ ನೀಡುವಂತೆ ಕೇಳಿದರು. ಚಿನ್ನದ ಗಣಿ ಮತ್ತು ಬಿ.ಇ.ಎಂ.ಎಲ್. ಕಾರ್ಖಾನೆಗಳ ಬಗ್ಗೆ ಸಿ.ಪಿ.ಐ.(ಎಂ) ನಿಲುವನ್ನು ಸ್ಪಷ್ಟಪಡಿಸಿ ನಮ್ಮ ಪಕ್ಷ ಯಾವಾಗಲೂ ದುಡಿಯುವ ಜನತೆಯ ಪರವಾಗಿದೆ ಎಂದು ಘೋಷಿಸಿದಾಗ ಕೆ.ಜಿ.ಎಫ್. ಜನತೆ ಹರ್ಷಗೊಂಡರು.

ಸಿ.ಐ.ಟಿ.ಯು ಮುಖಂಡರಾದ ಡಬ್ಲ್ಯೂ. ಆರ್. ವರದರಾಜನ್ ನಾಲ್ಕು ಪ್ರದೇಶಗಳಲ್ಲಿ ಬಹಿರಂಗ ಸಭೆ ನಡೆಸಿದ್ದಾರೆ. ಮಹಿಳಾ ಸಂಘಟನೆಯ ರಾಷ್ಟ್ರ ಮುಖಂಡರಾದ ವಾಸುಕಿ ಹಲವಾರು ಮಹಿಳಾ ಸಭೆಗಳನ್ನು ನಡೆಸಿ, ಪಕ್ಷವು ಮಹಿಳಾ ಸಮಾನತೆಗಾಗಿ ಮಾಡುತ್ತಿರುವ ನೈಜ ಹೋರಾಟ ವಿವರಿಸಿ ಕುಡುಗೋಲು ಸುತ್ತಿಗೆ ನಕ್ಷತ್ರಕ್ಕೆ ಮತ ಕೇಳಿದ್ದಾರೆ. ಇದು ಪಕ್ಷದ ಪ್ರಭಾವವನ್ನು ಮತ್ತಷ್ಟು ಹೆಚ್ಚಿಸಿದೆ. ಕೆ.ಜಿ.ಎಫ್.ನಲ್ಲಿ ನೆಲೆಯೂರಲು ಯತ್ನಿಸುತ್ತಿರುವ ಬಿ.ಜೆ.ಪಿ.ಗೆ ಆಘಾತವಾಗುವಂತೆ ಅಣ್ಣಾ ಡಿ.ಎಂ.ಕೆ.ಯ ಮಾಜಿ ಶಾಸಕ ಭಕ್ತವತ್ಸಲಂ ಕಾಂಗ್ರೆ ಸೇರಿದ್ದಾರೆ.

ಸಾರ್ಥಕ ಪ್ರಚಾರ

ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿಯೂ ರಾಜ್ಯ ಮುಖಂಡರ ಮಾರ್ಗದರ್ಶನದಲ್ಲಿ ಸುಮಾರು 300 ಕ್ಕೂ ಹೆಚ್ಚು ಕಾರ್ಯಕರ್ತರು ಹಗಲಿರುಳು ಎನ್ನದೆ ಲೋಕಸಭಾ ಕ್ಷೇತ್ರದಲ್ಲಿ ಪ್ರತಿ ಮನೆಗೆ ಕರಪತ್ರ ಹಂಚಿದ್ದಾರೆ. ಕಲಾತಂಡ 300ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಹಾಡುಗಳ ಮುಖಾಂತರ, ನಾಟಕದ ಮುಖಾಂತರ ಕೆಂಬಾವುಟವನ್ನು ಎತ್ತಿಹಿಡಿದಿದ್ದಾರೆ.

ಕೆ.ಜಿ.ಎಫ್.ನಲ್ಲಿ ವಿ.ಜಿ.ಕೆ ನಾಯರ್, ಮಿನಾಕ್ಷಿಸುಂದರಂ, ಟಿ.ಎಸ್ ಮಣಿ, ಜಿ.ಅರ್ಜುನನ್ ನೇತೃತ್ವದಲ್ಲಿ 40 ಕಾರ್ಯಕರ್ತರು ಸಭೆ, ಮೆರವಣಿಗೆ, ಸೈಕಲ್ ರ್‍ಯಾಲಿ ನಡೆಸಿದ್ದಾರೆ. ಬಂಗಾರಪೇಟೆಯಲ್ಲಿ ವರಲಕ್ಷ್ಮಿ ,ಉಮೇಶ್ ಹಾಗೂ ಶ್ರೀನಿವಾಸ್.ಪಿ ನೇತೃತ್ವದಲ್ಲಿ 31 ಕಾರ್ಯಕರ್ತರು ಬೇತಮಂಗಲ ಕ್ಷೇತ್ರದಲ್ಲಿ ಹಳ್ಳಿಹಳ್ಳಿಗಳನ್ನು ತಲುಪಿದ್ದು ಬಿ.ಇ.ಎಂ.ಎಲ್ ಕಾರ್ಮಿಕರು ಬಿ.ಇ.ಎಂ.ಎಲ್ ನಗರದಲ್ಲಿ ಪ್ರಚಾರ ನಡೆಸಿ ಮತ ನೀಡುವಂತೆ ವಿನಂತಿಸಿದ್ದಾರೆ. ಸೂರಿ ಭಾಗವಹಿಸಿದ ಬಹಿರಂಗ ಸಭೆ ನಡೆದಿದೆ.

ಮುಳುಬಾಗಲುವಿನಲ್ಲಿ ಜಗನ್ನಾಥ್.ಪಿ, ಶಾಂತರಾವ್ ಹಾಗೂ ಸ್ಥಳೀಯ ಮುಖಂಡರುಗಳನ್ನೊಳಗೊಂಡ 40 ಕಾರ್ಯಕರ್ತರ ಪ್ರಚಾರವಂತೂ ವಿರೋಧ ಪಕ್ಷಗಳಿಗೆ ನಡುಕವನ್ನು ಉಂಟುಮಾಡಿದೆ. ಇಲ್ಲಿಯ ಬಹಿರಂಗ ಸಭೆಯಲ್ಲಿ ಕಲಾತಂಡಗಳ ಪ್ರದರ್ಶನ ನೀಡಿದೆ. ಚಿಂತಾಮಣಿಯಲ್ಲಿಯೂ 50 ಕಾರ್ಯಕರ್ತರ ತಂಡವು ಪ್ರಚಾರ ನಡೆಸಿ ಜನತೆಯ ಅಭಿಮಾನ ಗಳಿಸಿದೆ. ಹೀಗೆ ಒಟ್ಟು 8 ವಿಧಾನಸಭಾ ಕ್ಷೇತ್ರದಲ್ಲಿಯೂ ವ್ಯವಸ್ಥಿತವಾಗಿ ಪ್ರಚಾರ ನಡೆಸಿ, ಎಲ್ಲಾ ಪಕ್ಷಗಳ ಕಾರು, ವ್ಯಾನ್, ಬ್ಯಾನರ್ ಬಾವುಟಗಳ ಅರ್ಭಟದ ನಡುವೆ ತಣ್ಣಗೆ ಮತದಾರರ ಒಳ ಹೊಕ್ಕು ವಿಚಾರದ ಬಿಸಿ ಏರಿಸಿರುವುದಂತೂ ಸತ್ಯ. ಕರ್ನಾಟಕದಲ್ಲಿ ಎಲ್ಲಿಯಾದರೂ ವಿಷಯಾಧಾರಿತ ರಾಜಕೀಯ ಪ್ರಚಾರ ನಡೆಸಿದ್ದರೆ ಅದು ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಮಾತ್ರ ಎಂದು ಘಂಟಾ ಘೋಷವಾಗಿ ಹೇಳಬಹುದಾಗಿದೆ. ಸಿಪಿಐ(ಎಂ)ನ ಪ್ರಚಾರವಂತೂ ಕಾಂಗ್ರೆ ಸೋನಿಯಾ ಜಪದಿಂದ ಹೊರಬಂದು ಕೋಮುವಾದದ ವಿರುದ್ಧ ಜಿಲ್ಲೆಯ ವಿದ್ಯುತ್ ಸಮಸ್ಯೆ ವಿರುದ್ಧ ಮಾತನಾಡಿ ಚಿನ್ನದ ಗಣಿಯ ಉಳಿವಿಗಾಗಿ ಹೋರಾಟ ನಡೆಸುವ ಭರವಸೆ ನೀಡಬೇಕಾಯಿತು.

ಬಿ.ಜೆ.ಪಿಯವರು ಕೇವಲ ವಾಜಪೇಯಿಯನ್ನು ಪ್ರಧಾನಿ ಮಾಡುವ ಒಂದಂಶದ ಕಾರ್ಯಕ್ರಮದ ಜೊತೆಗೆ, ಭ್ರಷ್ಟಾಚಾರದ ವಿರುದ್ಧ ಒಲ್ಲದ ಮನಸ್ಸಿನಿಂದಲೇ ಮಾತನಾಡಬೇಕಾಯಿತು. ಪ್ರಾರಂಭದಲ್ಲಿ ವಾಜಪೇಯಿ ಆರ್.ಎಸ್.ಎಸ್. ವಿರುದ್ಧ ಟೀಕೆ ಮಾಡಬೇಡಿ ಎಂದು ಬೆದರಿಸುತ್ತಿದ್ದ ಬಿಜೆಪಿ ಕೊನೆಗೆ ತಲೆ ತಗ್ಗಿಸುವಂತೆ ಆಗಿದೆ. ಅಲ್ಲದೆ ಕೋಲಾರದಲ್ಲಿ ಗೆದ್ದೇ ಬಿಟ್ಟೆವು ಎಂದು ವಾಜಪೇಯಿ ಅಲೆಯಲ್ಲಿ ತೇಲುತಿದ್ದ ಬಿಜೆಪಿಗೆ ಹಿನ್ನೆಡೆ ಉಂಟಾದುದಂತೂ ನಿಜ. ಮಾಲೂರಿನವರಾದ ಬಿಜೆಪಿಯ ಅಭ್ಯರ್ಥಿ ಸ್ಥಳೀಯರೆಂಬ ಅಭಿಮಾನ ದೂರ ಸರಿದಿರುವುದು ಗೋಚರವಾಗತೊಡಗಿದೆ. ಜೊತೆಗೆ ಸಿಪಿಐ(ಎಂ)ನ ಪ್ರಚಾರ ಹಾಗೂ ಸ್ಪರ್ಧೆಯಿಂದ, ವಿಚಾರದಿಂದ ಬಿಜೆಪಿ ಅಬ್ಬರ ಅಡಗಿದೆ. ದಳವಂತು ದಂಗು ಬಡಿದಂತೆ ಸ್ತಬ್ದಗೊಂಡಿದೆ.

ಈ ಚುನಾವಣೆಯಿಂದಾಗಿ ಸಿಪಿಐ(ಎಂ) ಕೋಲಾರ ಜನತೆಯ ಭವಿಷ್ಯದ ಆಶಾ ಕಿರಣವಾಗಿ ಹೊರಹೊಮ್ಮುವತ್ತ ದಾಪುಗಾಲು ಹಾಕಿದೆ.

ಬಿಜೆಪಿಯ ಅಬ್ಬರ ಮಾಯ

ಪುಟ ಒಂದರಿಂದ

ಎಂದು ನೀವೇಕೆ ಆಗ್ರಹ ಪಡಿಸಬೇಕು ಎಂದು ನನ್ನನ್ನು ಕೇಳುತ್ತಾರೆ. ನಿಜ ಅಧಿಕಾರಕ್ಕೆ ಬರಲು ಹಕ್ಕು ಅವರಿಗಿದೆ. ಆದರೆ ಅವರ ತತ್ವಗಳ ಟೀಕೆ ಮಾಡುವ ಹಕ್ಕು ನಮಗೂ ಇದೆ. ಅವರು ಅಧಿಕಾರಕ್ಕೆ ಬಂದರೆ ದೇಶದ ಐಕ್ಯತೆಗೆ ಒದಗುವ ಅಪಾಯದ ಬಗ್ಗೆ ಜನರನ್ನು ಎಚ್ಚರಿಸುವ ಹಕ್ಕು ಕರ್ತವ್ಯ ನಮಗಿದೆ. ಜನ ಅದನ್ನು ಒಪ್ಪುತ್ತಾರೋ, ಬಿಡುತ್ತಾರೋ ಎಂಬುದು ಅವರಿಗೆ ಸೇರಿದ್ದು" ಎಂದ ಸುರ್ಜಿತ್ ಜನಗಳಲ್ಲಿ ರಾಷ್ಟ್ರೀಯ ಆಂದೋಲನದ ಕಾಲದಲ್ಲಿ ಬೆಳೆದಂತಹ ಜಾತ್ಯಾತೀತ ಮನೋಭಾವ ಈಗಲೂ ಇದೆ, ಅದನ್ನು ಜಾಗೃತಗೊಳಿಸಬೇಕಷ್ಟೆ ಎಂದರು. ಇದಕ್ಕೆ ಉದಾಹರಣೆಯಾಗಿ 1993ರ ಘಟನೆಗಳನ್ನು ನೆನಪಿದರು. ಬಾಬ್ರಿ ಮಸೀದಿ ಧ್ವಂಸದಿಂದ ದುಷ್ಟ ಶಕ್ತಿಗಳಲ್ಲಿ ಹೊಸ ಉತ್ಸಾಹ ತುಂಬಿದ್ದ ಕಾಲ ಅದು. ಆದರೆ ಬಿ.ಜೆ.ಪಿ. ನೇತೃತ್ವದ ನಾಲ್ಕು ಸರಕಾರಗಳನ್ನು ವಜಾ ಮಾಡಿ ನಡೆಸಿದ ಮರು ಚುನಾವಣೆಗಳಲ್ಲಿ ಆ ಪಕ್ಷ ಈ ನಾಲ್ಕೂ ರಾಜ್ಯಗಳಲ್ಲಿ ಸೋಲುಂಡಿತು ಎಂಬುದನ್ನು ಅವರು ಜ್ಞಾಪಿಸಿದರು.

ಸೋನಿಯಾ ಗಾಂಧಿಯವರ ಸಭೆಗಳಲ್ಲಿ ನೆರೆಯುತ್ತಿರುವ ಜನರನ್ನು ನೋಡಿದರೆ ಈಗಲೂ ಕಾಂಗ್ರೆಸ್ಸಿಗೆ ಸುಮಾರು ಶೇ. 25 ಜನ ಬೆಂಬಲವಿದೆ ಎಂದು ಅನಿಸುತ್ತದೆ. ಆದರೆ ಕಾಂಗ್ರೆಸ್ಸಿನ ಈ ಬೆಂಬಲಿಗರು ಕೋಮುವಾದಿ ರಾಜಕೀಯದ ದಾರಿ ಹಿಡಿಯಬಾರದೆಂದೂ ಬಯಸುತ್ತಾರೆ ಎಂದು ಇದೀಗ ತಿಳಿದು ಬರುತ್ತದೆ ಎಂದು ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ವಾರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯಲ್ಲಿ ಬರೆದ ಲೇಖನದಲ್ಲಿ ಸುರ್ಜಿತ್ ಹೇಳಿದ್ದಾರೆ.

ಸಂಯುಕ್ತ ರಂಗಕ್ಕೇ ಮತ................


ಪುಟ 1 ರಿಂದ

ಮತ ಹಾಕಬೇಕು.

ಪೂರ್ತಿ 5 ವರ್ಷ ಸಂಯುಕ್ತ ರಂಗ ಸರಕಾರವು ಆಡಳಿತ ಮಾಡಿದರೆ, ತಮ್ಮ ಭವಿಷ್ಯ 'ಶೂನ್ಯ' ಎಂದು ಅಂದಾಜು ಮಾಡಿ, ಕ್ಷುಲ್ಲಕ ಕಾರಣಗಳನ್ನು ಮುಂದೊಡ್ಡಿ ಕಾಂಗ್ರೆಸ್ ತಮ್ಮ ಬೆಂಬಲವನ್ನು ಸಂಯುಕ್ತ ರಂಗದಿಂದ ಹಿಂತೆಗೆದುಕೊಂಡರು ಎಂಬುದನ್ನು ಇಲ್ಲಿ ಸ್ಮರಿಸಿ, ಸಂಯುಕ್ತ ರಂಗ ಸರಕಾರವು ಕನಿಷ್ಟ ಕಾರ್ಯಕ್ರಮದ ಮೂಲಕ ದೇಶದ ಜನತೆಗೆ ಕೊಟ್ಟ ಜನಪರ ಕಾರ್ಯಕ್ರಮಗಳನ್ನು ಪೂರ್ತಿಗೊಳಿಸಲು ಪುನಃ ಮತದಾರರು ಸಂಯುಕ್ತ ರಂಗದ ಪಕ್ಷಗಳಿಗೆ ಮತವಿಯಬೇಕೆಂದು ನಮ್ಮ ವಿನಂತಿ.

ಸಂಯುಕ್ತ ರಂಗವನ್ನು ರೂಪಿಸುವುದರಲ್ಲಿ, ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ತಯಾರಿಸುವುದರಲ್ಲಿ ಹಾಗೂ ಅದರಲ್ಲಿರುವ ಜನಪರ ನೀತಿಗಳ ಜಾರಿಗಾಗಿ ಲೋಕಸಭೆಯ ಒಳಗೂ, ಲೋಕಸಭೆಯ ಹೊರಗೂ ಹೋರಾಟ ಮಾಡುತ್ತಾ ಬಂದ ಸಿಪಿಐ(ಎಂ) ಪಕ್ಷಕ್ಕೆ ಮತದಾರರು ಬೆಂಬಲ ಕೊಡಬೇಕೆಂದು ವಿನಂತಿ.

ಆದ ಕಾರಣ, ಕರ್ನಾಟಕ ರಾಜ್ಯದಲ್ಲಿ, ಪಕ್ಷದ ವತಿಯಿಂದ ಲೋಕಸಭಾ ಚುನಾವಣೆಗೆ ನಿಲ್ಲಿಸಿದ ಸಿಪಿಐ(ಎಂ) ಪಕ್ಷದ ಏಕೈಕ ಅಭ್ಯರ್ಥಿ ಕಾಂ|| ನಾರಾಯಣ ಸ್ವಾಮಿಯವರಿಗೆ (ಕೋಲಾರ ಮೀಸಲು) ಮತದಾರರು ಮತವೀಯಬೇಕೆಂದು ಪಕ್ಷವು ಕಳಕಳಿಯಿಂದ ವಿನಂತಿಸಿಕೊಳ್ಳುತ್ತದೆ.





KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27